ಜನಶಕ್ತಿ

ಕನ್ನಡ ವಾರಪತ್ರಿಕೆ




Blog : janashakthi.wordpress.com e-mail : js_weekly@yahoo.com


ಸಂಪುಟ 7 ಸಂಚಿಕೆ 51
ಡಿಸೆಂಬರ್ 22, 2013

ಪುಟ 16 ರೂ. 10/-

ಐದು ರಾಜ್ಯಗಳ ಚುನಾವಣೆ ಪ್ರಬಲ ಕಾಂಗ್ರೆಸ್ ವಿರೋಧಿ ಅಲೆ







ಅನಿಷ್ಟ ಮಡೆಸ್ನಾನ-ಪಂಕ್ತಿಬೇಧ: ರಾಜ್ಯವ್ಯಾಪಿ ಪ್ರತಿರೋಧ




ಜನರ ಬದುಕು-ಪಶ್ಚಿಮ ಘಟ್ಟ ಉಳಿಸಿ, ಕಸ್ತೂರಿರಂಗನ್ ವರದಿ ತಿರಸ್ಕರಿಸಿ



ನಿರರ್ಥಕವಾದ ಬೆಳಗಾವಿ ಅಧಿವೇಶನ

ಭಾರತ ಕಳೆದುಕೊಂಡ ಜ್ಞಾನ ಸಂಪತ್ತು

ಭಾಗ - 6



ಚೋಮನ ದುಡಿ

ಜಿ. ಎನ್. ನಾಗರಾಜ್

"ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ'
ಅಂಗ್ಯೆಯಗಲ ಮೋಡವಾಗಿ,
ಭೂಮಿತೂಕದ ಗಾಳಿ ಬೀಸೀ
ಗುಡುಗಿ ಗೂಡಾಗಿ ಜಳ ಜಳ

ಆರು ಸಾವಿರ ಒಡ್ಡರ ಕರೆಸಿ
ಮೂರು ಸಾವಿರ ಗುದ್ದಲಿ ತರಿಸಿ
ಕಲ್ಲು ಕಲ್ಲಿಗೂ ಮಣ್ಣನು
ಸುರಿಸಯ್ಯೋ
ನಾ ನಿಲ್ಲುವಳಲ್ಲ"

ಹೀಗೆ ಜಾನಪದ ಗೀತೆ ಸಾಗಿ-ತ್ತು. ನನ್ನ ಮನಸ್ಸು ಹಿರೇಕೆರೂರು-ಶಿಕಾರಿಪುರ ತಾಲ್ಲೂಕುಗಳ ಗಡಿಯಲ್ಲಿರುವ ಮದಗದ ಮಹಾ ಕೆರೆಯನ್ನು ಕಟ್ಟಿದ ಆ ಆರು ಸಾವಿರ ವಡರನ್ನು ನೆನೆಯುತ್ತಿತು. 'ನಾ



ಚೆನ್ನಗಿರಿ ಶಾಂತಿಸಾಗರದ ದೃಶ್ಯ


ನಿಲ್ಲುವಳಲ್ಲ' ಎಂದು ಹಟ ಹಿಡಿದ ಗಂಗೆಯನ್ನು ನಿಲ್ಲಿಸಿದ ಭಗೀರಥರ ಬಗ್ಗೆ ನೆನೆಯುತ್ತಿತ್ತು. 1850 ಅಡಿ ಉದ್ದದ ಏರಿಯ ಬುಡದಲ್ಲಿ 800 ಅಡಿ ದಪ್ಪ ಇರುವ 100 ಅಡಿ ಎತ್ತರ ಇರುವ ಈ ಅಣೆಯನ್ನು ಕಟ್ಟಿ ಕುಮುದ್ವತಿ ನದಿಯನ್ನು ನಿಲ್ಲಿಸಿದ ಆ ಇಂಜಿನಿಯರ್‌ಗಳ ಅಗಾಧ ಬುದ್ಧಿಮತ್ತೆಗೆ ನಮೋ ನಮಃ ಎನ್ನುತ್ತಿತ್ತು. ಕೆಳದಿ ಸದಾಶಿವ ನಾಯಕನ ಕಾಲದಲ್ಲಿ (1540-1565) ಬಂಕಾಪುರದ ಮಾದಣ್ಣ ಒಡೆಯರು ಕಟ್ಟಿಸಿದರೆಂಬುದು ಶಾಸನಗಳಲ್ಲಿ ದಾಖಲಾದರೂ 20 ಟನ್ನುಗಳ ಭಾರದ 16 ಕಂಬಗಳ ತೂಬನ್ನು ಕಟ್ಟಿದ, 10 ಲಕ್ಷ ಘನ ಅಡಿಗಳಷ್ಟು ಕಟ್ಟಡ ಕೆಲಸ ತೆಗೆದುಕೊಂಡಿರುವ ಆ ಕೆರೆಯ ಶಿಲ್ಪಿಗಳ ವಿವರವಾಗಲೀ, ಆ ನಿರ್ಮಾಣದ ವಿವರವಾಗಲೀ ದೊರೆಯದೆ ನಮ್ಮ ದೇಶಕ್ಕೆ ಎಂತಹ ಅನ್ಯಾಯವಾಗಿದೆ ಎಂಬುದು ನನ್ನನ್ನು ಪದೇ ಪದೇ ಕಾಡುತ್ತಿರುವ ವಿಷಯವಾಗಿದೆ. ಸುಮ್ಮನೇ ಕಣ್ಣು ಮುಚ್ಚಿ, 6000 ವಡ್ಡರು ವಿವಿಧ ರೀತಿಯ ಕೆರೆ ಕಾಮಗಾರಿಯನ್ನು ಮೇಸ್ತ್ರಿಗಳ ಉಸ್ತುವಾರಿಯಲ್ಲಿ, ವಚನಕಾರ ಸೊನ್ನಲಿಗೆ ಸಿದ್ಧರಾಮನಂತಹವರ ನಾಯಕತ್ವದಲ್ಲಿ ನಿರ್ವಹಿಸುತ್ತಿರುವ ದೃಶ್ಯವನ್ನು ಕಣ್ಣ ಮುಂದೆ ತಂದುಕೊಳ್ಳಿ, ಎಂತಹ ಅಸಾಮಾನ್ಯ ದೃಶ್ಯ ಅದು.

ಹಾಗೆಯೇ ಚೆನ್ನಗಿರಿ ತಾಲ್ಲೂಕಿನ ಸೂಳೆಕೆರೆ ಎಂದು ಹೆಸರಾಗಿರುವ ಶಾಂತಿ ಸಾಗರ. ಇಂದಿಗೂ 7000 ಎಕರೆಗಿಂತ ಹೆಚ್ಚು ಪ್ರದೇಶಕ್ಕೆ ನೀರುಣಿಸುತ್ತಿರುವ ದಕ್ಷಿಣ ಭಾರತದಲ್ಲಿಯೇ ದೊಡ್ಡ ಕೆರೆಯೆಂದು ಹೆಸರಾದ ಶಾಂತಿ ಸಾಗರ. ಇಂದಿಗೂ ಕೆ.ಜಿ.ಎಫ್. ಗೆ ಕುಡಿಯುವ ನೀರಿನ ಆಸರೆಯಾಗಿರುವ ಬೇತಮಂಗಲ ಎಂದು ಈಗ ಕರೆಯಲ್ಪಡುತ್ತಿರುವ ವಿಜಯಾದಿತ್ಯಮಂಗಲವೆಂಬ ಸು. 950 ರ ಕಾಲದ ಕೆರೆ.

ಬ್ರಿಟಿಷ್ ಇಂಜಿನಿಯರುಗಳು ಭಯ ಪಟ್ಟರು !

ಕರ್ನಾಟಕದಲ್ಲಿ ಸುಮಾರು 30,000 ಕೆರೆಗಳಿವೆಯೆಂದು ಲೆಕ್ಕ. ಸು.350 ರಿಂದ ಆರಂಭವಾಗಿ ಸಾಲು ಸಾಲಾಗಿ ಇಡೀ ನದೀ ಜಾಲಗಳನ್ನೆಲ್ಲಾ ಆವರಿಸಿ ಇನ್ನು ಕೆರೆಯನ್ನು ಕಟ್ಟಿಸಲು ಜಾಗವಿಲ್ಲ ಎಂದು ಬ್ರಿಟಿಷ್ ಇಂಜಿನಿಯರುಗಳು ಉದ್ಗಾರ ತೆಗೆಯುವಷ್ಟು ಕೆರೆಗಳನ್ನು ಕಟ್ಟಲಾಗಿದೆ. ಇಂದಿನ ಕಾವೇರಿ ವಿವಾದದ ಮೂಲ ಈ ಕೆರೆಗಳ ಜಾಲದ ಬಗ್ಗೆ ಬ್ರಿಟಿಷ್ ಇಂಜಿನಿಯರುಗಳಿಗೆ ಉಂಟಾದ ಭಯ ಎಂಬುದು ಗೊತ್ತೇ ! 19 ನೆಯ ಶತಮಾನದ ಕೊನೆಯಲ್ಲಿಯೇ ಅವರು ಇನ್ನು ಮೈಸೂರು ಪ್ರಾಂತ್ಯದಲ್ಲಿ ಕೆರೆಗಳನ್ನು ಕಟ್ಟಬಾರದು. ಅದು ಅಂದಿಗೆ ಬ್ರಿಟಿಷರ ಆಡಳಿತದಲ್ಲಿದ್ದ ಮದ್ರಾಸು ಪ್ರಾಂತ್ಯದಲ್ಲಿ ಕಾವೇರಿ ನದಿ ಹರಿಯದಂತೆ ಬತ್ತಿಸಿಬಿಡುವಷ್ಟು ವ್ಯಾಪಕವಾಗಿದೆ ಎಂದು ಒಪ್ಪಂದವೊಂದನ್ನು ಅಂದಿನ ಮಹಾರಾಜರ ಮೇಲೆ ಹೇರಿದರು.

ಹೀಗೆ ಆಧುನಿಕ ಇಂಜಿನಿಯರ್‌ಗಳು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದ, ಅವರಿಗೆ ಭಯವನ್ನುಂಟು ಮಾಡಿದ ಈ ಕೆರೆ ನಿರ್ಮಾಣದ



ಹೊಯ್ಸಳರ ಕಾಲದ ಕಲ್ಯಾಣಿ

ಬಗ್ಗೆ ಅದರ ತಂತ್ರ ಜ್ಞಾನದ ಬಗ್ಗೆ ಇಂದು ನಮಗೆ ಏನೂ ತಿಳಿದಿಲ್ಲ. ಇಂದಿನ ನಮ್ಮ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲಿಕೆಯ ಓನಾಮ ಈ ಕೆರೆಗಳ ದರ್ಶನದಿಂದ, ಅವುಗಳ ಪ್ರವಾಸದಿಂದ ಆರಂಭವಾಗಬೇಕಿತ್ತು. ಈ ಕೆರೆಗಳನ್ನು ಕಟ್ಟುವುದನ್ನು ಸು. ಕ್ರಿ. ಶ. 350 ರಷ್ಟು ಹಿಂದೆ-ಯೇ ಹೇಗೆ ಸಂಶೋಧನೆ ಮಾಡಿದರೆಂಬುದು ನಮ್ಮ ಪಠ್ಯ ಪುಸ್ತಕವಾಗಬೇಕಾಗಿತ್ತು. ಆದರೆ ಬ್ರಿಟಿಷ್, ಅಮೇರಿಕಗಳಿಂದ ಎರವಲು ತಂದ ಇಂಗ್ಲಿಷ್ ಪುಸ್ತಕಗಳೇ ನಮ್ಮ ಇಂಜಿನಿಯರಿಂಗ್ ಕಾಲೇಜುಗಳ ಜೀವಾಳವಾಗಿದೆ.

ಈ ಕೆರೆಗಳ ಏರಿಯ ಕಲ್ಪನೆ, ಅವುಗಳ ಒಳಮುಖಕ್ಕೆ ಕಲ್ಲಿನ ಕಟ್ಟೋಣ, ಅದರ ಇಳಿಜಾರುಗಳ ಪ್ರಮಾಣವನ್ನು ಯಾವ ಸೂತ್ರದ ಮೇಲೆ ನಿರ್ಧರಿಸುತ್ತಿದ್ದರು, ಕೋಡಿಯ ಬಗ್ಗೆ ಕಂಡುಕೊಂಡ ಬಗೆ, ಅದರ ಉದ್ದ, ತೂಬು ಎಂಬ ಕಲ್ಪನೆ ಹಾಗೂ ಅದನ್ನು ನಿರ್ಮಿಸುವ ಬಗೆಯನ್ನು ಹೇಗೆ ಶೋಧಿಸಿದರೆಂಬುದು ಆಶ್ಚರ್ಯಕರ ಸಂಗತಿಯೇ ! ಆದರೆ ಅವುಗಳ ಬಗ್ಗೆ ಇಂದು ಏನೂ ಗೊತ್ತಿಲ್ಲ. ಇದು ಭಾರತದ ಒಂದು ದೊಡ್ಡ ದುರಂತ. ನಮ್ಮ ಜಾತಿ ವ್ಯವಸ್ಥೆಯ ದುರಂತ.

ಕೆರೆಗಳನ್ನು ಕಟ್ಟಿದವರಿಗೆ ಓದು ಬರಹ ಗೊತ್ತಿಲ್ಲ. ಅವು ಗೊತ್ತಿದ್ದವರು ಈ ಕೀಳು ಜಾತಿಯ ಜನರ ಹತ್ತಿರವೂ ಸುಳಿಯುತ್ತಿರಲಿಲ್ಲ. "ಸರಿ, ಸರಿ ದೂರ ಸರಿ" ಎಂಬುದು ಅವರ ಜೀವನ ಸೂತ್ರವಾಗಿತ್ತು. ಹೀಗೆ ಈ ಯಾವ ಶೋಧವೂ ಇಂದಿಗೆ ದಕ್ಕಿಲ್ಲ. ಮಾತ್ರವಲ್ಲ, ಅಂದಿಗೆ ದೂರ ದೂರದ ಪ್ರಾಂತ್ಯಗಳಲ್ಲಿ ಕೆರೆ ಕಟ್ಟುವಾಗ ಪ್ರತಿಯೊಂದನ್ನೂ ಹೊಸದಾಗಿ ಸಂಶೋಧಿಸಿಕೊಳ್ಳಬಾಕಾದ ಅನಿವಾರ್ಯತೆ, ಅದರಿಂದ ಮತ್ತಷ್ಟು ಹೊಸ ಶೋಧಗಳ ಸಾಧ್ಯತೆಗಳು ಕಡಿಮೆಯಾಗುತ್ತಾ ಹೋಗುತ್ತಿತ್ತು.

ಜೇಡರ ದಾಸಿಮಯ್ಯನ ಮುದೆನೂರು; ಭೋಗಣ್ಣನ ಕೆಂಭಾವಿ

ಮೊತ್ತಮೊದಲ ವಚನಕಾರನೆಂದು ಹೆಸರಾದ ಜೇಡರ ದಾಸಿಮಯ್ಯನ ಊರಾದ ಮುದೆನೂ ಒಮ್ಮೆ ನೀವೆಲ್ಲಾ ಹೋಗಿ ಬರಬೇ ಎಂತಹ ದೃಶ್ಯಗಳು ನಿಮ್ಮ ಕಣ್ಣಿಗೆ ಬೀಳುತ್ತ ಊಹಿಸಲಾರಿರಿ. 250 ಎಕರೆಗೆ ನೀರುಣಿಸ ಕೆರೆಯಲ್ಲ, ಭಾವಿ. ರಾಮ ತೀರ್ಥ ಎನ ಭಾವಿ. ಅದಕ್ಕೆ ಮೇಲ್ಕಾಲುವೆ, ಮಧ್ಯ ಕಾಲು ಕೆಳ ಕಾಲುವೆ ಎಂಬಂತೆ ಮೂರು ಮ ಕಾಲುವೆಗಳು. ಪಕ್ಕದಲ್ಲಿ ರಾಮನಾಥನೆಂಬ ಶಿ ದೇವಾಲಯ. ಭಾವಿ ಮಧ್ಯ ಭಾಗದಲ್ಲಿ ಸುತ್ತಲ ದೇವಾಲಯಗಳ ಕಾಣುವಂತೆ ರಾಮಾಯಣ, ಮಹಾಭಾರತ ದೃಶ್ಯಾವಳಿಗಳ ಕೆತ್ತನೆಗಳು. ಆದರೆ ದೇವಾಲ ಮಾತ್ರ ಭಣ ಭಣಗುಟ್ಟುವಂತೆ ನಿರಾಭರ ಊರ ಹೊರಗೆ ಲಕ್ಷ್ಮಣ ತೀರ್ಥ ಎ ಮತ್ತೊಂದು ಕಟ್ಟಡ ಹಾಳಾದ ಭಾವಿ. ಅದರಿ ಕೂಡ ಕಾಲುವೆ ಮೂಲಕ ನೀರಾವರಿ. ಹೀಗೆ ಸ ತೀರ್ಥಗಳು ಆ ಊರಿನಲ್ಲಿ. ಈ ಭಾವಿಗಳಿಗ ಜೇಡರ ದಾಸಿಮಯ್ಯನ ನೇಕಾ ಕೆಗೂ, ಅವನ ಕ್ರಾಂತಿಕಾರೀ ಚಿಂತನೆ ಉಗಮಕ್ಕೂ ಸಂಬಂಧವಿರಲೇಬೇ ಎನ್ನುವಂತಿದೆ. ಇನ್ನು ಮುದನೂ ಪಕ್ಕದ, ಶಿವಶರಣ ಭೋಗಣ್ಣ ಕೆಂಭಾವಿಗೆ ಬಂದರೆ ಅಲ್ಲಿ ಹ ಎಕರೆ ವಿಸ್ತೀರ್ಣದ ಒಂದು ಬೃಹ ಭಾವಿ. ನಾಲ್ಕಾರು ಕಪಿಲೆಗಳಿಂದ ನೀ ಎಳೆಯುವ ಅವಕಾಶ. ಭಾವಿಯ ಮ ಸಣ್ಣ ದೇವಾಲಯ. ಅದಕ್ಕೆ ಹೋಗಲ ಸೇತುವೆ. ಹಾಗೇ ಬಿಜಾಪುರದ ಚಾಂ ಬಾವಡಿ, ತಾಜ ಬಾವಡಿ, ಹೀ ಎಷ್ಟೊಂದು ಭಾವಿಗಳು. ಬಿಜಾಪುರ ಹಾಗೂ ಹಂಪಿಯ ಕುಡಿಯುವ ನೀರಿ ಯೋಜನೆಗಳು, ಭೂಗತ ಕಾಲುವೆಗಳ ಇತ್ಯಾದಿಗಳ ನಿರ್ಮಾಣದ ಬಗ್ಗೆ ಕೂಡ ಏನೂ ಗೊತ್ತಿಲ್ಲ.

ದೇವಾಲಯದ ನಿರ್ಮಾಣದ ಶಾಸ್ತ್ರ ನಿಯಮಗಳ ಬಗ್ಗೆ ಕೆಲ ಗ್ರಂಥಗಳು ಇದ್ದರೂ ಅವುಗಳ ನಿರ್ಮಾಣ ತಂತ್ರ ಜ್ಞಾನದ ಬಗ್ಗೆ ಹೆಚ್ಚು ಮಾಹಿತಿಯಿಲ್ಲ.

ಇನ್ನು ವೈದ್ಯ ಕ್ಷೇತ್ರಕ್ಕೆ ಬಂದರೆ ಕ್ರಿಸ್ತ ಪೂರ್ವ ಹಾಗೂ ಕ್ರಿಸ್ತ ಶಕೆಯ ಆರಂಭ ಕಾಲದ ಮಹತ್ವದ ಬೆಳವಣಿಗೆಯನ್ನು ಕಂಡಿದ್ದ ಚ ಶುಶ್ರುತರ ಅನ್ವೇಷಣೆಗಳು ಆ ಕಾಲಕ್ಕೇ ನಿ ಹೋಗಿದೆ ಎನ್ನುವಂತಿದೆ. ಬಟ್ಟೆಗಳಿಗೆ ಬ ಹಾಕುವುದು, ವಿವಿಧ ಲೋಹಗಳ ಸ್ವರೂಪ ಉಪಯೋಗಗಳು ಇತ್ಯಾದಿಗಳ ಬಗ್ಗೆ ಬೇ ಹೇಳಬೇಕಿಲ್ಲ. ಭತ್ತದ, ಇತರ ಬೆಳೆಗಳ ನೂರಾರು ಸಾವಿರಾರು ತಳಿಗಳು ಅವುಗಳ ಈ ಎಲ್ಲಾ ಜ್ಞಾ ದಾಖಲಾಗದೇ, ಬೆಳೆಯದೇ ಹೋಗಿದೆ. ಈ ದುರಂತ ಪ್ರಸಂಗದ ಬಗ್ಗೆ ನಮ್ಮ ದೇಶದ ಪ್ರಸಿದ್ಧ ರಸಾಯನ ಶಾಸ್ತ್ರಜ್ಞರೂ, ಬೆಂಗಾಲ್ ಕೆಮಿಕಲ ಅಂಡ್ ಫಾರ್ಮಾಸ್ಯುಟಿಕಲ್ಸ್ ಎಂಬ ಕಂಪನಿಯ ಸಂಸ್ಥಾಪಕರೂ, ಆದ ಆಚಾರ್ಯ ಪ್ರಫುಲ್ಲ ಚಂದ್ರ ರೇ ಯವರು ತಮ್ಮ ಪ್ರಸಿದ್ಧ 'ಹಿಂದು ರಸಾಯನ ಶಾಸ್ತ್ರ' ಎಂಬ ಕೃತಿಯಲ್ಲಿ ಭಾರತದಲ್ಲಿ ವಿಜ್ಞಾನಗಳ ಈ ಅವಸ್ಥೆಯನ್ನು ಹೀಗೆ ವಿಶ್ಲೇಷಿಸಿದ್ದಾರೆ :

"ಬೌದ್ಧ ಧರ್ಮದ ಅವನತಿಯ ನಂತರ ಬ್ರಾಹ್ಮಣರು ಮತ್ತೆ ತಮ್ಮ ಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತಿದ್ದಂತೆಯೇ ಇವೆಲ್ಲವ ಬದಲಾಯಿತು. ಸುಶ್ರುತನ ಪ್ರಕಾರ ಶಲ್ಯ ವಿದ ವಿದ್ಯಾರ್ಥಿಗಳು ಶವ ವಿಚ್ಛೇದ ಮಾಡದೇ ಇದ್ದರ

ಪುಟ 4 ಕ್ಕ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸಾರ್ವಜನಿಕ ರಂಗದಲ್ಲೇ ಉಳಿಯಲಿ

ಕೇಂದ್ರದಲ್ಲಿ ಯುಪಿಎ ಸರ್ಕಾರದ ನೇತೃತ್ವ ವಹಿಸಿರುವ ಕಾಂಗ್ರೆಸ್ ಪಕ್ಷದ ಪಾಲಿಗೆ 'ಗೋಡೆಯ ಮೇಲಿನ ಬರಹ' ಹೆಚ್ಚೆಚ್ಚು ಸ್ಪಷ್ಟಗೊಳ್ಳುತ್ತಿದೆ. ದೇಶದ ಜನ ಕಾಂಗ್ರೆಸ್ ಪಕ್ಷದ ಬಗ್ಗೆ ಭ್ರಮನಿರಸನಗೊಳ್ಳುತ್ತಿದ್ದಾರೆ. ಪರ್ಯಾಯ ಮುಖಂಡರನ್ನು ಬಿಂಬಿಸುವುದರಲ್ಲಿ ಕಾಲಹರಣ ಮಾಡುವ ಬದಲು ದೇಶದ ಜನ ತಿರಸ್ಕರಿಸುತ್ತಿರುವ ಕಾಂಗ್ರೆಸ್ ಪಕ್ಷದ/ಸರ್ಕಾರದ ಧೋರಣೆಗಳ ಬಗ್ಗೆ, ಕನಿಷ್ಠ ಈಗಲಾದರೂ ಅದು ಗಂಭೀರ ಚಿಂತನೆ ಮಾಡಬೇಕು.

ಸ್ವಾತಂತ್ರ್ಯಾನಂತರದ 'ಸ್ವಾವಲಂಬನೆ'ಯ ಗುರಿಯನ್ನು ಕೈಬಿಟ್ಟು, ವಿಶ್ವ ಹಣಕಾಸು ಬಂಡವಾಳದ ಒತ್ತಡಗಳಿಗೆ ಮಣಿದು ಜಾರಿಗೆ ತರಲಾದ ಉದಾರೀಕರಣ, ಖಾಸಗೀಕರಣದ ಧೋರಣೆಗಳೇ ಇಂದಿನ ನಿಯಂತ್ರಿಸಲಾಗದ ಬೆಲೆ ಏರಿಕೆಗೆ, ಸ್ಫೋಟಕ ಸ್ಥಿತಿ ತಲುಪಿರುವ ನಿರುದ್ಯೋಗಕ್ಕೆ, ಉನ್ನತ ವಲಯಗಳಲ್ಲಿ ಹರಡಿಕೊಂಡಿರುವ ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ದೇಶದ ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಆಘಾತವನ್ನುಂಟುಮಾಡಿರುವ ಈ ಧೋರಣೆಗಳನ್ನು ಕೈಬಿಡದಿದ್ದರೆ ದೇಶದ ಜನ ಕಾಂಗ್ರೆಸನ್ನೇ ಕೈಬಿಡುವ ದಿನ ದೂರವಿಲ್ಲ.

ದೇಶದಲ್ಲಿ ಇಂದು ವ್ಯಾಪಕಗೊಳ್ಳುತ್ತಿರುವ ನಿರುದ್ಯೋಗ ಸರ್ಕಾರದ ವಿರುದ್ಧ ಜನರ ಅತೃಪ್ತಿ, ಅಸಮಾಧಾನವನ್ನು ಹೆಚ್ಚಿಸುತ್ತಿದೆ. ಪ್ರತಿಯೊಂದು ಮನೆಯಲ್ಲಿಯೂ ಇಂದು ನಿರುದ್ಯೋಗಿಗಳಿದ್ದಾರೆ. ವಿದ್ಯಾವಂತ ನಿರುದ್ಯೋಗಿಗಳಂತೂ ಜಿಗುಪ್ಸೆಯಿಂದ ನರಳುತ್ತಿರುತ್ತಾರೆ. ಕೇಂದ್ರ ಕಾಂಗ್ರೆಸ್ ಸರ್ಕಾರ "ನಿರುದ್ಯೋಗ ಎಂಬುದು ಒಂದು ಜಾಗತೀಕ ವಿದ್ಯಮಾನ" ಎಂದು ಕೈತೊಳೆದುಕೊಳ್ಳುತ್ತಿದೆ. ತಾನು ಅನುಸರಿಸುತ್ತಿರುವ ಖಾಸಗೀಕರಣ, ಉದಾರೀಕರಣದ ಧೋರಣೆಗಳಿಂದಾಗಿ ನಿರುದ್ಯೋಗ ಹೆಚ್ಚುತ್ತಿದೆ ಎಂಬುದನ್ನು ಒಪ್ಪಿಕೊಂಡು ತನ್ನ ತಪ್ಪು ಧೋರಣೆಗಳನ್ನು ಬದಲಾಯಿಸಿಕೊಳ್ಳಲು ಅದು ಮುಂದಾಗುತ್ತಿಲ್ಲ.

ಭದ್ರಾವತಿಯಲ್ಲಿರುವ ಸಾರ್ವಜನಿಕ ಕ್ಷೇತ್ರದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ನಾಡಿನ ಹೆಮ್ಮೆಯ ಆಸ್ತಿ. ಒಂದು ಕಾಲದಲ್ಲಿ ಇಲ್ಲಿ 20 ಸಾವಿರಕ್ಕೂ ಹೆಚ್ಚು ಕಾಯಂ ಮತ್ತು ಹಂಗಾಮಿ ಕಾರ್ಮಿಕರು ದುಡಿಯುತ್ತಿದ್ದರು. ಈಗ ಇಲ್ಲಿ ಕೇವಲ 2000 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ತನ್ನ ಉದಾರೀಕರಣ ಧೋರಣೆಯ ಭಾಗವಾಗಿ ಉತ್ಪಾದನಾ ಕ್ಷೇತ್ರದಿಂದ ಹಿಂದೆ ಸರಿಯತೊಡಗಿ ಸಾರ್ವಜನಿಕ ರಂಗದ ಕೈಗಾರಿಕೆಗಳ ಆಧುನೀಕರಣಕ್ಕಾಗಿ ಬಂಡವಾಳ ತೊಡಗಿಸುವುದನ್ನು ನಿಲ್ಲಿಸಿತು. ಭದ್ರಾವತಿ ಕಾರ್ಖಾನೆಯ ವಿಷಯದಲ್ಲಿಯೂ ಸರ್ಕಾರ ಕಾರ್ಖಾನೆಯ ಆಧುನೀಕರಣಕ್ಕಾಗಲಿ, ಪುನಶ್ಚೇತನಕ್ಕಾಗಲಿ ಹೂಡಿಕೆ ಮಾಡದಿರುವುದರಿಂದ ಕಾರ್ಖಾನೆ ಸತತವಾಗಿ ನಷ್ಟ ಅನುಭವಿಸುವಂತಾಯಿತು. ಕಾರ್ಖಾನೆಗೆ ಕಬ್ಬಿಣದ ಅದಿರು ಪೂರೈಸುತ್ತಿದ್ದ ಕುದುರೆಮುಖ ಗಣಿಯನ್ನು ಮುಚ್ಚಿದ ನಂತರ ಪರ್ಯಾಯ ವ್ಯವಸ್ಥೆ ಮಾಡಲು ಸರ್ಕಾರ ಆಸಕ್ತಿವಹಿಸಲಿಲ್ಲ. ಅದರ ಬದಲಾಗಿ ಉದ್ದಿಮೆಯ ಖಾಸಗೀಕರಣ ಮಾಡಲು ಸರ್ಕಾರ ಮುಂದಾಯಿತು. ಸಾವಿರಾರು ಕೋಟಿ ರೂ. ಬೆಲೆ ಬಾಳುವ ಕಾರ್ಖಾನೆಯ ಆಸ್ತಿಯನ್ನು ಕೈವಶ ಮಾಡಿಕೊಳ್ಳಲು ಕಾರ್ಪೊರೇಟ್ ಕಂಪೆನಿಗಳು ರಣಹದ್ದುಗಳಂತೆ ಕಾದು ಕುಳಿತಿವೆ!

ಹಿಂದೊಮ್ಮೆ ಕಾರ್ಖಾನೆಯನ್ನು ಖಾಸಗಿ ಕಂಪೆನಿಯೊಂದಕ್ಕೆ ಮಾರಾಟ ಮಾಡಲು ಸರ್ಕಾರ ಪ್ರಯತ್ನಿಸಿದಾಗ ಕಾರ್ಮಿಕ ಸಂಘಗಳು ಮತ್ತು ಸಾರ್ವಜನಿಕರು ತೀವ್ರವಾಗಿ ಪ್ರತಿಭಟಿಸಿದ್ದರು. ಅದರ ಪರಿಣಾಮವಾಗಿ ಸರ್ಕಾರ ಖಾಸಗೀಕರಣದ ಪರವಾಗಿ ಮಾತನಾಡುವುದನ್ನು ನಿಲ್ಲಿಸಿತ್ತು. ಆದರೆ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕಾರ್ಖಾನೆಯ ಆಡಳಿತ ಮಂಡಳಿ ಜಂಟಿ ಸಹಭಾಗಿತ್ವಕ್ಕಾಗಿ ಜಾಗತಿಕ ಟೆಂಡರ್ ಕರೆಯಲು ಮುಂದಾಯಿತು. ಇದನ್ನು ಗಂಭೀರವಾಗಿ ಪರಿಗಣಿಸಿದ ಕಾರ್ಮಿಕ ಸಂಘಗಳು ಜಂಟಿ ವೇದಿಕೆಯನ್ನು ರಚಿಸಿಕೊಂಡು ಹೋರಾಟವನ್ನು ಆರಂಭಿಸಿದವು. ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು. ಇದರ ಪರಿಣಾಮವಾಗಿ, ಸರ್ಕಾರ ಖಾಸಗೀಕರಣ ಹಾಗೂ ಸಹಭಾಗಿತ್ವಕ್ಕೆ ಪ್ರಯತ್ನಪಡುವುದನ್ನು ನಿಲ್ಲಿಸಿ ಕಾರ್ಖಾನೆಯ ಆಧುನೀಕರಣಕ್ಕಾಗಿ ಅಗತ್ಯ ಹೂಡಿಕೆಯನ್ನು ಮಾಡಲು ಮುಂದಾಗಿದೆ ಎನ್ನಲಾಗಿದೆ. ಇದು ಕಾರ್ಮಿಕರ ಮತ್ತು ನಾಗರಿಕರ ಹೋರಾಟಕ್ಕೆ ಸಿಕ್ಕ ತಾತ್ಕಾಲಿಕ ಜಯ ಎನ್ನಬಹುದು. ಆದರೆ ಸರ್ಕಾರದ ಖಾಸಗೀಕರಣ, ಉದಾರೀಕರಣದ ಧೋರಣೆಗಳ ವಿರುದ್ಧ ಹೋರಾಟ ನಿರಂತರವಾಗಿ ಮುಂದುವರೆಯಬೇಕಾಗಿದೆ.

ದುಡಿಯುವ ಕೈಗಳಿಗೆ ಕೆಲಸ ಒದಗಿಸುವುದು ಸರ್ಕಾರದ ಸಂವಿಧಾನಬದ್ಧ ಕರ್ತವ್ಯವಾಗಿದೆ. ಸರ್ಕಾರಕ್ಕೆ ನಿರುದ್ಯೋಗಿಗಳಿಗೆ ಕೆಲಸ ನೀಡುವುದು ಸಾಧ್ಯವಾಗಬೇಕಾದರೆ ಸರ್ಕಾರಿ ರಂಗದಲ್ಲಿ ಉದ್ದಿಮೆಗಳು ಇರಬೇಕಾಗುತ್ತದೆ. ಖಾಸಗಿ ರಂಗ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವುದಿಲ್ಲ. ಕೇವಲ ಲಾಭದ ಉದ್ದೇಶಕ್ಕಾಗಿ ಬಂಡವಾಳ ಹೂಡುವ ಖಾಸಗಿ ಹೂಡಿಕೆದಾರರು ಉದ್ಯೋಗದ ಅವಕಾಶಗಳನ್ನು ಕಡಿತ ಮಾಡುವುದಕ್ಕೇ ಹೆಚ್ಚಿನ ಆದ್ಯತೆ ನೀಡುತ್ತಾರೆ. ಖಾಸಗಿ ರಂಗದಲ್ಲಿ ದಲಿತರಿಗೆ ಮೀಸಲಾತಿ ಇಲ್ಲದಿರುವುದರಿಂದ ಖಾಸಗೀಕರಣದಿಂದ ದಲಿತರು ಹೆಚ್ಚೆಚ್ಚು ಉದ್ಯೋಗದ ಅವಕಾಶಗಳಿಂದ ವಂಚಿತರಾಗುತ್ತಾರೆ. ಈ ಎಲ್ಲ ಕಾರಣಗಳಿಗಾಗಿ ಸಾರ್ವಜನಿಕ ರಂಗದ ಉದ್ದಿಮೆಗಳ ಉಳುವಿಗಾಗಿ ಮತ್ತು ಸರ್ಕಾರದ ಹೆಚ್ಚೆಚ್ಚು ಹೂಡಿಕೆಗಾಗಿ ನಿರಂತರ ಹೋರಾಟ ನಡೆಯಬೇಕಾಗಿದೆ. ■

ರಾಜ್ಯಪಾಲರಿಗೆ ಸಿಪಿಐ(ಎಂ) ನಿಯೋಗದಿಂದ ಮನವಿ

ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಮ್ರೇಡ್ ಜಿ.ವಿ. ಶ್ರೀರಾಮರೆಡ್ಡಿ ನೇತೃತ್ವದ ನಿಯೋಗವೊಂದು ಇತ್ತೀಚೆಗೆ (ಡಿಸೆಂಬರ್6, 2013) ರಾಜ್ಯಪಾಲರನ್ನು ಭೇಟಿಯಾಗಿ ಮನವಿಯೊಂದನ್ನು ಸಲ್ಲಿಸಿತು.

1. ದಲಿತರ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟುವ ಮತ್ತು ಅವರಿಗೆ ಅಗತ್ಯ ರಕ್ಷಣೆಯನ್ನು ಒದಗಿಸುವ ಉದ್ದೇಶಕ್ಕಾಗಿ ಎಸ್.ಸಿ/ಎಸ್.ಟಿ.(ದೌರ್ಜನ್ಯ ತಡೆ) ಕಾಯ್ದೆಯನ್ನು ರೂಪಿಸಿ ಸುಮಾರು 25 ವರ್ಷಗಳಾಗಿವೆ. ಆದರೆ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ. ಆದ್ದರಿಂದ ಕಾಯ್ದೆಯಲ್ಲಿರುವ ಲೋಪದೋಷಗಳನ್ನು ತೆಗೆದುಹಾಕಲು ಮತ್ತು ಕಾಯ್ದೆಯನ್ನು ಬಲಪಡಿಸಲು ಸೂಕ್ತ ತಿದ್ದುಪಡಿಗಳನ್ನು ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ಸಹಿಸಂಗ್ರಹ ಸಹಿತವಾದ ಮನವಿಯನ್ನು ರಾಜ್ಯಪಾಲರಿಗೆ ಸಲ್ಲಿಸಲಾಯಿತು.

2. ಇನ್ನೊಂದು ಪ್ರತ್ಯೇಕ ಮನವಿಯಲ್ಲಿ ಈ ಕೆಳಗಿನ ಮೂರು ವಿಷಯಗಳನ್ನು ಪ್ರಸ್ತಾಪಿಸಲಾಗಿತ್ತು.

ಒಂದು: ರಾಜ್ಯ ವಿಧಾನ ಸಭೆಯು ತನ್ನ ಬೆಳಗಾವಿ ಅಧಿವೇಶನದಲ್ಲಿ ಕಾರ್ಮಿಕರ ಮೂಲಭೂತ ಹಕ್ಕುಗಳ ಮೇಲೆ ದಾಳಿ ಮಾಡುವ ಕರಾಳ 'ಅಗತ್ಯ ಸೇವಾ ನಿರ್ಹಣಾ ವಿಧೇಯಕ– 2013'(ಎಸ್ಮಾ) ವನ್ನು ಅಂಗೀಕರಿಸಿದೆ. ಎಲ್ಲಾ ಕಾರ್ಮಿಕರು–ನೌಕರರು ಮನುಷ್ಯರೇ ಆಗಿದ್ದು, ತಮ್ಮ ನ್ಯಾಯಸಮ್ಮತ ಬೇಡಿಕೆಗಳಿಗಾಗಿ, ಮುಷ್ಕರವನ್ನು ಕೊನೆಯ ಅಸ್ತ್ರವಾಗಿ ಬಳಸಲು ಅವರಿಗೆ ಹಕ್ಕು ಇರುವುದರಿಂದ ಸದರಿ ವಿಧೇಯಕ–ಕ್ಕೆ ರಾಜ್ಯಪಾಲರು ಸಹಿಹಾಕದೆ ಅದನ್ನು ತಿರಸ್ಕರಿಸಬೇಕು.

ಎರಡು: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಾಗೂ ರಾಜ್ಯದ ಇತರ ಕಡೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಕಣ್ಮರೆಯಾದ ಪ್ರಕರಣಗಳು ದಾಖಲಾಗಿವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರು ಆಗಿರುವ ಶಾಸಕಿ ಶ್ರೀಮತಿ ಶಕುಂತಲಾ ಶೆಟ್ಟಿ ಸರ್ಕಾರಕ್ಕೆ ಸಲ್ಲಿಸಿದ ಒಂದು ವರದಿಯಲ್ಲಿ ದ.ಕ.ಜಿಲ್ಲೆಯೊಂದರಲ್ಲೇ ಕಳೆದ ಮೂರು ವರ್ಷಗಳಲ್ಲಿ 335 ಯುವತಿಯರು ನಿಗೂಢವಾಗಿ ಕಾಣೆಯಾಗಿದ್ದಾರೆ ಎಂದು ಹೇಳಿದ್ದಾರೆ. ಈ ಎಲ್ಲ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಶ್ರೀಮತಿ ಶಕುಂತಲಾ ಶೆಟ್ಟಿ ಆಗ್ರಹಿಸಿದ್ದಾರೆ. ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಜೊತೆಯಲ್ಲಿ ಧರ್ಮಸ್ಥಳ ಮತ್ತು ಸುತ್ತಲಿನ ಗ್ರಾಮಗಳ 1979 ರಿಂದ ದಾಖಲಾಗಿರುವ ಎಲ್ಲ ಅತ್ಯಾಚಾರ, ಕೊಲೆ, ನಿಗೂಢ ಸಾವುಗಳನ್ನು ಹಾಗೂ ಭೂಕಬಳಿಕೆ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಹೋರಾಟ ಮಾಡುತ್ತಿದೆ. ರಾಜ್ಯಪಾಲರು ಈ ವಿಷಯದಲ್ಲಿ ಸರ್ಕಾರಕ್ಕೆ ಸೂಕ್ತ ಆದೇಶ ನೀಡಬೇಕು.

ಮೂರು: ರಾಜ್ಯದ ಕೆಲವು ಧಾರ್ಮಿಕ ಕೇಂದ್ರಗಳಲ್ಲಿ ನಡೆಯುತ್ತಿರುವ ಪಂಕ್ತಿಬೇಧ ಮತ್ತು ಮಡೆಸ್ನಾನ ಎಂಬ ಆಚರಣೆಗಳು ಮಾನವ ಘನತೆಗೆ ವಿರುದ್ಧವೂ ಜಾತಿ ತಾರತಮ್ಯವನ್ನು ಮುಂದುವರೆಸಿಕೊಂಡು ಹೋಗುವ ಅನಿಷ್ಟಗಳಾಗಿದ್ದು ಅವುಗಳನ್ನು ನಿಷೇಧಿಸಲು ರಾಜ್ಯಪಾಲರು ಸರ್ಕಾರಕ್ಕೆ ಅಗತ್ಯ ನಿರ್ದೇಶನ ನೀಡಬೇಕು.

ಮನವಿಗಳಲ್ಲಿ ಪ್ರಸ್ತಾಪಿಸಲಾದ ಎಲ್ಲ ಅಂಶಗಳ ಬಗ್ಗೆ ವಿವರವಾದ ಮಾಹಿತಿಯನ್ನು ಪಡೆದುಕೊಂಡ ರಾಜ್ಯಪಾಲರು ಅಗತ್ಯಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು. ನಿಯೋಗದಲ್ಲಿ ಜಿ.ವಿ. ಶ್ರೀರಾಮರೆಡ್ಡಿಯವರ ಜೊತೆಯಲ್ಲಿ ನಿತ್ಯಾನಂದಸ್ವಾಮಿ, ಮಾರುತಿ ಮಾನ್ಪಡೆ ಮತ್ತು ಗೋಪಾಲಕೃಷ್ಣ ಅರಳಹಳ್ಳಿ ಇದ್ದರು. ■



ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ – ಭದ್ರಾವತಿ

ಗದಗ್ : ಅನಿಷ್ಠ ಮಡೆಸ್ನಾನ ಖಂಡಿಸಿ ಡಿವೈಎಫ್ಐ ಪ್ರತಿಭಟನಾ ಧರಣಿ

ಅನಿಷ್ಠ ಮಡೆಸ್ನಾನ–ಪಂಕ್ತಿಬೇಧ ವಿರೋಧಿಸಿ ಹಾಗೂ ಮೂಢನಂಬಿಕೆ ವಿರೋಧಿ ಪ್ರತಿಬಂಧಕ ಕಾಯ್ದೆ ಜಾರಿಗೆ ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್ಐ) ಡಿಸೆಂಬರ್ 8 ರಂದು ಗದಗ್ ನಗರದ ಗಾಂಧಿ ವೃತ್ತದಲ್ಲಿ ಪ್ರತಿಭಟನಾ ಧರಣಿ ನಡೆಸಿತು.

ಧರಣಿಯನ್ನು ಉದ್ದೇಶಿಸಿ ಡಿವೈಎಫ್ಐನ ಜಿಲ್ಲಾ ಮುಖಂಡ ಮಹೇಶ ಹಿರೇಮಠ ಮಾತನಾಡಿ ದಕ್ಷಿಣ ಕನ್ನಡದ ಕುಕ್ಕೆ ಸುಬ್ರಮಣ್ಯದಲ್ಲಿ ಹಾಗೂ ರಾಜ್ಯದ ಸುಮಾರು 65 ಕಡೆಗಳಲ್ಲಿ ಬ್ರಾಹ್ಮಣರು ಊಟ ಮಾಡಿದ ಎಂಜಲು ಎಲೆಯ ಮೇಲೆ ಉರುಳಿದರೆ ಚರ್ಮ ರೋಗಗಳು ಮತ್ತಿತರ ಕಾಯಿಲೆಗಳು ವಾಸಿಯಾಗುವವು ಎಂಬುವ ಮೌಢ್ಯತೆ, ಅಂಧಶ್ರದ್ದೆಯ ಆಚರಣೆಗಳು ನಡೆಯುತ್ತಿದ್ದು, ಇದು ಜಾತಿ ತಾರತಮ್ಯದ ವ್ಯವಸ್ಥೆಯಾಗಿದೆ. ಪಂಕ್ತಿಬೇಧವೂ ಕೂಡಾ ಜಾತಿ ತಾರತಮ್ಯದ ಮತ್ತೊಂದು ಆಚರಣೆಯಾಗಿದೆ. ಈ ಬಗೆಯ ಎಲ್ಲಾ ಅನಿಷ್ಠ ಆಚರಣೆಗಳನ್ನು ನಿಷೇಧಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಧರಣಿಯನ್ನು ಬೆಂಬಲಿಸಿ ಮಾತನಾಡಿದ ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಎಂ.ಎಸ್. ಹಡಪದ ರಾಜ್ಯ ಸರ್ಕಾರ ಜಾರಿಗೊಳಿಸಲು ಹೊರಟಿರುವ ಮಹಾರಾಷ್ಟ್ರ ಮಾದರಿಯ ಮೂಢನಂಬಿಕೆ ಪ್ರತಿಬಂಧಕ ಕಾಯ್ದೆಯನ್ನು ವ್ಯಾಪಕ ಚರ್ಚೆ, ಸಮಾಲೋಚನೆ ಸಾರ್ವಜನಿಕ ತಿಳುವಳಿಕೆಯ ಬಳಿಕ ಕರಡು ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಿ ಅಂಗೀಕರಿಸಬೇಕೆಂದು ಒತ್ತಾಯಿದರು. ರಾಷ್ಟ್ರೀಯ ಕಾನೂನು ಶಾಲೆಯು ನೀಡಿರುವ ಈ ಕರಡು ಮಸೂದೆಯೂ ಪಂಕ್ತಿಬೇಧ ಮತ್ತು ಮಡೆಸ್ನಾನ ಪದ್ದತಿಗಳನ್ನು ನಿಷೇಧಿಸಲು ಸೂಚಿಸಿದೆ. ಇಂತಹ ಮಸೂದೆ ವಿರುದ್ದ ಪ್ರತಿಗಾಮಿ ಶಕ್ತಿಗಳು ಬಾರಿ ಅಪಪ್ರಚಾರದಲ್ಲಿ ತೊಡಗಿ ತಪ್ಪು ಮಾಹಿತಿಗಳಿಂದ ಪ್ರಚೋದಿಸುತ್ತ ಜನರನ್ನು ಮಸೂದೆ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸುತ್ತಿವೆ. ಇದನ್ನು ಸಮರ್ಥವಾಗಿ ಎದುರಿಸಬೇಕಿದೆ. ಜನತೆಯನ್ನು ವಾಸ್ತವ ಆಂಶಗಳಿಂದ ಜಾಗೃತಗೊಳಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.



ಸಂಘಟನೆಯ ಜಿಲ್ಲಾ ಸಂಚಾಲಕ ಮಹಗುಂಡಪ್ಪ ಅಂಗಡಿ ಮಾತನಾಡಿ ಈಗಾಗಲೇ ಹಲವಾರು ಪ್ರಗತಿಪರರು, ಪ್ರಗತಿಪರ ಸಂಘಟನೆಗಳು ನಾಡಿನಾದ್ಯಂತ ಪ್ರತಿಭಟನೆಗೆ ಇಳಿದಿದ್ದಾರೆ. ಇದನ್ನು ಸಹಿಸದ ಸ್ಥಾಪಿತ ಹಿತಾಸಕ್ತಿಗಳು ಅವರಿಗೆ ಬೆದರಿಕೆ ಒ ದಬ್ಬಾಳಿಕೆಯ ಮೂಲಕ ಅವರ ಧ್ವನಿಯನ್ನು ಅಡಗಿಸಲು ನಡೆಸುತ್ತಿರುವ ಪ್ರಯತ್ನವನ್ನು ಸಂಘಟನೆ ಬಲವಾಗಿ ಖಂಡಿಸುತ್ತದೆ. ಸರ್ಕಾ ಯಾವ ಒತ್ತಡಕ್ಕೂ ಮಣಿಯದೇ ಈ ಮಸೂದೆಯನ್ನು ಮಂಡಿಸಿ ವ್ಯಾಪಕ ಚರ್ಚೆ ಬಳಿಕ ಅಂಗಿಕರಿಸಬೇಕೆಂದು ಒತ್ತಾಯಿಸಿದರು.

ಇದಕ್ಕೂ ಮೊದಲು ವರ್ಣಬೇಧ ನೀತಿ ವಿರುದ್ಧದ ಹೋರಾಟಗಾರ ನೆಲ್ಸನ್ ಮಂಡೇ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರತಿಭಟನಾ ಧರಣಿಯಲ್ಲಿ ಶಿವು ಚವ್ಹಾಣ, ಫೀರು ರಾಠೋಡ, ವಿಠಲ ನಾಯ್ಕ, ಸಾಗರ ಮಾಡೊಳ್ಳಿ, ಮಾನವ್ವ ರಾಠೋಡ, ದೇವಪ್ಪ ನಾಯ್ಕ ಶಿವಾಜಿ ಗಡ್ಡದ, ಮೈಲಾರಪ್ಪ ಮಾದ ವೀರಣ್ಣ ಕುಂಬಾರ, ಸಿದ್ದನಗೌಡ ಪಾಟೀಲ, ಸಾವಿತ್ರಿ ಲಮಾಣಿ ಬಾಲಕೃಷ್ಣ ಜಾಡಬಂದಿ, ಶಿವರಾಜ ಮುದಿಯನಗುಡಿ. ಮತ್ತಿತರರು ಲ್ಗೊಂಡಿದ್ದರು.

– ಮಹಗುಂಡಪ್ಪ ಅಂಗಡಿ

ಭಾರತ ಕಳೆದುಕೊಂಡ ಜ್ಞಾನ........

ಪುಟ 2 ರಿಂದ

ನಡೆಯುವಂತಿಲ್ಲ. ಆ ಮಹಾಜ್ಞಾನಿ ಪರೀಕ್ಷಣೆಗೆ ಮತ್ತು ನೀರೀಕ್ಷಣೆಗೆ ಹೆಚ್ಚಿನ ಮಹತ್ವ ನೀಡಿದ್ದನು. (ಶಸ್ತ್ರ ಚಿಕಿತ್ಸಕನು ಜ್ಞಾನಾರ್ಜನೆ ಮಾಡಬೇಕೆಂದಲ್ಲಿ ಒಂದು ಮೃತ ದೇಹವನ್ನು ಸಂಪಾದಿಸಿ ಅದರಲ್ಲಿನ ಅಂಗಾಂಗಗಳನ್ನು ವಿವರವಾಗಿ ನೋಡಬೇಕಾಗುತ್ತದೆ. ಯಾರು ಅಂಗಾಂಗಗಳನ್ನು ಪ್ರತ್ಯಕ್ಷವಾಗಿ ನೋಡಿ ಶಾಸ್ತ್ರಗಳ ಮೂಲಕ ತಿಳಿಯುತ್ತಾರೊ ಅವನೇ ವಿಶಾರದ– ಶರೀರ ಸ್ಥಾನ 5.43–45,48)

ಆದರೆ ಮನುವಿನ ಪ್ರಕಾರ ಬ್ರಾಹ್ಮಣರ ಪವಿತ್ರ ದೇಹವು ಶವವನ್ನು ಮುಟ್ಟಿದರೇ ಸಾಕು ಅಪವಿತ್ರವಾಗಿ ಬಿಡುತ್ತದೆ. ಹೀಗಾಗಿ ವಾಗ್ಭಟನ ಸ್ವಲ್ಪ ನಂತರದಲ್ಲಿಯೇ ಶಲ್ಯ ವಿದ್ಯೆಯಲ್ಲಿ ಆಸಕ್ತಿ ಕಡಿಮೆಯಾಯಿತು. ಶರೀರ ವಿಜ್ಞಾನ ಮತ್ತು ಶಲ್ಯ ವಿದ್ಯೆಗಳು ಹಿಂದೂಗಳಲ್ಲಿ ಹೆಚ್ಚು ಕಡಿಮೆ ಲುಪ್ತವಾಗಿಯೇ ಹೋದವು. ಉನ್ನತ ಜ್ಞಾನಾರ್ಜನೆಯತ್ತ ಸಹಜ ಒಲವಿದ್ದ ಉಚ್ಚ ವರ್ಣಗಳಲ್ಲಿನ ಸಂಶೋಧನಾ ಬುದ್ಧಿಯೂ ಸಹ ನಿಧಾನವಾಗಿ ಸತ್ತು ಹೋಯಿತು.

ಹೀಗಾಗಿ ನ್ಯೂಟನ್ನಿನಂತಹ ವಿಜ್ಞಾನಿ ಇಲ್ಲಿ ರೂಪುಗೊಳ್ಳುವುದಕ್ಕೆ ಈ ಮಣ್ಣು ಅನುಪಯುಕ್ತವಾಯಿತು. ವಿಜ್ಞಾನ ಜಗತ್ತಿನ ಭೂಪಟದಲ್ಲಿ ಅದರ ಹೆಸರೂ ಸಹ ಅಳಿಸಿಹೋಯಿತು.

'ಮನು ಸ್ಮೃತಿ' ಯಲ್ಲಿ ಬಹಳ ಸ್ಪಷ್ಟವಾಗಿ "ನ ಶೂದ್ರಾಯ ಮತಿಂ ದದ್ಯಾತ್" – 4.80

ಎಂದು, ಅಂದರೆ ಯಾವ ಶೂದ್ರನಿಗೂ ಬುದ್ಧಿಯನ್ನು ನೀಡಬಾರದು ಎಂದು ಘೋಷಿಸಲಾಗಿದೆ.

ಇದೇ ಮಾತನ್ನು ಶಂಕರಾಚಾರ್ಯರೂ ಸೇರಿದಂತೆ ಮಧ್ವಾಚಾರ್ಯ, ರಾಮಾನುಜಾಚಾರ್ಯ ಮೊದಲಾದ ತ್ರಿ ಮತಸ್ಥ ಆಚಾರ್ಯರುಗಳೆಲ್ಲಾ ಏಕವಾಕ್ಯದಿಂದ ಇನ್ನಷ್ಟು ದೃಢವಾಗಿ ಉಚ್ಚರಿಸಿದ್ದಾರೆ. ಇದರ ಒಂದು ಮಾದರಿಯಾಗಿ ಶಂಕರಾಚಾರ್ಯರು ತಮ್ಮ ಆಚಾರ್ಯ ಕೃತಿಯಾದ ಬ್ರಹ್ಮ ಸೂತ್ರ ಭಾಷ್ಯದಲ್ಲಿ ಏನು ಹೇಳುತ್ತಾರೋ ನೋಡೋಣ.

ಬ್ರಹ್ಮ ಸೂತ್ರದಲ್ಲಿ ಅಪ ಶೂದ್ರಾಧಿಕರಣವೆಂದು ಕರೆಯಲ್ಪಡುವ ಭಾಗದಲ್ಲಿ 1–3– 34 ರಿಂದ 1–3–38 ರವರೆಗಿನ ಸೂತ್ರಗಳ ಬಗ್ಗೆ ಶಂಕರರು ನೀಡಿದೆ ವಿವರಣೆಗಳಲ್ಲಿ


"ಶೂದ್ರರಿಗೆ ಜ್ಞಾನದ ಹಕ್ಕಿಲ್ಲ. ಏಕೆಂದರೆ ಅವರು ವೇದವನ್ನು ಆಧ್ಯಯನ ಮಾಡುವಂತಿಲ್ಲ. ವೇದಾಧ್ಯಯನ ಮಾಡುವುದಕ್ಕೆ ಉಪನಯನವಾಗಿರಲೇಬೇಕು. ಉಪನಯನ ಮೂರು ದ್ವಿಜ ಜಾತಿಯವರಿಗೆ ಮಾತ್ರ ಸೀಮಿತಗೊಳಿಸಲ್ಪಟ್ಟಿದೆ. ಆದ್ದರಿಂದ ಶೂದ್ರರು ವೇದಗಳನ್ನು ಅಧ್ಯಯನ ಮಾಡುವಂತಿಲ್ಲ. ಅವರಿಗೆ ಜ್ಞಾನವನ್ನು ಪಡೆಯುವ ಅಭಿಲಾಷೆಯಿರಬಹುದು. ಸಾಮರ್ಥ್ಯವೂ ಇರಬಹುದು ಆದ–ರೆ ಇವು ಯಾವುದೂ ಅವರನ್ನು ಜ್ಞಾನ ಪಡೆಯುವುದಕ್ಕೆ ಅರ್ಹರನ್ನಾಗಿ ಮಾಡುವುದಿಲ್ಲ. ಏಕೆಂದರೆ ಕೇವಲ ಸಾಮಾನ್ಯ ಸಾಮರ್ಥ್ಯ ಅದಕ್ಕೆ ಅರ್ಹರನ್ನಾಗಿ ಮಾಡುವುದಿಲ್ಲ. ಅದಕ್ಕೆ ಬೇಕಾದದ್ದು ವೇದ ಜ್ಞಾನದ ಸಾಮರ್ಥ್ಯ. ಅದು ಅವರಿಗೆ ನಿಷೇಧಿಸಲ್ಪಟ್ಟಿದೆ." ಎಂದು ಸಾರಿದ್ದಾರೆ.

"ಶ ೆ ೂ ದ ್ ರ ಿ ಗ ೆ ಅ ಭಿ ಲಾ ಷೆ ಯಿ ರ ಬ ಹ ು ದ ು. ಸಾಮರ್ಥ್ಯವೂ ಇರಬಹುದು. ಆದರೆ ನಿಷೇಧದಿಂದಾಗಿ, ಅದಕ್ಕೆ ಅವರು ದ್ವಿಜರಲ್ಲದುದೇ ಕಾರಣವಾಗಿ ಅವರಿಗೆ ಜ್ಞಾನದ ಹಕ್ಕು ಇಲ್ಲ."

ಇದು ಜಾತಿ ವ್ಯವಸ್ಥೆಯೋ ಅಲ್ಲವೋ ?

ಶಂಕರರು ಮುಂದಿನ ಸೂತ್ರಗಳ ವಿವರಣೆಯಲ್ಲಿ ಇನ್ನೂ ಭಯಂಕರ ಸಂಗತಿಗಳಿಗೆ ತಮ್ಮ ಅಂಗೀಕಾರ ಮುದ್ರೆಯನ್ನು ಒತ್ತುತ್ತಾರೆ. ಸ್ಮೃತಿಗಳು ಹೇಳಿವೆ

"ಶೂದ್ರನಿಗೆ ವೇದಗಳನ್ನು ಕೇಳುವ ಹಕ್ಕಿಲ್ಲ. ಅಧ್ಯಯನ ಮಾಡುವ ಹಕ್ಕಿಲ್ಲ. ವೇದಗಳ ಅರ್ಥವನ್ನು ತಿಳಿಯುವ ಹಕ್ಕಿಲ್ಲ ಎಂದು. ಅವನೇನಾದರೂ ವೇದಗಳನ್ನು ಕೇಳಿಸಿಕೊಂಡು ಬಿಟ್ಟರೆ ಅವನ ಕಿವಿಗೆ ಕಾದ ಸೀಸ ಮತ್ತು ಅರಗಿನಿಂದ ತುಂಬಿಬಿಡಬೇಕೆಂದು ಗ್ರಂಥಗ ಹೇಳಿವೆ. ಶೂದ್ರನು ಚಲಿಸುವ ಸ್ಮಶಾನವಾದ್ದರಿ ಅವನು ಇರುವ ಆಸು ಪಾಸಿನಲ್ಲಿ ವೇದಗಳ ಓದಬಾರದು."



ಸುರಂಗ ಜಲ ಮಾರ್ಗಗಳುಳ್ಳ ಬಾವಿ

ಅಷ್ಟೇ ಅಲ್ಲ "ವೇದೋಚ್ಚಾರಣೆ ಜಿಹ್ವಾಚ್ಛೇದೋ ವೇದಧಾರಣೆ ದೇಹಚ್ಛೇದೋ"

ಅಂದರೆ ಶೂದ್ರನು ವೇದವ ಉಚ್ಚರಿಸಿದರೆ ಅವನ ನಾಲಿಗೆಯ ಕತ್ತರಿಸಬೇಕು. ವೇದವ ಹೃದ್ಗತ ಮಾಡಿಕೊಂ (ನೆನಪಿನಲ್ಲಿಟ್ಟುಕೊಂಡರೆ) ಅ ದೇಹವನ್ನು ಛಿದ್ರ ಛಿದ್ರ ಮಾಡಬೇ

"ಆದರೆ ವಿದು ಧರ್ಮವ್ಯಾಧರಂತೆ ಹಿಂದಿನ ಜನ್ಮಗ ಮಾಡಿದ ಪುಣ್ಯದ ಫಲವಾಗಿ ಅವ ತಾನೇ ತಾನಾಗಿ ಜ್ಞಾನ ಲಭಿ ಅದನ್ನು ತಪ್ಪಿಸಲಾಗದು. ಶೂದ್ರ ಪುರಾಣಗಳನ್ನು ಬೇಕಾದರೆ ಹೇಳಬಹುದು. ಆದರೆ ಶೂದ್ರ ವೇದಗಳ ಮೂಲಕ ಜ್ಞಾನ ಪ ಹಕ್ಕಿಲ್ಲ."

ಇವು ಶಂಕರರ ಅಮೃತ ವಾಕ್ಯಗಳ

ಅಂದು ವೇದಗಳನ್ನು ಅಧ್ಯಯ ಮಾಡುವುದೇ ವಿದ್ಯೆ ಎಂದಾಗ ಕಾಲದಲ್ಲಿ ವೇದಾಧಿಕಾರದ ನಿರಾಕರ ವಿದ್ಯೆಯ ನಿರಾಕರಣೆಯೂ ಆಗಿ ಜೊತೆಗೆ ಜ್ಞಾನದ ಹಕ್ಕನ್ನು ಸ್ಪಷ್ಟವಾ ನಿರಾಕರಿಸಲಾಗಿದೆ.

ಹೀಗೆ ವಿಶ್ವದಲ್ಲಿ ಭಾರತ ಮೆರಿಟ್‌ಗೆ ಎಣಿಸಲಾರದಷ್ಟು ಕ್ಕೆ ತಂದವರು ಇಂದು ಅ ಜಾತಿ ವ್ಯವಸ್ಥೆಯ ಪರವಾ ಮೆರಿಟ್‌ನ ವಾದವನ್ನು ಮುಂ ಮೀಸಲಾತಿಯನ್ನು ವಿರೋಧಿಸುತ್ತಿರುವು ಇತಿಹಾಸದ ಒಂದು ವ್ಯಂಗ್ಯವೇ ಸರಿ.

ಜನಶಕ್ತಿ
ಕನ್ನಡ ವಾರಪತ್ರಿಕೆ



ನಿರರ್ಥಕವಾದ ಬೆಳಗಾವಿ ಅಧಿವೇಶನ

– ಜಿ.ವಿ. ಶ್ರೀರಾಮರೆಡ್ಡಿ

ಆರು ಕೋಟಿ ಜನರ ಆಶಾಕಿರಣವಾಗಬೇಕಿದ್ದ ವೇದಿಕೆಯೊಂದು ತಾನು ಎಷ್ಟು ನಿರುಪಯುಕ್ತ ಮತ್ತು ನಿರರ್ಥಕವೆಂಬುದನ್ನು ಬೆಳಗಾವಿಯಲ್ಲಿ ನಡೆದ 3ನೇ ಅಧಿವೇಶನವು ತೋರಿಸಿಕೊಟ್ಟಿದ್ದು ನಿಜವಾಗಿ ಈ ರಾಜ್ಯದ ಜನರ ದುರದೃಷ್ಟ. ನಾವೇ ಮತ ಹಾಕಿ ಶಾಸನಸಭೆಗೆ ಕಳುಹಿಸಿದ ಜನಪ್ರತಿನಿಧಿಗಳು 6 ಕೋಟಿ ಜನರ ಯಾವುದೇ ಮೂಲಭೂತ ಮತ್ತು ತಕ್ಷಣದ ಯಾವುದೇ ತುರ್ತು ಸಮಸ್ಯೆಗಳನ್ನು ಪರಿಹಾರ ಮಾಡುವ ದಾರಿಯಲ್ಲಿ ಕಿಂಚಿತ್ತು ಪ್ರಯತ್ನ ನಡೆಸದಿದ್ದುದು ಆಘಾತಕಾರಿ ಅಂಶವಾಗಿದೆ. ಇಷ್ಟು ಮಾತ್ರವಲ್ಲದೇ ಆ ವೇದಿಕೆ ದುಡಿಯುವ ಜನರ ಪಾಲಿಗೆ ಕರಾಳ ಅಧಿವೇಶನವಾಗಿ ಪರಿವರ್ತನೆಯಾಗಿದ್ದು ಒಂದು ದುರಂತ. ಅದೇ ವೇಳೆ ಅಧಿವೇಶನ ಪ್ರಾರಂಭದಿಂದ ಮುಕ್ತಾಯದವರೆಗೂ ಹಲವಾರು ಹೋರಾಟಗಳಿಗೆ ಆ ಸಂದರ್ಭ ಸಾಕ್ಷಿಯಾಯಿತು. ಅಲ್ಲಿ ನಡೆದ ಕೆಲವು ಪ್ರದರ್ಶನಗಳು ಅಧಿವೇಶನದ ಸ[illegible]ಕ್ಕಾಗಿ ಮಾಡಿದ ಹೋರಾಟಗಳ ರೀತಿಯಲ್ಲಿ ಕಂಡಿದ್ದು ಒಂದು ವಿಪರ್ಯಾಸ.

ಬರಗಾಲ–ರೇಷನ್ ಪ್ರಶ್ನೆ ಚರ್ಚೆಗೆ ಬರಲಿಲ್ಲ

ಈ ಅಧಿವೇಶನದಲ್ಲಿ ಅಗತ್ಯವಾಗಿ ನಡೆಯಬೇಕಾಗಿದ್ದ ಚರ್ಚೆಗಳು ಯಾವುವು? ಕಳೆದ ಜೂನ್ ತಿಂಗಳಿನಿಂದ ರಾಜ್ಯದಲ್ಲಿನ 140 ತಾಲ್ಲೂಕುಗಳಲ್ಲಿ ಭೀಕರ ಬರಗಾಲ ಪರಿಸ್ಥಿತಿ ಉಂಟಾಗಿದೆ ಎಂದು ಸರ್ಕಾರವೇ ಘೋಷಿಸಿತ್ತು. ಈಗ ಅದನ್ನು 40 ತಾಲ್ಲೂಕುಗಳಿಗೆ ಸರ್ಕಾರ ಸೀಮಿತಗೊಳಿಸಿದೆ. ಈ ತೀರ್ಮಾನಕ್ಕೆ ಬರಲು ಕಾರಣವೇನು? ಆಧಾರಗಳೇನು? ಎಂಬುದನ್ನು ಸರ್ಕಾರವು ಸ್ಪಷ್ಟಪಡಿಸಲಿಲ್ಲ. ವಿರೋಧ ಪಕ್ಷಗಳು ಕೇಳಲಿಲ್ಲ, ಹಾಗಾದರೆ ಈ ಗಂಭೀರ ಸಮಸ್ಯೆಗೆ ಪರಿಹಾರ ಎಲ್ಲಿ ಹುಡುಕಬೇಕು. ಹೇಗೆ ಪರಿಹಾರವಾಗಬೇಕು. ಈ ಬರಗಾಲದ ಪರಿಸ್ಥಿತಿಗೆ ಒಳಗಾಗಿರುವ ರಾಜ್ಯದ ಅರ್ಧ ಜನಸಂಖ್ಯೆಯ ಪರಿ[illegible]ಯೇನು? ಸರ್ಕಾರ ಅಧಿಕಾರಕ್ಕೆ ಬಂದಾಗ ಘೋಷಣೆ ಮಾಡಿದ ಒಂದು ರೂ. ಕೆ.ಜಿ. ಅಕ್ಕಿ(ಅನ್ನಭಾಗ್ಯ) ಯೋಜನೆ. ಇದರ ಸಮರ್ಪಕ ವಿತರಣೆ ಮತ್ತು ಅದಕ್ಕೆ ಅಗತ್ಯವಾಗಿ ಬೇಕಾಗಿರುವ ರೇಷನ್ ಕಾರ್ಡ್ ಇವೆರೆಡರ ಅವ್ಯವಸ್ಥೆಯಾಗಿದೆಯೆಂದು ತೊಂದರೆಗೊಳಗಾದ ಜನ ಮತ್ತು ನಾನಾ ಸಂಘಟನೆಗಳು ಮತ್ತು ಸಿಪಿಐ(ಎಂ) ಪಕ್ಷ ಹಲವಾರು ಹೋರಾಟಗಳನ್ನು ನಡೆಸಿವೆ. ಮತ್ತು ನಡೆಸುತ್ತಿದ್ದಾರೆ. ಈ ವಿಷಯ ಅಧಿವೇಶನದಲ್ಲಿ ಚರ್ಚೆಗೆ ಬರಲಿಲ್ಲ. ಅಧಿವೇಶನ ಪ್ರಾರಂಭಕ್ಕೆ ಮೊದಲು ಆ ಯೋಜನೆಯ ಬಗ್ಗೆ ನಾನಾ ರೀತಿಯಾದ ಸುಸಂಬದ್ಧ ಮತ್ತು ಅಸಂಬದ್ಧ ಹೇಳಿಕೆಗಳ ಮುಖಾಂತರ ಸರ್ಕಾರವನ್ನು ಟೀಕೆ ಮಾಡುತ್ತಿದ್ದ ವಿರೋಧ ಪಕ್ಷಗಳು ಸದನದಲ್ಲಿ ಚಕಾರವೆತ್ತಲಿಲ್ಲ. ಇದು ಬಡವರ ಬಗ್ಗೆ ಈ ಪಕ್ಷಗಳಿಗಿರುವ ಕಾಳಜಿಯ ಪ್ರಾಮಾಣಿಕತೆಯನ್ನು ಸ್ಪಷ್ಟವಾಗಿ ಪ್ರದರ್ಶಿಸುತ್ತದೆ. ಅದೇ ಸಂದರ್ಭದಲ್ಲಿ ಸರ್ಕಾರ ಯಾವುದೇ ಪೂರ್ವಸಿದ್ದತೆಯಿಲ್ಲದೆ ತಾನು ಘೋಷಿಸಿದ ಯೋಜನೆಯಿಂದ ರಾಜಕೀಯ ಲಾಭವನ್ನು ಪಡೆಯುವ ಪ್ರಯತ್ನ ಮಾಡುತ್ತಿದೆ.

ಲೆಕ್ಕಕ್ಕುಂಟೇ ಬಡವರ ಮನೆ–ನಿವೇಶನ ಪ್ರಶ್ನೆ ಉದ್ಯೋಗ ಖಾತ್ರಿ?

ಗ್ರಾಮೀಣ ಬಡವರಿಗೂ, ಕೃಷಿ ಕಾರ್ಮಿಕರಿಗೂ ಸಂಬಂಧಪಟ್ಟ ಇನ್ನೊಂದು ಪ್ರಮುಖ ವಿಷಯವೊಂದರ ಬಗ್ಗೆ ಕಳೆದ ಎರಡು ವರ್ಷಗಳಿಂದ ಚರ್ಚೆಯಾಗಿ ಹಲವಾರು ಹೋರಾಟಗಳು ನಡೆದಿವೆ. ಅದುವೇ 'ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ'. ಇದರಲ್ಲಿ ಚರ್ಚೆಯಾಗುತ್ತಿರುವ ಎರಡು ಪ್ರಮುಖ ಅಂಶಗಳಲ್ಲಿ ಒಂದು ಈ ಯೋಜನೆ ಜಾರಿಯಾಗದೆ ಬಹುತೇಕ ಸ್ಥಗಿತಗೊಂಡಿರುವುದು ಮತ್ತು ಈ ಯೋಜನೆಯಲ್ಲಿ ನಡೆದಿದೆಯೆನ್ನಲಾದ ಸಾವಿರಾರು ಕೋಟಿಗಳ ದುರುಪಯೋಗ. ಇದರ ಬಗ್ಗೆ ಸರ್ಕಾರ ಮತ್ತು ವಿರೋಧ ಪಕ್ಷಗಳು ಜಾಣ ಮೂಕರಂತೆ ನಡೆದುಕೊಂಡಿದ್ದು ಅಕ್ಷಮ್ಯ ಅಪರಾಧ. ಗ್ರಾಮೀಣ ಪ್ರದೇಶದ ಬಹುತೇಕ ಬಡವರ ಸಮಸ್ಯೆಗಳಾದ ನಿವೇಶನ ಮತ್ತು ಮನೆಗಳ ಕೊರತೆಯ ಈ ಎರಡು ಪ್ರಶ್ನೆಗಳು ಎಷ್ಟು ಗಂಭೀರತೆಯನ್ನು ಪಡೆಯಬೇಕಿತ್ತೆಂದರೆ ಅಧಿವೇಶನದ ಆದ್ಯತೆಯ ಪ್ರಶ್ನೆಗಳಲ್ಲಿ ಒಂದಾಗಬೇಕಿತ್ತು. ಏಕೆಂದರೆ ಈ ಅಧಿವೇಶನ ಆರಂಭವಾಗುವುದಕ್ಕೆ ಒಂದೂವರೆ ತಿಂಗಳು ಮೊದಲು ವಿಶ್ವಸಂಸ್ಥೆಯ ಅಂಗ ಇಲಾಖೆಯಾಗಿರುವ ಒಂದು ಸಂಸ್ಥೆ ಭಾರತ ಮತ್ತು ಕರ್ನಾಟಕಕ್ಕೆ ಸಂಬಂಧಪಟ್ಟು ಎರಡು ಆತಂಕಕಾರಿ ಅಂಶಗಳನ್ನು ಹೊರಗೆಡಿವಿದೆ. ಒಂದು ವಸತಿ ಪರಿಸ್ಥಿತಿ ಮತ್ತು ಶೌಚಾಲಯಗಳ ಪರಿಸ್ಥಿತಿ.

ಜನರ ಬದುಕಿನ ದುಸ್ಥಿತಿ

ವರದಿ ಪ್ರಕಾರ ಭಾರತದಲ್ಲಿ 19 ಕೋಟಿ ಕುಟುಂಬಗಳಿಗೆ ಮನೆಗಳಿಲ್ಲ. ಅದರಲ್ಲಿ ಕರ್ನಾಟಕದ ಒಟ್ಟು ಜನಸಂಖ್ಯೆಯ 37% ಜನಕ್ಕೆ ವಾಸಿಸಲು ಮನೆಗಳಿಲ್ಲ. ಇನ್ನು ಶೌಚಾಲಯಗಳ ಬಗ್ಗೆ ಅದು ಕೊಟ್ಟಿರುವಂತಹ ವರದಿ ಇನ್ನೂ ತಲೆ ತಗ್ಗಿಸಬೇಕಾದಂತಹ ಪರಿಸ್ಥಿತಿ. ಶೌಚಾಲಯಗಳು ಇಲ್ಲದವರ ಸಂಖ್ಯೆ ಜಗತ್ತಿನಲ್ಲಿ ಅತಿ ಹೆಚ್ಚಿರುವ ದೇಶಗಳಲ್ಲಿ ಭಾರತಕ್ಕೆ 2ನೇ ಸ್ಥಾನ. ಅದರಲ್ಲಿ ಕರ್ನಾಟಕದ 65% ಜನರಿಗೆ ಶೌಚಾಲಯಗಳಿಲ್ಲ. ವಸತಿ ಮತ್ತು ನಿವೇಶನಗಳಿಗಾಗಿ ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರ ಸಂಘಗಳು ಕಳೆದ ಎರಡು ವರ್ಷಗಳಿಂದ ನಿವೇಶನ ರಹಿತ ಜನರಿಂದ ಸಂಬಂಧಪಟ್ಟ ಗ್ರಾಮ ಪಂಚಾಯ್ತಿಗಳಿಗೆ ಅರ್ಜಿ ಸಲ್ಲಿಸಿ ಸತತವಾಗಿ ಹೋರಾಟಗಳನ್ನು ನಡೆಸುತ್ತಿವೆ. ಇದರ ಬಗ್ಗೆ ಅಧಿವೇಶನದಲ್ಲಿ ಸಣ್ಣ ಸದ್ದು ಕೂಡಾ ಕೇಳಲಿಲ್ಲ. ಇನ್ನು ಶೌಚಾಲಯಗಳನ್ನು ನಿರ್ಮಿಸಲೆಂದೇ ರೂಪಿಸಿದ ಗ್ರಾಮೀಣ ನೈರ್ಮಲ್ಯ ಯೋಜನೆ ಏನಾಯಿತು ಎಂದು ಪ್ರಶ್ನೆ ಮಾಡುವ ಪಾಪಕ್ಕೆ ಹೋಗಿಲ್ಲ. ಇನ್ನು ಕಳೆದ ಒಂದು ವರ್ಷದಿಂದ ಬಹಳ ಗಂಭೀರವಾಗಿ ರಾಜ್ಯದಲ್ಲಿ ಚರ್ಚೆಯಾಗುತ್ತಿರುವ 'ಪೌಷ್ಠಿಕ ಆಹಾರ ಕೊರತೆ'ಯಿಂದ ಸಾಯುತ್ತಿರುವ ಮಕ್ಕಳ ವಿಷಯ. ಇಡೀ ದೇಶದಲ್ಲಿ ಪೌಷ್ಠಿಕ ಆಹಾರದ ಕೊರತೆಯನ್ನು ಅನುಭವಿಸುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಒಂದನೇ ಸ್ಥಾನದಲ್ಲಿ ಗುಜರಾತ್ (42%), ಕರ್ನಾಟಕ (40%). ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1,000ಕ್ಕೆ 45 ಮಕ್ಕಳು ಸಾಯುತ್ತಿದ್ದರೆ, ಬೀದರ್ ಗುಲ್ಬರ್ಗಾ, ವಿಜಾಪುರ, ಕೊಪ್ಪಳ ಮತ್ತು ಗದಗ ಜಿಲ್ಲೆಗಳಲ್ಲಿ 1,000ಕ್ಕೆ 65 ಮಕ್ಕಳು ಸಾಯುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲೇ ಅಧಿವೇಶನ ನಡೆದರೂ ಆ ಭಾಗದ ಆಡಳಿತ ಪಕ್ಷದ ಸದಸ್ಯರಾಗಲಿ, ವಿರೋಧ ಪಕ್ಷದ ಸದಸ್ಯರಾಗಲಿ ಈ ಬಗ್ಗೆ ಬಾಯಿ ಬಿಚ್ಚಲಿಲ್ಲ. ಅವರು ಸದನಕ್ಕೆ ಗೈರು ಹಾಜರಾಗಿದ್ದೆ ಹೆಚ್ಚು. ಹಾಗಾದರೆ ಈ ಸಮಸ್ಯೆಗಳು ಎಲ್ಲಿ ಚರ್ಚೆಯಾಗಬೇಕು?

ನಾಪತ್ತೆಯಾದವರು, ಅಸಹಜವಾಗಿ ಸತ್ತವರು.. ..

ಇತ್ತೀಚೆಗೆ ಬೆಳಕಿಗೆ ಬಂದಿರುವ ಇನ್ನೊಂದು ಆತಂಕಕಾರಿ ಅಂಶವೆಂದರೆ ಅಧಿವೇಶನ ಪ್ರಾರಂಭಕ್ಕೆ ಒಂದು ವಾರದ ಮೊದಲು ಶಾಸಕಿ ಶಕುಂತಲಾಶೆಟ್ಟಿಯವರ ಅಧ್ಯಕ್ಷತೆಯ ಸಮಿತಿಯು ಸರ್ಕಾರಕ್ಕೆ ಕೊಟ್ಟಿರುವ ವರದಿಯ ಪ್ರಕಾರ ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 365 ಯುವತಿಯರು ನಾಪತ್ತೆಯಾಗಿದ್ದಾರೆ. ಇವರಲ್ಲಿ ಬಹುತೇಕರು ಅತ್ಯಾಚಾರಕ್ಕೆ ಒಳಗಾಗಿ ಕೊಲೆಯಾಗಿರಬಹುದೆಂದು ಶಂಕಿಸಿದ್ದಾರೆ. ಇದಕ್ಕೆ ಪುಷ್ಠಿ ಕೊಡುವ ರೀತಿಯಲ್ಲೆ ನವೆಂಬರ್ 5ನೇ ತಾರೀಖು ರಾಜ್ಯದ ಗೃಹ ಮಂತ್ರಿಯವರು ಇನ್ನೊಂದು ಆತಂಕಕಾರಿ ವರದಿಯನ್ನು ಸದನಕ್ಕೆ ಕೊಟ್ಟಿದ್ದಾರೆ. ಗೃಹಮಂತ್ರಿಯವರು ಕೊಟ್ಟಿರುವ ವರದಿ ಪ್ರಕಾರ ಕಳೆದ 4 ವರ್ಷಗಳಲ್ಲಿ 38,458 ಜನ ಯುವಕ ಯುವತಿಯರು ಕಾಣೆಯಾಗಿದ್ದಾರೆ. ಈ ಪೈಕಿ 33,207 ಜನರನ್ನು ಪತ್ತೆ ಹಚ್ಚಲಾಗಿದೆ, ಕಾಣೆಯಾಗಿರುವವರ ಪೈಕಿ 26,663 ಜನ ಯುವತಿಯರೇ ಆಗಿದ್ದಾರೆ. ಇದರಲ್ಲಿ 2,670 ಯುವತಿಯರು, 2,571 ಯುವಕರು ಇನ್ನೂ ಪತ್ತೆಯಾಗಿಲ್ಲ. ಇಂತಹ ಗಂಭೀರ ಪರಿಸ್ಥಿತಿ ರಾಜ್ಯದಲ್ಲಿ ಇದೆ ಎಂದು ಸಿಪಿಐ(ಎಂ), ಡಿವೈಎಫ್ಐ, ಎಸ್ಎಫ್ಐ ಮತ್ತು ಜನವಾದಿ ಮಹಿಳಾ ಸಂಘಟನೆಗಳು ಧರ್ಮಸ್ಥಳದ ಸೌಜನ್ಯ ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ಕಳೆದ ಒಂದು ವರ್ಷದಿಂದ ಹೋರಾಟ ನಡೆಸುತ್ತಿವೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ನಡೆದಿರುವ 452 ಅಸಹಜ ಸಾವುಗಳು(93 ಜನ ಮಹಿಳೆಯರು)ಸೇರಿದಂತೆ ಎಲ್ಲವನ್ನೂ ಸಿಬಿಐ ತನಿಖೆಗೊಳಪಡಿಸಬೇಕೆಂದು ಸರ್ಕಾರದ ಮೇಲೆ ಒತ್ತಾಯ ಹಾಕುತ್ತಿವೆ. ಆದರೂ ಸರ್ಕಾರ ಇದರ ಬಗ್ಗೆ ಮಾತನಾಡುತ್ತಿಲ್ಲ. ಈಗ ಶಕುಂತಲಾಶೆಟ್ಟಿ ಕೊಟ್ಟಿರುವ ವರದಿ ಮತ್ತು ರಾಜ್ಯದ ಗೃಹ ಮಂತ್ರಿಗಳು ಶಾಸನಸಭೆಯಲ್ಲಿ ಕೊಟ್ಟ ವರದಿಯ ಮೇಲೆ ಆಡಳಿತ ಪಕ್ಷದ ಸದಸ್ಯರಾಗಲಿ, ವಿರೋಧ ಪಕ್ಷದ ಸದಸ್ಯರಾಗಲಿ ಮೌನ ವಹಿಸಿರುವುದು, ಕನಿಷ್ಠ ಮಹಿಳಾ ಸದಸ್ಯರಾದರೂ ದನಿ ಎತ್ತದಿರುವುದು ಶೋಚನೀಯ ಸಂಗತಿಯಾಗಿದೆ.



ಇದೇ ಸಂದರ್ಭದಲ್ಲಿ ನಡೆದ ಹಲವಾರು ಹೋರಾಟಗಳ ಪೈಕಿ ಎರಡು ಪ್ರಮುಖ ಹೋರಾಟಗಳ ಬಗ್ಗೆ ಸದನವು ಹೇಗೆ ವರ್ತಿಸಿತು ಎಂಬುದನ್ನು ಗಮನಿಸಬೇಕಾಗಿದೆ. ಒಂದು ಕಬ್ಬು ಬೆಳೆಗಾರರರದು ಇನ್ನೊಂದು ಅಸಂಘಟಿತ ಕಾರ್ಮಿಕರದ್ದು. ಕಬ್ಬು ಬೆಳೆಗಾರರು ಕಳೆದ 6 ತಿಂಗಳಿನಿಂದ ತಮ್ಮ ಸಂಕಷ್ಟಗಳನ್ನು ಹಲವಾರು ಸಂದರ್ಭದಲ್ಲಿ ಹಲವಾರು ರೀತಿಯಲ್ಲಿ ನಿವೇದಿಸಿಕೊಂಡರೂ ಸ್ಪಂದಿಸದ ರಾಜ್ಯ ಸರ್ಕಾರವು

ಪುಟ 15 ಕ್ಕೆ

ಮಡೆಸ್ನಾನ, ಪಂಕ್ತಿಭೇದ, ಮೂಢನಂಬಿಕೆ ಆಚರಣೆಗಳ ವಿರುದ್ಧ ರಾಜ್ಯವ್ಯಾಪಿ ವ್ಯಾಪಕ ಪ್ರತಿಭಟನಾ ಚಳುವಳಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಡಿಸೆಂಬರ್ 08, 2013 ರಂದು ರಾಜ್ಯದಾದ್ಯಂತ ಮಡೆಸ್ನಾನ, ಪಂಕ್ತಿಭೇದ ಮತ್ತು ಅಸ್ಪೃಶ್ಯತೆ, ಜಾತಿ ತಾರತಮ್ಯ ಮತ್ತು ಅನಾಗರೀಕ ಮೌಢ್ಯಾಚರಣೆಗಳ ವಿರುದ್ಧ 'ಮೂಢನಂಬಿಕೆ ಆಚರಣೆ ಪ್ರತಿಬಂಧಕ ಕಾಯ್ದೆ'ಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನಾ ಧರಣಿಯನ್ನು ನಡೆಸಲು ಕರೆ ನೀಡಿತ್ತು. ಪ್ರತಿಭಟನೆಯು ವ್ಯಾಪಕವಾಗಿ ನಡೆದ ಬಗೆಗೆ ಹಾಗೂ ಕರೆಗೆ ವ್ಯಾಪಕ ಜನಬೆಂಬಲ ದೊರೆತ ಬಗೆಗೆ ವರದಿಗಳು ಬರುತ್ತಿವೆ.

ಚಿಕ್ಕಬಳ್ಳಾಪುರ: ಸಾವಿರ ಪ್ರತಿಭಟನಾಕಾರರ ಧಿಕ್ಕಾರ–ಹೋರಾಟ ಕಳ್ಳಹಾದಿಯಲ್ಲಿ ಎಂಜಲೆಲೆ ಮೇಲೆ ಉರುಳಾಟ.

ಚಿಕ್ಕಬಳ್ಳಾಪುರದ ಸುಬ್ಬರಾಯ ಪೇಟೆಯ ಸುಬ್ರಮಣ್ಯ ದೇವಸ್ಥಾನದಲ್ಲಿ ಮಡೆಸ್ನಾನ ಪದ್ದತಿ ಆಚರಣೆಯಲ್ಲಿರುವ ಬಗ್ಗೆ ಮತ್ತು ಡಿಸೆಂಬರ್ 8, 2013 ರಂದು ಅದು ನಡೆಯುವ ಬಗ್ಗೆ ಮೊದಲೇ ಗೊತ್ತಿದ್ದ ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯು ಇದಕ್ಕೆ ತಡೆ ಹಾಕುವ ನಿಟ್ಟಿನಲ್ಲಿ ಹಲವು ನಿರ್ಧಿಷ್ಟ ಕ್ರಮಗಳನ್ನು ವಹಿಸಿತ್ತು.

ಡಿ. 2 ರಂದೇ ಸಿಪಿಐ(ಎಂ) ನಿಯೋಗ ಜಿಲ್ಲಾ ಎಸ್.ಪಿ. ಅವರಿಗೆ ಮನವಿ ನೀಡಿ ಮಡೆಸ್ನಾನ ತಡೆಗೆ ಕ್ರಮವಹಿಸಲು ಕೋರಲಾಗಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಕೆಲವು ಕ್ರಮವಹಿಸಿತ್ತು. ಚಿಕ್ಕಬಳ್ಳಾಪುರದ ತಹಸಿಲ್ದಾರ್ ಮಡೆಸ್ನಾನದ ಆಚರಣೆ ನಡೆಸದಂತೆ ದೇವಸ್ಥಾನದ ಆಡಳಿತ ಮಂಡಳಿಯವರಿಗೆ ಲಿಖಿತ ಸೂಚನೆ ಕೂಡ ನೀಡಿದ್ದರು. ಇಷ್ಟಿದ್ದರೂ ಹೇಗಾದರೂ ಮಡೆಸ್ನಾನ ನಡೆಯಬಹುದು ಎಂಬ ಆತಂಕವಿದ್ದ ಸಿಪಿಐ(ಎಂ) ಯೋಜನೆಯಂತೆ ಡಿಸೆಂಬರ್ 8 ರಂದು ಪ್ರತಿಭಟನೆ ನಡೆಸುವುದಾಗಿ ಕೂಡ ಘೋಷಿಸಿತ್ತು. ಡಿಸೆಂಬರ್ 7 ರ ರಾತ್ರಿ ಜಿಲ್ಲಾ ಎಸ್.ಪಿ. ಈ ಸಂಬಂಧ ಸಿಪಿಐ(ಎಂ) ಮುಖಂಡರನ್ನು ಕರೆಸಿಕೊಂಡು ಮಡೆಸ್ನಾನ ನಡೆಯದಂತೆ ಕ್ರಮವಹಿಸಿರುವ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಡಬೇಕೆಂದು ಕೇಳಿದ್ದರು. ಆದ–ರೆ ಸಿಪಿಐ(ಎಂ) ಎಚ್ಚರಿಕೆಯ ಕ್ರಮವಾಗಿ ಯೋಜನೆಯಂತೆ ಪ್ರತಿಭಟನೆಗೆ ಮುಂದಾಯಿತು.

ಬೃಹತ್ ಮೆರವಣಿಗೆ–ಪ್ರತಿಭಟನಾ ಸಭೆ

ಸು. ಒಂದು ಸಾವಿರ ಜನರಷ್ಟು ಪ್ರತಿಭಟನಾಕಾರರು ಡಿ. 8 ರಂದು ಸೇರಿ ಬಳ್ಳಾರಿ–ಬೆಂಗಳೂರು ರಸ್ತೆಯಲ್ಲಿ ಮೆರವಣಿಗೆ ನಡೆಸಿ ಸುಬ್ರಮಣ್ಯ ದೇವಸ್ಥಾನದ ಎದುರು ಪ್ರತಿಭಟನೆ ಆರಂಭಿಸಿದ್ದಾರೆ. ಈ ಹಂತದಲ್ಲಿ ಸುಬ್ರಮಣ್ಯ ದೇವಸ್ಥಾನದ ಆಡಳಿತ ಮಂಡಳಿ ತಮ್ಮ ಧ್ವನಿವರ್ಧಕದಲ್ಲಿ ಆಡಳಿತ ಮಂಡಳಿಯು ಮಡೆಸ್ನಾನ ಆಚರಣೆಯನ್ನು ರದ್ದು ಮಾಡಿದ್ದು ಯಾರೂ ಅದನ್ನು ಆಚರಣೆ ಮಾಡಬಾರದು ಎಂದು ಹಲವಾರು ಸಾರಿ ಘೋಷಣೆ ಮಾಡಿದ್ದಾರೆ.


'ಮನುಷ್ಯರಲ್ಲಿ ನಂಬಿಕೆ'

ಈ ನಡುವೆ ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿ ಮಡೆಸ್ನಾನ ಒಂದು ಕೊಳಕು ಪದ್ಧತಿಯಾಗಿದೆ. ಅದನ್ನು ಆಚರಿಸಬಾರದು. ಅದು ನಿಲ್ಲಬೇಕು. ವೇದ ಶಾಸ್ತ್ರಗಳಲ್ಲಿ ಕೂಡ ಮಡೆಸ್ನಾನಕ್ಕೆ ಯಾವುದೇ ಸಮರ್ಥನೆ ಇಲ್ಲ. ಇದು ಮನುಷ್ಯನ ಘನತೆಗೆ ಕುಂದು ತರುವ ಆಚರಣೆ ಎಂದು ಹೇಳಿದ್ದಾರೆ. ನಂತರ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪಿ. ಮುನಿವೆಂಕಟಪ್ಪ ಮುಂತಾದವರು ಸಹ ಮಾತನಾಡಿದ್ದಾರೆ.

ಈ ಹಂತದಲ್ಲಿ ಪ್ರತಿಭಟನಾ ಸ್ಥಳಕ್ಕೆ ಬಂದ ಸುಬ್ರಮಣ್ಯ ದೇವಸ್ಥಾನದ ಆಡಳಿತ ಮಂಡಳಿಯವರು ದೇವಸ್ಥಾನದಲ್ಲಿ ಮಡೆಸ್ನಾನವನ್ನು ನಿಷೇಧಿಸಿರುವುದಾಗಿಯೂ ಪ್ರತಿಭಟನೆಯನ್ನು ಕೈಬಿಡಬೇಕೆಂದೂ ಸಿಪಿಐ(ಎಂ) ಮುಖಂಡರನ್ನು ವಿನಂತಿಸಿಕೊಂಡಿದ್ದಾರೆ. ಮತ್ತು ಮಡೆಸ್ನಾನಕ್ಕೆ ಅವಕಾಶ ನೀಡುವುದಿಲ್ಲವೆಂದು ಸ್ಪಷ್ಟ ಭರವಸೆ ನೀಡಿದ್ದಾರೆ. ತಾಲ್ಲೂಕು ಮತ್ತು ಜಿಲ್ಲಾ ಆಡಳಿತದ ಕ್ರಮಗಳು ಮತ್ತು ದೇವಸ್ಥಾನದ ಆಡಳಿತ ಮಂಡಳಿಯ ಮುಖ್ಯಸ್ಥರ ಮನವಿ ಇವೆಲ್ಲವನ್ನೂ ಪರಿಗಣಿಸಿದ ಸಿಪಿಐ(ಎಂ) ಮುಖಂಡರು 'ತಾವು ಮನುಷ್ಯರಲ್ಲಿ ಮತ್ತು ಅವರ ಮಾತಿನಲ್ಲಿ ನಂಬಿಕೆ ಇಡುತ್ತೇವೆ' ಎಂದು ಘೋಷಿಸಿ ಮಧ್ಯಾಹ್ನ ಸುಮಾರು 2.00 ಗಂ–ಟೆಗೆ ಪ್ರತಿಭಟನೆಯನ್ನು ಮುಕ್ತಾಯಗೊಳಿಸಿ ತೆರಳಿದ್ದಾರೆ.

ವಂಚನೆ

ಪ್ರತಿಭಟನಾಕಾರರು ಅಲ್ಲಿಂದ ಹೋದ ಮೇಲೆ ಬ್ರಾಹ್ಮಣರು ಉಂಡ ಎಲೆಗಳ ಮೇಲೆ ಉರುಳಾಟ ಶುರುವಾಗಿದೆ. ಪ್ರತಿಭಟನಾಕಾರರು ಮತ್ತು ಮಾಧ್ಯಮಗಳ ಕಣ್ಣು ತಪ್ಪಿಸಿ ಎಂಜಲೆಲೆ ಮೇಲೆ ಉರುಳಾಡೋಣ. ಆಚರಣೆಯನ್ನು ಗುಟ್ಟಾಗಿ ನಡೆಸೋಣ ಎಂಬುದು ಆಡಳಿತ ಮಂಡಳಿಯವರ ಯೋಜನೆ ಎಂಬುದು ಇದರಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಈ ಬೆಳವಣಿಗೆಗಳ ಬಗೆಗೆ ಸುಳಿವು ಗೊತ್ತಾದ ಸು. ಹತ್ತುಜನ ಸಿಪಿಐ(ಎಂ) ಕಾರ್ಯಕರ್ತರು ದೇವಸ್ಥಾನದ ಬಳಿಗೆ ತೆರಳಿದ್ದಾರೆ. ಎಂಜಲೆಲೆ ಮೇಲೆ ಜನ ಉರುಳುವುದು ಕಂಡು 'ಮಡೆಸ್ನಾನ'ದ ತಡೆಗೆ ಮುಂದಾಗಿದ್ದಾರೆ. ಆದರೆ ಸು. ನೂರೈವತ್ತು ಜನ ಮಡೆಸ್ನಾನದ ಬೆಂಬಲಿಗರು ಸೇರಿಕೊಂಡು ಸಿಪಿಐ(ಎಂ) ಕಾರ್ಯಕರ್ತರ



ಮೇಲೆ ಹಲ್ಲೆ ಮಾಡಿ, ಮಹಿಳೆಯರ ಜುಟ್ಟು ಹಿಡಿದು ಎಳೆದಾಡಿ ಅವರನ್ನು ಹೊರದಬ್ಬಿದ್ದಾರೆ. ಅನಾಗರೀಕ ಮಡೆಸ್ನಾನ ಪದ್ಧತಿಗೆ ಧಿಕ್ಕಾರ ಹೇಳುತ್ತಾ ಕಾರ್ಯಕರ್ತರು ಅಲ್ಲೇ ಪ್ರತಿಭಟನೆ ಕೂತು ಹೋರಾಟ ಆರಂಭಿಸಿದ್ದಾರೆ.

ಈ ನಡುವೆ ಎಂಜಲೆಲೆ ಮೇಲಿನ ಅಸಹ್ಯಕರ ಉರುಳಾಟವನ್ನು ಟಿವಿ 9 ವಾಹಿನಿಯವರು ಮತ್ತು ಪ್ರಜಾವಾಣಿ ಪತ್ರಿಕೆಯ ಛಾಯಾಗ್ರಾಹಕರು ಸೆರೆಹಿಡಿದಿರುವುದು ಗೊತ್ತಾಗಿ ರಹಸ್ಯ ಮಡೆಸ್ನಾನ ಬಯಲಾಗುವ ಭೀತಿಯಲ್ಲಿ ಮಡೆಸ್ನಾನದ ಬೆಂಬಲಿಗರು ಟಿವಿ 9 ಮತ್ತು ಪ್ರಜಾವಾಣಿ ಛಾಯಾಗ್ರಾಹಕರ ಕ್ಯಾಮೆರಾಗಳನ್ನು ಕಿತ್ತು–ಕೊಂಡಿದ್ದಾರೆ.

ತಮ್ಮ ತತ್ವಬದ್ಧ ಹೋರಾಟವನ್ನು ಬಿಡದ ಸಿಪಿಐ(ಎಂ) ಕಾರ್ಯಕರ್ತರು ರಾತ್ರಿ 11 ಗಂಟೆ–ಯ ವರೆಗೆ ಪ್ರತಿಭಟನೆ ಮುಂದುವರೆಸಿದ್ದಾರೆ.

ಮಡೆಸ್ನಾನದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ರಾಜಕೀಯ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಬಗ್ಗೆ ಪೋಲೀಸರು ಸುಬ್ರಮಣ್ಯ ದೇವಾಲಯ ಆಡಳಿತ ಮಂಡಳಿಯ ಅಧ್ಯಕ್ಷ ಮತ್ತು ಪ್ರಧಾನ ಅರ್ಚಕರ ವಿರುದ್ಧ ಮೊಕದ್ದಮೆ ದಾಖಲಿಸಿದ್ದಾರೆ. ಇದಾದ ಮೇಲೆ ಮಾತ್ರವೆ ಸಿಪಿಐ(ಎಂ) ತನ್ನ ಪ್ರತಿಭಟನೆ ವಾಪಸ್ ಪಡೆದಿದೆ.

ಯಾರು ಉರುಳಿದರೇನು ಸಂದೇಶ ಒಂದೇ

ಚಿಕ್ಕಬಳ್ಳಾಪುರದ ಈ ಸುಬ್ರಮಣ್ಯ ದೇವಾಲಯದಲ್ಲಿ ಊಟಮಾಡಿ ಎಂಜಲೆಲೆ ಬಿಟ್ಟ ಸಮುದಾಯದ ಜನರೇ ಸೇರಿ ಎಲೆ ಮೇಲೆ ಉರುಳಾಡಿದರಂತೆ. ಎಂಜಲೆಲೆ ಮೇಲೆ ಯಾರು ಉರುಳಾಡಿದರೂ ಅದು ಮನುಷ್ಯತ್ವದ ಘನತೆಗೆ ಕುಂದು. ಅದು ಮೊದಲೇ ಶೋಷಣೆಗೆ ಅನ್ಯಾಯಕ್ಕೆ ತುತ್ತಾದ ಶೂದ್ರ–ದಲಿತ ಮುಂತಾದ ಜನರಿಗೆ ಕೆಟ್ಟ ಸಂದೇಶ ನೀಡುವ ಪದ್ಧತಿ. ಇದು ಮೂಢ ನಂಬಿಕೆಯನ್ನು ಹರಡುವ ವಿಕೃತ ಕೃತ್ಯ. ಸಮಾಜಕ್ಕೆ ಒಂದು ಕೆಟ್ಟ ಮಾದರಿ ಹಾಕಿಕೊಡುವ ದುಷ್ಕೃತ್ಯ ಎಂಬುದು ಇಲ್ಲಿ ಮಡೆಸ್ನಾನ ನಡೆಸುವುದನ್ನು ಬೆಂಬಲಿಸುವ ಕೆಲವರಿಗಾದವರು ಗೊತ್ತಿಲ್ಲ ಎಂದ–ರೆ ನಂಬುವುದು ಕಷ್ಟ. ಬ್ರಾಹ್ಮಣರೇ ಎಂಜಲೆಲೆ ಮೇಲೆ ಉರುಳುತ್ತಾರೆ. ಇನ್ನು ಕೆಳಜಾತಿಯವರು ಉರುಳಿದರೆ ಏನು ಮಹಾ ? ಇದರಲ್ಲಿ ಬಲತ್ಕಾರ ಎಲ್ಲಿದೆ ? ಪ್ರಗತಿಪರರು ಈ ವಿಷಯದಲ್ಲಿ ಯಾಕೆ ಇಲ್ಲದ ರಂಪ ರಾಮಾಯಣ ಮಾಡಬೇಕು !! ಕುಕ್ಕೆ ಸುಬ್ರಮಣ್ಯ ಸೇರಿದಂತೆ ಮಡೆಸ್ನಾನ ಆಚರಿಸುವ ದೇವಸ್ಥಾನಗಳ ವಿರುದ್ಧ ಯಾಕೆ ಪ್ರಚಾರ ಮಾಡಬೇಕು ಎಂಬ ಭಾವನೆಗಳೆಲ್ಲವೂ .ಈ ಪ್ರಕರಣದಲ್ಲಿ ಇದ್ದಂತಿದೆ.

ಸಿಪಿಐ(ಎಂ) ಮಾತ್ರ ಮಡೆಸ್ನಾನದಂತಹ ಅನಿಷ್ಟ ಆಚರಣೆ ಬಗೆಗೆ ತನ್ನ ದೃಢ ಹೋರಾಟವನ್ನು ಮುಂದುವರೆಸುವ ಅಚಲ ತೀರ್ಮಾನವನ್ನು ಪ್ರಕಟಿಸಿದೆ.

ಮಂಗಳೂರು : ಅನಿಷ್ಟ ಮಡೆ ನಿಷೇಧಕ್ಕಾಗಿ ಜನತೆಯ ಒತ್ತಾ

ಧಾರ್ಮಿಕ ಕ್ಷೇತ್ರಗಳಲ್ಲಿ ಅನಿಷ್ಟ ನಡೆಯುತ್ತಿದ್ದಲ್ಲಿ ಅದನ್ನು ತಡೆಯಬೇಕ ಸರಕಾರದ ಕರ್ತವ್ಯ; ಸರಕಾರ ಅದನ್ನು ಮ ಹೋದದ್ದರಿಂದ ಅನಿಷ್ಟ ಆಚರಣೆ ತಡೆಯಬೇಕೆಂದು ಜನತೆ ಒಟ್ಟಾಗಿ ಒತ್ತಾಯಿ ಎಂದು ಸಿಪಿಐ(ಎಂ) ರಾಜ್ಯ ಕಾಯ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀ ಹೇಳಿದರು. ಮಂಗಳೂರಿನ ಜಿಲ್ಲಾಧಿಕಾರಿ ಎದುರು ಸಿಪಿಐ(ಎಂ) ದ.ಕ. ಜಿಲ್ಲಾ



ಏರ್ಪಡಿಸಿದ್ದ ಪ್ರತಿಭಟನಾ ಪ್ರದರ್ಶನ ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

66 ವರ್ಷಗಳ ದೇಶದ ಸ್ವಾತ ಜಾತ್ಯತೀತ ಸಂವಿಧಾನ ಅಂಗೀಕಾರ ಬಳಿಕವೂ ಸಾರ್ವಜನಿಕವಾಗಿ ಪಂಕ್ತಿ ಮೇಲ್ಜಾತಿಯವರು ಉಂಡ ಎಂಜಲೆಲೆಗಳ ಮಡೆಸ್ನಾನವೆಂಬ ಉರುಳು ಸೇವೆ ಮಾಡು ದುರಂತ ಮತ್ತು ಅದು ಸಂವಿಧಾನದ ಆಶಯ ಹಾಗೂ ಸಂವಿಧಾನ ಹಾರೈಸುವ ವೈಜ ಮನೋಭಾವಕ್ಕೇ ವಿರುದ್ಧವಾದುದು ಕೆಳೆದ ಎರಡು ವರ್ಷಗಳಿಂದಲೂ ಸಿಪಿಐ(ಪ್ರತಿಭಟನೆಯನ್ನು ನಡೆಸುತ್ತಾ ಬಂದಿದೆ. ಹಿ ಬಿಜೆಪಿ ಸರಕಾರ ಇದನ್ನು ಮಾಡಲಿಲ್ಲ. ಕಾಂ ಆಡಳಿತಕ್ಕೆ ಬಂದರೂ ಪರಿಸ್ಥಿತಿ ಬದಲ ಎಂದು ಟೀಕಿಸಿದರು.

ಸಿಪಿಐ(ಎಂ) ಜನರ ಆರ್ಥಿಕ ಶೋಷಣ ವಿರುದ್ಧ ಹೋರಾಡುವುದರ ಜೊತೆಗೆ ಸಾ ಶೋಷಣೆ, ತಾರತಮ್ಯಗಳ ವಿರು ಹೋರಾಡುತ್ತಿದೆ. ಮೂಢನಂಬಿಕೆಗಳಿಂ ಜನರಿಗೆ ಆಗುತ್ತಿರುವ ಶೋಷಣೆ, ವಂಚ ವಿರುದ್ಧ ಶಾಸನವೊಂದನ್ನು ಜಾರಿಗೊಳಿಸಬೇಕ ಸಿಪಿಐ(ಎಂ) ಒತ್ತಾಯಿಸುತ್ತಿದೆ. ಸಂಘಪರಿವಾ ಒತ್ತಡಕ್ಕೆ ಮಣಿದು, ಪರಿಣತರು ಸಿದ್ಧ ಪಡಿ ಮಸೂದೆಯನ್ನು ಶಾಸನ ಸಭೆಯ ಮು ಮಂಡಿಸದೆ ಇರುವುದಕ್ಕೆ ಸಿದ್ಧರಾಮಯ್ಯನವ ಕೆ.ಆರ್.ಶ್ರೀಯಾನ್ ಟೀಕಿಸಿದರು. ಕ ಮಸೂದೆ ಸಾರ್ವಜನಿಕರಿಗೆ ಲಭ್ಯವಿದ್ದು, ಮಸ ಖಂಡಿತ ಧರ್ಮದ ಆಚರಣೆಗೆ ವಿರುದ್ಧವಾ ಧರ್ಮದ ಮೇಲೆ ಧಾಳಿ ನಡೆಯುತ್ತಿದೆ ಎ ಹೇಳುವವರು ಧರ್ಮದ ಹೆಸರಲ್ಲಿ ರಾಜಕೀ ಲಾಭ ಪಡೆಯುವ ಕೋಮುವಾದಿಗಳು ಎ ಅವರು ವಿವರಿಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಮುಖಂಡರ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸು ಕುಮಾರ್ ಬಜಾಲ್ ಪ್ರತಿಭಟನೆಯನ್ನು ಮಾತನಾಡಿದರು.ಪಕ್ಷದ ಜಿಲ್ಲಾ ಸಮಿತಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಹಾಸನದಲ್ಲಿ ಧರಣಿ –

ಅರಕಲಗೂಡಿನಲ್ಲಿ ಉರುಳುವವರಿಲ್ಲದೇ ಮಡೆಸ್ನಾನಕ್ಕೆ ತಡೆ

ಮಡೆಸ್ನಾನ, ಪಂಕ್ತಿಭೇದ ವಿರೋಧಿಸಿ ಹಾಸನ ಜಿಲ್ಲೆಯಲ್ಲಿ ಸು. 45 ಕ್ಕೂ ಹೆಚ್ಚು ಸಂಘಟನೆಗಳು ಒಂದೆಡೆ ಸೇರಿ ಬೆಳಗಿನಿಂದ ಸಂಜೆಯವರೆಗೆ ಹಾಸನದ ಹೇಮಾವತಿ ಪ್ರತಿಮೆಯ ಬಳಿ ಸಾಮೂಹಿಕ ಧರಣಿಯನ್ನು ನಡೆಸಲಾಯಿತು.

ಮಾನವೀಯತೆ ಇಲ್ಲದ ಯಾವುದೇ ಆಚರಣೆಯಾಗಲಿ ಪ್ರತಿಭಟಿಸಬೇಕು – ಜ.ಹೊ.ನಾ.

ಧರಣಿಯನ್ನು ಉಧ್ಘಾಟಿಸಿ ಮಾತನಾಡಿದ ಸಾಹಿತಿ ಜ.ಹೊ.ನಾರಾಯಣ ಸ್ವಾಮಿಯವರು ಅನಾದಿಕಾಲದಿಂದಲೂ ಪುರೋಹಿತಶಾಹಿ ವರ್ಗ ವ್ಯವಸ್ಥಿತವಾಗಿ ಮೌಢ್ಯವನ್ನು ಬಿತ್ತಿ, ಬೆಳೆಸಿಕೊಂಡು ಬರುತ್ತಿದೆ. ಹಿಂದೆ ಚಿಕ್ಕಮಗಳೂರಿನ ಸುತ್ತಮುತ್ತ ದಲಿತರನ್ನು ಮಾರಾಟ ಮಾಡುತ್ತಿದ್ದ ಪ್ರಕರಣಗಳು ದಾಖಲಾಗಿವೆ. ಮಾನವೀಯತೆ ಇಲ್ಲದ ಯಾವುದೇ ಆಚರಣೆಗಳು ನಡೆಯುತ್ತಿದ್ದರೂ ಅದನ್ನು ಪ್ರತಿಭಟಿಸಬೇಕು. ಒಂದೆಡೆ ಆಚರಿಸುವವರಿಗೆ ತಿಳುವಳಿಕೆ ನೀಡುವುದರ ಜೊತೆಯಲ್ಲೇ ಇಂತಹ ಆಚರಣೆಗಳನ್ನು ಸಂಪೂರ್ಣವಾಗಿ ನಿಷೇಧಿಸಬೇಕು ಎಂದರು.

ಮಡೆಸ್ನಾನ ಮೌಢ್ಯದ ಪರಮಾವಧಿ

– ನಿತ್ಯಾನಂದ ಸ್ವಾಮಿ

ಈ ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿಯವರು ವೈಜ್ಞಾನಿಕ ಮೌಲ್ಯ ರೂಢಿಸಿಕೊಳ್ಳಬೇಕೆನ್ನುವುದು ಸಂವಿಧಾನದ ಆಶಯವಾಗಿದ್ದು, ಮಡೆಸ್ನಾನ ಮೌಢ್ಯದ ಪರಮಾವಧಿಯಾಗಿದೆ. ಜಾತಿ ಆಧರಿಸಿ ತಾರತಮ್ಯ ಮಾಡುವುದು, ಪಂಕ್ತಿಭೇದ ನಡೆಸುವುದನ್ನು ಸಹಿಸಲು ಸಾಧ್ಯವಿಲ್ಲ. ಜನತೆಯ ಮನಸ್ಸಿನಲ್ಲಿ ಮೌಢ್ಯವನ್ನು ತುಂಬಿ ಪುರೋಹಿತರು ಲಕ್ಷಾಂತರ ರೂಪಾಯಿ ಹಣಗಳಿಸುತ್ತಿದ್ದಾರೆ. ಸುಬ್ರಮಣ್ಯದಲ್ಲಿ ಸರ್ಪವನ್ನು ಆರಾಧಿಸುತ್ತಿದ್ದವರು ಮಲೆಕುಡಿಯ ಜನಾಂಗದವರು. ಅದನ್ನೇ ಪುರೋಹಿತಶಾಹಿ ಬಂಡವಾಳ ಮಾಡಿಕೊಂಡಿದೆ. ಪೇಜಾವರ ಶ್ರೀಗಳು ಮಡೆಸ್ನಾನ ವಿರೋಧಿಸುತ್ತಲೇ ದೇವರಿಗೆ ಪೂಜಿಸುವ ಪ್ರಸಾದದ ಮೇಲೆ ಉರುಳು ಸೇವೆ ಮಾಡಬಹುದು ಎಂದು ಸರ್ಕಾರಕ್ಕೆ ಎಡೆಸ್ನಾನದ ಸಲಹೆ ನೀಡಿದ್ದಾರೆ. ಸರ್ಕಾರ ಇಂತಹ ಸಲಹೆಗಳನ್ನು ಬದಿಗೊತ್ತಿ ಮೌಢ್ಯ ನಿಷೇಧಕ್ಕೆ ಪ್ರತಿಬಂಧಕ ಕಾಯ್ದೆ ಜಾರಿಮಾಡಬೇಕೆಂದು ಒತ್ತಾಯಿಸಿದರು.

ಕೊರಳಿಗೆ ಚಿಪ್ಪು–ಸೊಂಟಕ್ಕೆ ಪೊರಕೆ ಕಟ್ಟಿ–ಕೊಂಡು ..

ಇದೇ ಸಂದರ್ಭದಲ್ಲಿ ತಮ್ಮ ಸ್ವಂತ ಅನುಭವಗಳನ್ನು ಹಂಚಿಕೊಂಡ ಹೊಳೆನರಸೀಪುರ ತಾಲ್ಲೂಕಿನ ಆಸ್ಪತ್ರೆ ನೌಕರರಾದ ದಲಿತ ಮಹಿಳೆ ಭಾಗ್ಯಮ್ಮ ನಾವುಗಳು ಊರಿನಲ್ಲಿ



ಮೇಲ್ಜಾತಿಯವರ ಕೇರಿಗಳಲ್ಲಿ ಓಡಾಡಬೇಕಾದರೆ ನಮ್ಮ ಕೊರಳಿಗೊಂದು ತೆಂಗಿನ ಚಿಪ್ಪು, ಸೊಂಟದ ಹಿಂಭಾಗಕ್ಕೆ ಪೊರಕೆಯೊಂದನ್ನು ಕಟ್ಟಿ–ಕೊಂಡು ಓಡಾಡುತ್ತಿದ್ದೆವು. ಈ ರೀತಿ ನಾವುಗಳು ಮಾಡದಿದ್ದರೆ ಆ ಊರುಗಳಲ್ಲಿ ಬದುಕಲು ಸಾಧ್ಯವೇ ಇರಲಿಲ್ಲ ಎಂದು ತಮ್ಮೂರಿನ ಹೃದಯ ವಿದ್ರಾವಕ ಘಟನೆಗಳನ್ನು ಎಳೆ ಎಳೆಯಾಗಿ ತೆರೆದಿಟ್ಟರು. ಇವುಗಳನ್ನು ಕೇವಲ ಪುಸ್ತಕಗಳಲ್ಲಿ ಓದಿ ತಿಳಿದುಕೊಂಡಿದ್ದ ನಮಗೆ ಅದನ್ನೆಲ್ಲ ಅನುಭವಿಸಿದವರು ನಮ್ಮ ಮುಂದೆ ನಿಂತು ಅವರ ಜೀವಂತ ಅನುಭವಗಳನ್ನು ಹಂಚಿಕೊಂಡದ್ದನ್ನು ಕೇಳಿದಾಗ ಜಾತಿ ವ್ಯವಸ್ಥೆ–ಅಸ್ಪೃಶ್ಯತೆಯ ಕ್ರೌರ್ಯದ ಕರಾಳತೆ ಪರಿಚಯವಾಯಿತು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾದ ಇಂದ್ರಮ್ಮ ಮಾತನಾಡಿ ನಮ್ಮ ಕುಟುಂಬ ಮೇಲ್ಜಾತಿಗೆ ಸಂಬಂಧಿಸಿದ್ದು ನಾವುಗಳು ಸಣ್ಣ ಮಕ್ಕಳಿದ್ದಾಗ ನಮ್ಮ ತಂದೆ ವ್ಯವಸಾಯ ಮಾಡಿಸಲು ದಲಿತರನ್ನು ಕೂಲಿಗೆ ಕರೆಸಿಕೊಂಡು ಅವರು ದಲಿತರು ಎನ್ನುವ ಕಾರಣಕ್ಕಾಗಿಯೇ ಅತ್ಯಂತ ಕಡಿಮೆ ಕೂಲಿಯನ್ನು ನೀಡುತ್ತಿದ್ದರು. ಈ ಕೂಲಿ ಅವರ ಊಟಕ್ಕೂ ಸಾಕಾಗುತ್ತಿರಲಿಲ್ಲ. ಕೂಲಿಗೆ ಬಂದವರಿಗೆ ತೆಂಗಿನ ಚಿಪ್ಪಿನಲ್ಲಿ ಕುಡಿಯಲು ನೀರು ಕೊಡುತ್ತಿದ್ದರು. ಆಗ ನಮಗೆ ಇದೆಲ್ಲವು ಅರ್ಥವಾಗುತ್ತಿರಲಿಲ್ಲ. ಇದಷ್ಟೆ ಅಲ್ಲದೆ ಮೇಲ್ಜಾತಿಯವರು ನಡೆದು ಹೋಗುವ ಮೊದಲು ಕೆಳಜಾತಿಯವರು ಯಾರಾದರು ನಡೆದುಕೊಂಡು ಹೋಗಿದ್ದರೆ ಅದು ಹನ್ನೆರಡು ಹೆಜ್ಜೆಗಿಂತ ಕಡಿಮೆಯಿದ್ದರೆ ಮೇಲ್ಜಾತಿಯವರು ಕೂಡಲೇ ವಾಪಸ್ ಮನೆಗಳಿಗೆ ತೆರಳಿ 'ಮಡಿ'ಯಾಗಿ ಬರುತ್ತಿದ್ದರು. ಇಂತಹ ಘಟನೆಗಳನ್ನು ನೇರವಾಗಿ ನೋಡಿ ಅನುಭವಿಸಿದ ನಾವುಗಳು ಎಂತಹ ಅನಾಗರೀಕ ಸಮಾಜದಲ್ಲಿದ್ದೆವು ಎಂದೆನಿಸುತ್ತದೆ ಎಂದರು.

ಈ ಸಾಮೂಹಿಕ ಪ್ರತಿಭಟನಾ ಧರಣಿಯಲ್ಲಿ ಸಾಹಿತಿಗಳಾದ ರೂಪ ಹಾಸನ, ದಲಿತ ಮುಖಂಡರಾದ ಸಂದೇಶ್, ವಿಜಯಕುಮಾರ್, ಅಬ್ದುಲ್ ಸಮದ್ ಡಾ॥ವೈ.ಎಸ್.ವೀರಭದ್ರಪ್ಪ ಮತ್ತಿತರೆ ಸಂಘಟನೆಗಳ ಮುಖಂಡರು ಮಾತನಾಡಿದರು.

ಧರಣಿಯ ಅಧ್ಯಕ್ಷತೆಯನ್ನ ಹಾಸನದ ಸಿಪಿಐ(ಎಂ) ದಲಿತ ಹಕ್ಕುಗಳ ಸಮಿತಿಯ ಸಂಚಾಲಕರಾದ ಧರ್ಮೇಶ್ ವಹಿಸಿದ್ದರು. ಪ್ರಾಸ್ತಾವಿಕವಾಗಿ ಸಿಪಿಐ(ಎಂ)ನ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ವಿ.ಸುಕುಮಾರ್ ಮಾತನಾಡಿದರು.

ಪ್ರತಿಭಟನಾ ಧರಣಿಗೆ ಪೂರಕವಾಗಿ ಭಾರತ ವಿದ್ಯಾರ್ಥಿ ಫೆಡರೇಷನ್ ಜಿಲ್ಲಾ ಸಮಿತಿಯಿಂದ ಕಾಲೇಜು ವಿದ್ಯಾರ್ಥಿಗಳಿಗೆ 'ಜಾತಿ ಅಸ್ಪೃಷ್ಯತೆ–ಆಧುನಿಕ ಭಾರತಕ್ಕಿರುವ ಸವಾಲುಗಳು' ಎಂಬ ವಿಷಯದ ಕುರಿತು ಪ್ರಬಂಧ ಸ್ಪ ರ್ಧೆ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಮೌಢ್ಯಾಚರಣೆಗಳ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಚಿತ್ರಕಲಾ ಸ್ಪರ್ಧೆಯನ್ನು ಖ್ಯಾತ ಚಿತ್ರ ಕಲಾವಿದರಾದ ಬಿ.ಎಸ್.ದೇಸಾಯಿಯವರು ಸ್ವತಃ ಚಿತ್ರವನ್ನು ರಚಿಸುವ ಮೂಲಕ ಉಧ್ಘಾಟನೆ ಮಾಡಿದರು.

ನಡೆಯದ ಮಡೆಸ್ನಾನ : ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಮನಾಥಪುರದ ಸುಬ್ರಮಣ್ಯಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರ್ಷ ಶಷ್ಠಿಯ ಸಂದರ್ಭದಲ್ಲಿ ಮಡೆಸ್ನಾನ ನಡೆಯುತ್ತಿತ್ತು. ಆದರೆ ಈ ವರ್ಷ ಇಲ್ಲಿ ಮೇಲ್ಜಾತಿಯವರು ಉಂಡು ಮುಗಿಸಿದ ಎಂಜಲು ಎಲೆಗಳನ್ನು ತುಂಬ ಸಮಯದವರೆಗೆ ಬಿಟ್ಟಿದ್ದರೂ ಯಾರೂ ಇದರ ಮೇಲೆ ಉರುಳಾಡಲಿಲ್ಲ. ನಂತರ ಎಲೆಗಳನ್ನೆಲ್ಲ ತೆಗೆಯಲಾಯಿತೆಂದು ದೇವಸ್ಥಾನದ ಆಡಳಿತ ಮಂಡಳಿಯವರು ಮಾಧ್ಯಮದವರಿಗೆ ತಿಳಿಸಿದರು. ಇದು ಇತ್ತೀಚಿನ ವರ್ಷಗಳಲ್ಲಿ ರಾಜ್ಯಾದ್ಯಂತ ತೀವ್ರಗೊಳ್ಳುತ್ತಿರುವ ಪ್ರತಿಭಟನೆಗಳ ಫಲವಾದ ಜಾಗೃತಿಯ ಕಾರಣದಿಂದ ಇಲ್ಲಿ ಮಡೆಸ್ನಾನ ನಿಂತಿದೆ ಎಂದು ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ.

– ಎಚ್.ಆರ್.ನವೀನ್‌ಕುಮಾರ್

→

ಉಡುಪಿಯಲ್ಲೂ ಪಂಕ್ತಿಭೇದ, ಮಡೆಸ್ನಾನದ ವಿರುದ್ಧ ಪ್ರತಿಭಟನೆ:

ಕುಕ್ಕೆ ಸುಬ್ರಹ್ಮಣ್ಯ ಸೇರಿದಂತೆ ರಾಜ್ಯದ ಸುಮಾರು 65 ಕಡೆಗಳಲ್ಲಿ ಮಡೆಸ್ನಾನದಂತಹ ಮೌಢ್ಯ ಹಾಗೂ ಅಂಧಶ್ರದ್ಧೆಯ ಆಚರಣೆಗಳು



ನಡೆಯುತ್ತಿದ್ದು, ಜಾತಿ ತಾರತಮ್ಯವನ್ನು ಎತ್ತಿ ಹಿಡಿಯುವ ಈ ಪಂಕ್ತಿಭೇದ, ಮಡೆಸ್ನಾನದಂತಹ ಎಲ್ಲಾ ಅನಿಷ್ಟ ಆಚರಣೆಗಳನ್ನು ಸರಕಾರ ನಿಷೇಧಿಸಬೇಕು ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಒತ್ತಾಯಿಸಿದರು.

ಡಿಸೆಂಬರ್ 8 ರಂದು ಉಡುಪಿ ಬಸ್ ನಿಲ್ದಾಣದ ಬಳಿಯ ಕ್ಲಾಕ್ ಟವರ್ ಎದುರು ಹಮ್ಮಿಕೊಳ್ಳಲಾದ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಬೆಂಗಳೂರು: ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಧರಣಿ.

ಬೆಂಗಳೂರಿನಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಜಂಟಿಯಾಗಿ ಪ್ರತಿಭಟನೆ ನಡೆಸಿದವು. ಮೈಸೂರು ಬ್ಯಾಂಕ್ ವೃತ್ತದಲ್ಲಿ ಬೆಳಿಗ್ಗೆ ಸಾಮೂಹಿಕ ಪ್ರತಿಭಟನಾ ಧರಣಿ ನಡೆಯಿತು. ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವರಲಕ್ಷ್ಮಿ, ದಲಿತ ಹಕ್ಕುಗಳ ಸಮಿತಿ ಮುಖಂಡರಾದ ಗೋಪಾಲಕೃಷ್ಣ ಅರಳಹಳ್ಳಿ, ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಮುಖಂಡರಾದ ಎಚ್. ಎನ್. ಗೋಪಾಲ ಗೌಡ, ಗೌರಮ್ಮ, ದಕ್ಷಿಣ ಸಮಿತಿ ಕಾರ್ಯದರ್ಶಿ ಕೆ. ಪ್ರಕಾಶ್, ಜಿಲ್ಲಾ ಮುಖಂಡರಾದ ಕೆ.ಎನ್.ಉಮೇಶ್, ಸು–ರೇಂದ್ರ ರಾವ್, ಮಂಜುನಾಥ್ ಬಿ.ಎನ್.ಮುಂತಾದವರು ಮಾತನಾಡಿದರು.



ಕೋಲಾರದಲ್ಲಿ ಡಿಸೆಂಬರ್ 8 ರಂದು 'ಮಡೆಸ್ನಾನ–ಪಂಕ್ತಿಬೇಧ–ಮೂಢನಂಬಿಕೆ ವಿರೋಧಿ ಸಮಾವೇಶ' ನಡೆದಿದೆ. ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಈ ಸಮಾವೇಶವನ್ನು ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯರಾದ ಎಸ್.ವೈ. ಗುರುಶಾಂತ್ ಉದ್ಘಾಟಿಸಿ ಮಾತನಾಡಿದ್ದಾರೆ.

ಮಡೆಸ್ನಾನ ಪಂಕ್ತಿಬೇಧಗಳು ಧಾರ್ಮಿಕ ಸ್ವರೂಪದವುಗಳಲ್ಲ. ಅವು ಜಾತಿ ತಾರತಮ್ಯವನ್ನು ಎತ್ತಿ ಹಿಡಿಯುವ ಪದ್ದತಿಗಳು. ಮೌಢ್ಯವನ್ನು ಬೆಂಬಲಿಸುವ, ಜನರ ಮುಗ್ದತೆ–ಹತಾಶೆಯನ್ನು ಬಂಡವಾಳ ಮಾಡಿಕೊಂಡು ಜನರನ್ನು ಶೋಷಣೆ ಮಾಡುವ ಪದ್ದತಿಗಳು. ಈ ಆಚರಣೆಗಳನ್ನು ಈಗ ವ್ಯಾಪಾರೀಕರಣ ಸಹ ಮಾಡಲಾಗುತ್ತಿದೆ. ಇದು ಸಂವಿಧಾನ ವಿರೋಧಿ. ನಾಡಿನ ಎಷ್ಟೋ ಮಠಾಧೀಶರೂ ಸಹ ಇದನ್ನು ವಿರೋಧಿಸಿದ್ದಾರೆ. ಜನರು ಈ ವಿಷಯದಲ್ಲಿ ಜಾಗೃತರಾಗಬೇಕು ಎಂದು ಗುರುಶಾಂತ್ ಅವರು ಈ ಸಂದರ್ಭದಲ್ಲಿ ಹೇಳಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣ ಸ್ವಾಮಿ, ಮುಖಂಡರಾದ



ಅರ್ಜುನನ್, ವಿ. ಗೀತಾ, ದಲಿತ ಚಳುವಳಿಯ ವಿವಿಧ ಮುಖಂಡರು ಈ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ್ದಾರೆ.

ದಾವಣಗೆರೆಯಲ್ಲಿ ಮಹಾನಗರ ಪಾಲಿಕೆ ಕಚೇರಿಯ ಬಳಿಯ ಗಾಂಧಿ ಪ್ರತಿಮೆ ಮುಂದೆ ಸೇರಿದ ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಶಿರಾಲಿ ಮಾರುಕಟ್ಟೆ ಬಳಿ ಪ್ರತಿಭಟನೆ ನಡೆದಿವೆ.

ಇದಲ್ಲದೇ ಗುಲ್ಬರ್ಗಾ, ಯಾದಗಿರಿ, ಬಳ್ಳಾರಿ, ಕೊಪ್ಪಳ, ರಾಯಚೂರು, ಬೆಳಗಾವಿ, ತುಮಕೂರು, ಮಂಡ್ಯ ಮುಂತಾದ ಕಡೆ ಸಿಪಿಐ(ಎಂ) ಸಮಿತಿಗಳು ಪ್ರತಿಭಟನೆಯಲ್ಲಿ ಜನರು ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

ಪಶ್ಚಿಮಘಟ್ಟಗಳ ಸಂರಕ್ಷಣೆ ಪ್ರಶ್ನೆಯಲ್ಲಿ ಗಣಿ ಮತ್ತು ಅರಣ್ಯ ಮಾಫಿಯಾಗಳ ಜೊತೆ ರೈತರು ಕೂಡ ಪರಿಸರವನ್ನು ಹಾಳ ಮಾಡುತ್ತಾರೆಂದು ವಿಭಾಗೀಕರಿಸಿರುವ 'ಡಾ. ಕಸ್ತೂರಿ ರಂಗನ್ ನೇತೃತ್ವದ ಸಮಿತಿ' ಮತ್ತು 'ಮಾಧವ ಗಾಡ್ಗೀಳ್ ಸಮಿತಿ' ವರದಿಗಳನ್ನು ಅಖಿಲ ಭಾರತ ಕಿಸಾನ್ ಸಭಾ ಸ್ಪಷ್ಟವಾಗಿ ತಿರಸ್ಕರಿಸಿದೆ. ಪರಿಸರ ಸಂರಕ್ಷಣೆಯಲ್ಲಿ ರೈತರು ಯಾವಾಗಲೂ ಮುಂದು ಎಂದಿರುವ ಕಿಸಾನ್ ಸಭಾ ಪಶ್ಚಿಮಘಟ್ಟ ಪ್ರದೇಶದ ಸಂರಕ್ಷಣೆಯಲ್ಲಿ ಸ್ಥಳೀಯ ರೈತಾಪಿ ಮತ್ತು ಜನಗಳ ಬೆಂಬ ಹಾಗೂ ಪ್ರಜ್ಞಾಪೂರ್ವಕ ಪಾಲ್ಗೊಳ್ಳುವಿಕೆ ಅಗತ್ಯ ಎಂದು ಪ್ರತಿಪಾದಿಸಿದೆ.

'ಜನರ ಬದುಕು ಮತ್ತು ಪಶ್ಚಿಮ ಘಟ್ಟ ಉಳಿಸಿ – ಕಸ್ತೂರಿ ರಂಗನ್ ಸಮಿತಿ ವರದಿ ತಿರಸ್ಕರಿಸಿ'

ಅಖಿಲ ಭಾರತ ಕಿಸಾನ್ ಸಭಾ ಕರೆ

ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು ಡಿಸೆಂಬರ್ 16, 2013ರಂದು ಕಛೇರಿ ಸುತ್ತೋಲೆ ಹೊರಡಿಸಿ 'ಕಸ್ತೂರಿರಂಗನ್ ಸಮಿತಿ ವರದಿಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತಿದ್ದೇವೆ' ಎಂದು ಹೇಳಿರುವುದನ್ನು ಅಖಿಲ ಭಾರತ ಕಿಸಾನ್ ಸಭಾ ಬಲವಾಗಿ ಖಂಡಿಸಿದೆ. ಉನ್ನತ ಮಟ್ಟದ ಕಾರ್ಯಕಾರಿ ಗುಂಪು (ಹೈ ಲೆವೆಲ್ ವರ್ಕಿಂಗ್ ಗ್ರೂಪ್) ಅಥವಾ 'ಕಸ್ತೂರಿ ರಂಗನ್ ಸಮಿತಿ' ಎಂದು ಕರೆಯುವ ಸಮಿತಿಯು ನೀಡಿರುವ ವರದಿಯು ಪಶ್ಚಿಮ ಘಟ್ಟದ 4,156 ಹಳ್ಳಿಗಳಲ್ಲಿ ಕೃಷಿ ಮತ್ತು ಇತರೆ ಮೂಲಭೂತ ಅಭಿವೃದ್ಧಿ ಕಾರ್ಯಗಳನ್ನು ನಿಯಂತ್ರಿಸಲು ಹೇಳುತ್ತದೆ. ಹಾಗಾಗಿ ತಕ್ಷಣವೇ ಈ ವರದಿಯನ್ನು ತಿರಸ್ಕರಿಸಬೇಕೆಂದು ಕಿಸಾನ್ ಸಭಾ ಒತ್ತಾಯಿಸಿದೆ. ರೈತರು ಮತ್ತು ಇತರೆ ಜನ ವಿಭಾಗಗಳ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಸರ್ವಾಧಿಕಾರಿ ಮಾದರಿಯಲ್ಲಿ ಆದೇಶವನ್ನು ನೀಡಿರುವುದು ಆಕ್ಷೇಪಾರ್ಹವಾಗಿದೆ. ಡಾ. ಕಸ್ತೂರಿ ರಂಗನ್ ನೇತೃತ್ವದ ಸಮಿತಿಯನ್ನು 'ಪಶ್ಚಿಮ ಘಟ್ಟ ಜೈವಿಕ ತಜ್ಞರ ಸಮಿತಿ' ಅಥವಾ 'ಮಾಧವ ಗಾಡ್ಗೀಳ್ ಸಮಿತಿ' ನೀಡಿದ್ದ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಲು ಶಿಫಾರಸ್ಸು ನೀಡಬೇಕೆಂದು ಮತ್ತು ಅಲ್ಲಿಯ ಸ್ಥಳೀಯ ಹಾಗೂ ಮೂಲ ನಿವಾಸಿಗಳ ಅಗತ್ಯ ಮತ್ತು ನಿರೀಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು 'ಗಾಡ್ಗೀಳ್ ಸಮಿತಿ'ಯ ವರದಿಯನ್ನು ಪರಿಶೀಲಿಸಬೇಕೆಂದು ರಚಿಸಲಾಗಿತ್ತು. ಆದರೆ ಈ ಸಮಿತಿಯು ರೈತರು ಮತ್ತು ಪಶ್ಚಿಮ ಘಟ್ಟ ಪ್ರದೇಶದ ಜನವಿಭಾಗಗಳು ಎತ್ತಿದ ದೂರುಗಳನ್ನು ಪರಿಹರಿಸಲು ಸಂಪೂರ್ಣವಾಗಿ ವಿಫಲವಾಗಿದೆ.

ಎರಡೂ ವರದಿಗಳು ತದ್ವಿರುದ್ಧ ಶಿಫಾರಸ್ಸುಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಒಂದನ್ನು ಪಕ್ಕಕ್ಕೆ ಇಟ್ಟು ಇನ್ನೊಂದನ್ನು ಏಕ ಪಕ್ಷೀಯವಾಗಿ ಆರಿಸಿಕೊಳ್ಳುವುದು ಪಶ್ಚಿಮಘಟ್ಟದ ಅತಿ ಸೂಕ್ಷ್ಮ ಜೈವಿಕ ಪರಿಸರದ ವಿರುದ್ಧ ಶತಶತಮಾನಗಳಿಂದ ಅಲ್ಲಿನ ಪರಿಸರದ ಜೊತೆ ಬದುಕಿಕೊಂಡು ಬಂದಿರುವ ಜನರನ್ನು ಎತ್ತಿ ಕಟ್ಟುವ ಕೆಲಸವಾಗಿದೆ. ಎರಡು ವರದಿಗಳು ಅಲ್ಲಿಯ ಜನರು ಪಶ್ಚಿಮ ಘಟ್ಟದ ಪರಿಸರವನ್ನು ಉಳಿಸುವಲ್ಲಿ ಮತ್ತು ವನ್ಯ ಜೀವಿಗಳು ಮತ್ತು ಜೈವಿಕ ವೈವಿಧ್ಯತೆಯನ್ನು ಕಾಪಾಡಿಕೊಳ್ಳುವಲ್ಲಿ ವಹಿಸುತ್ತಿರುವ ಪಾತ್ರವನ್ನು ನಿರ್ಲಕ್ಷಿಸಿವೆ. ಈ ವರದಿಗಳು ಅಧಿಕಾರಶಾಹಿ ವರದಿಗಳಾಗಿದ್ದು ಯಾವುಧೇ ಪ್ರಜಾಸತಾತ್ಮಕ ಕಣ್ಣೋಟವನ್ನು ಹೊಂದಿಲ್ಲದವಾಗಿದೆ. ಹಾಗಾಗಿ ಅವು ಅಲ್ಲಿನ ಜನತೆ ಮತ್ತು ಪರಿಸರದ ನಡುವಿನ ಸಂಬಂಧವನ್ನು ವೈಜ್ಞಾನಿಕವಾಗಿ ಅಂದಾಜಿಸುವಲ್ಲಿ ವಿಫಲವಾಗಿವೆ. ಹಾಗಾಗಿ ಸಮಾಜ ವಿಜ್ಞಾನಿಗಳು, ಪರಿಸರ ತಜ್ಞರು, ರೈತ ಸಂಘಟನೆಗಳು ಮತ್ತು ಸಂಬಂಧಿಸಿದ ರಾಜ್ಯಗಳ ವಿವಿಧ ರಾಜಕೀಯ ಪಕ್ಷಗಳ ಸರಿಯಾದ ಪ್ರಾತಿನಿಧ್ಯ ಇರುವ ವಿಶಾಲ ವ್ಯಾಪ್ತಿಯ ಸಮಿತಿಯಿಂದ ವೈಜ್ಞಾನಿಕ ಅಂದಾಜಿಗೆ ಬರಬೇಕೆಂದು 'ಅಖಿಲ ಭಾರತ ಕಿಸಾನ್ ಸಭಾ' ಒತ್ತಾಯಿಸಿದೆ. ಅತಿ ಸೂಕ್ಷ್ಮ ಜೀವ ವೈವಿಧ್ಯ ಮತ್ತು ಬದುಕಿನ ರಕ್ಷಣೆಯ ಬಗ್ಗೆ ಒಂದು ಸಮಗ್ರ ಅಭಿಪ್ರಾಯಕ್ಕೆ ಬರುವ ಮುನ್ನ ಅಲ್ಲಿಯ ಜನರು ಮತ್ತು ಸಂಬಂಧಿಸಿದ ಎಲ್ಲರೊಡನೆ ವಿಶಾಲ ವ್ಯಾಪ್ತಿಯ ಸಮಾಲೋಚನೆ ನಡೆಯಬೇಕಿದೆ.

ವ್ಯಾಪಕ ಪ್ರಮಾಣದ ಪ್ರತಿಭಟನೆಗಳನ್ನು ಗಮನಕ್ಕೆ ತೆಗೆದುಕೊಳ್ಳದ ಪರಿಸರ ಮತ್ತು ಅರಣ್ಯ ಸಚಿವಾಲಯವು ಆರು ರಾಜ್ಯಗಳ 4,156 ಹಳ್ಳಿಗಳನ್ನು (ಗೋವಾ–99, ಗುಜರಾತ್–64, ಕರ್ನಾಟಕ–1576, ಕೇರಳ–123, ಮಹಾರಾಷ್ಟ್ರ–2159, ಮತ್ತು ತಮಿಳುನಾಡು–135) ಒಳಗೊಂಡ ಪ್ರದೇಶವನ್ನು 'ಜೈವಿಕ ಸೂಕ್ಷ್ಮವಲಯ'ಗಳು ಎಂದು ಘೋಷಿಸಿ ಮತ್ತು ಆ ಮೂಲಕ ಅಲ್ಲಿ ಕೃಷಿ ಹಾಗೂ ಇನ್ನಿತರೆ ಮೂಲಭೂತ ಚಟುವಟಿಕೆಗಳನ್ನು ನಿಯಂತ್ರಿಸಿ 'ಕಸ್ತೂರಿ ರಂಗನ್ ಸಮಿತಿ'ಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಹೊರಟಿದೆ. ಕಂದಾಯ ಹಳ್ಳಿಗಳನ್ನು ಆಧರಿಸಿ 'ಜೈವಿಕ ಸೂಕ್ಷ್ಮ ವಲಯ'ಗಳು ಎಂದು ಘೋಷಿಸಿರುವುದು ಕೂಡ ಅವೈಜ್ಞಾನಿಕವಾಗಿದೆ.



ಜನಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇವಲ ಜನವಸತಿಗಳನ್ನು ವಿಸ್ತರಿಸುವ ಉದ್ದೇಶವಲ್ಲದೇ ಬೇರಾವುದೇ ಉದ್ದೇಶಕ್ಕೆ ಭೂಮಿಯ ಬಳಕೆಯನ್ನು ನಿಷೇಧಿಸುವ 'ಗಾಡ್ಗೀಳ್ ವರದಿ'ಯ ಶಿಫಾರಸ್ಸು ಮತ್ತು ಅದನ್ನು ಅನುಮೋದಿಸುವ 'ಕಸ್ತೂರಿ ರಂಗನ್ ಸಮಿತಿ'ಯ ವರದಿಯನ್ನು ಭಾರತ ಸರ್ಕಾರವು ಅಂಗೀಕರಿಸಿದೆ. ಈ ಕ್ರಮವು ಆ ಹಿಂದುಳಿದ ಪ್ರದೇಶದಲ್ಲಿ ಆಸ್ಪತ್ರೆ ಮತ್ತು ಶಾಲೆಯಂತಹ ಮೂಲಭೂತ ಸವಲತ್ತುಗಳನ್ನು ನೀಡಲು ನಿಯಂತ್ರಣ ಹೇರುತ್ತದೆ. ಇದನ್ನು ಯಾವುದೇ ಕಾರಣಕ್ಕೆ ಒಪ್ಪಲು ಸಾಧ್ಯವಿಲ್ಲ. ಕಾಫಿಯನ್ನು ಸೇರಿದಂತೆ ಒಂದೇ ರೀತಿಯ ಬೆಳೆಯನ್ನು ಒಳಗೊಂಡ ಕೃಷಿ ಚಟುವಟಿಕೆ ಮೇಲೆ ನಿಯಂತ್ರಣ, ರಸಗೊಬ್ಬರಗಳ ಬಳಕೆ ನಿಷೇಧ, ಜೈವಿಕ ಕೃಷಿ ಕಡ್ಡಾಯ ಎಂಬ ಅಂಶಗಳನ್ನು ಒಪ್ಪಲು ಸಾಧ್ಯವಿಲ್ಲ. ನವೆಂಬರ್ – 16 2013ರ ಆದೇಶದ ಮೂಲಕ ಸಚಿವಾಲಯವು ಅಂಗೀಕರಿಸಿರುವ ಶಿಫಾರಸ್ಸುಗಳು ರೈತರ ಬದುಕಿನ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮಗಳನ್ನು ಬೀರುವುದಿಲ್ಲ ಎಂದು ಹೇಳಿರುವ ಕೇಂದ್ರ ಸಚಿವೆ ಜಯಂತಿ ನಟರಾಜನ್‌ರವರ ಹೇಳಿಕೆ ಆಧಾರರಹಿತವಾಗಿದೆ ಎಂದೂ ಕಿಸಾನ್ ಸಭಾ ವಿರೋಧಿಸಿದೆ.

ಕಿಸಾನ್ ಸಭಾ ಪರಿಸರ ರಕ್ಷಣೆಗೆ ತನ್ನ ಆಳವಾದ ಬದ್ಧತೆಯನ್ನು ಪುನರುಚ್ಚರಿಸಿದೆ. ಆದರೆ ಅದೇ ಸಂದರ್ಭದಲ್ಲಿ ಜನರ ಬದುಕು ಮತ್ತು ನಾಗರಿಕತೆಯಿಂದ ಪರಿಸರದ ಪ್ರಶ್ನೆಗಳನ್ನು ಪ್ರತ್ಯೇಕಿಸಬೇಕೆಂಬ ನಿಲುವುವನ್ನು ಸ್ಪಷ್ಟವಾಗಿ ತಿರಸ್ಕರಿಸಿದೆ. ಪರಿಸರಕ್ಕೆ ಪೂರಕವಾದ ಅಭಿವೃದ್ಧಿಯು ಆ ಪ್ರದೇಶದ ಜನತೆಯ ಬದುಕು ಮತ್ತು ಆರ್ಥಿಕ ಆಯ್ಕೆಗಳನ್ನು ನಿಷೇಧಿಸಲು ಸಾಧ್ಯವಿಲ್ಲ. 'ಗಾಡ್ಗೀಳ್ ಸಮಿತಿ ವರದಿ'ಯು ತನ್ನ ಶಿಫಾರಸ್ಸುಗಳಲ್ಲಿ ಈ ಪ್ರಶ್ನೆಗೆ ಸಂಬಂಧಿಸಿರುವ ಸಮಾಜೋ ಆರ್ಥಿಕ ಅಂಶಗಳನ್ನು ಪರಿಶೀಲಿಸಲು ವಿಫಲವಾಗಿದೆ. ಎರಡು ವರದಿಗಳು ವಿವಿಧ ಸಾಮಾಜಿಕ ವಿಭಾಗಗಳ ಜೀವನದ ಮೇಲೆ ಪರಿಸರದ ನಾಶವು ಉಂಟು ಮಾಡುವ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಿಲ್ಲ. ಈ ವರದಿಗಳು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಮಾನವ ಹಾಗೂ ಪ್ರಾಣಿಗಳ ನಡುವಿನ ಸಂಘರ್ಷವನ್ನು ತಡೆಗಟ್ಟಲು, ಸಂರಕ್ಷಿತ ಪ್ರದೇಶದಲ್ಲಿ ಪ್ರಾಣಿ ಮತ್ತು ಸಸ್ಯ ಸಂಕುಲಗಳ ರಕ್ಷಣೆ, ಭತ್ತದ ಗದ್ದೆಗಳು ಮತ್ತು ನೀರಿನ ಸೆಲೆಗಳನ್ನು ರಕ್ಷಿಸುವಲ್ಲಿ ಪರಿಣಾಮಕಾರಿ ಪರಿಹಾರಾತ್ಮಕ ಸಲಹೆಗಳನ್ನು ನೀಡುವಲ್ಲಿ ವಿಫಲವಾಗಿವೆ.

ಗಣಿ ಮತ್ತು ಅರಣ್ಯ ಮಾಫಿಯಾ ಜೊತೆ ರೈತರು ಕೂಡ ಪರಿಸರವನ್ನು ಹಾ ಮಾಡುತ್ತಾರೆಂದು ವಿಭಾಗೀಕರಿಸಿರು ನಿಲುವನ್ನು ಕಿಸಾನ್ ಸಭಾ ಸ್ಪಷ್ಟವಾ ತಿರಸ್ಕರಿಸಿದೆ. ಪರಿಸರ ಸಂರಕ್ಷಣೆಯಲ್ಲಿ ರೈತ ಯಾವಾಗಲೂ ಮುಂದು ಎಂದು ಕಿಸ ಸಭಾ ಪ್ರತಿಪಾದಿಸಿದೆ. ಪಶ್ಚಿಮಘಟ್ಟ ಪ್ರದೇಶ ಸಂರಕ್ಷಣೆಯಲ್ಲಿ ಸ್ಥಳೀಯ ರೈತಾಪಿ ಸಮುದಾಯ ಮತ್ತು ಜನಸಾಮಾನ್ಯರ ಬೆಂಬಲ ಹಾಗ ಅವರ ಪ್ರಜ್ಞಾಪೂರ್ವಕ ಪಾಲ್ಗೊಳ್ಳುವಿ ಅಗತ್ಯ ಎಂಬುದನ್ನು ಭಾರತ ಸರ್ಕಾ ಅರ್ಥ ಮಾಡಿಕೊಳ್ಳಬೇಕು ಎಂದೂ ಕಿಸಾನ ಸಭಾ ಆಗ್ರಹಿಸಿದೆ. –'ಕಸ್ತೂರಿ ರಂಗನ ಸಮಿತಿ'ಯ ವರದಿಯನ್ನು ತಾತ್ವಿಕವಾ ಒಪ್ಪಿಕೊಳ್ಳುತ್ತೇವೆ' – ಎಂಬ ಪರಿಸರ ಮತ ಅರಣ್ಯ ಸಚಿವಾಲಯದ ತಿರ್ಮಾನ ಸಂಬಂಧಿಸಿದ ರಾಜ್ಯಗಳಲ್ಲಿ ತೀ ಪ್ರತಿಭಟನೆಗಳಿಗೆ ಕಾರಣವಾಗಿದೆ. ಎರಡು ಸಮಿತಿಗಳ ಜನವಿರೋಧಿ, ರೈತ ವಿರೋಧಿ ಶಿಫಾರಸ್ಸುಗಳ ವಿರುದ್ದದ ಪ್ರತಿಭಟನೆಗಳಿ ಬೆಂಬಲ ಘೊಷಿಸಿರುವ ಕಿಸಾನ್ ಸಭಾ ಈ ಪ್ರತಿಭಟನೆಗಳಲ್ಲಿ ಸೇರಿಕೊಳ್ಳುವಂತೆ ತನ್ನೆಲ್ಲಾ ಘಟಕಗಳಿಗೆ ಕರೆ ನೀಡಿದೆ.

ಹಾಗಾಗಿ ಎರಡೂ ಸಮಿತಿಗ ಜನ ವಿರೋಧಿ ಮತ್ತು ರೈತ ವಿರೋಧಿ ಶಿಫಾರಸ್ಸುಗಳನ್ನು ಕೈಬಿಡಲು ಹಾ ಪರಿಸರ ಮತ್ತು ಅರಣ್ಯ ಸಚಿವಾಲಯವು ರೈ ಸಂಘಟನೆಗಳು ಮತ್ತು ಇತರೆ ಸಂಬಂಧಿಸಿದ ಎಲ್ಲರ ಜೊತೆ ಚರ್ಚಿಸಿ ಪಶ್ಚಿಮ ಘಟ್ಟದ ಅಭಿವೃದ್ಧಿಗೆ ಒಂದು ಸಮಗ್ರ ಕಾರ್ಯಯೋಜನ ರೂಪಿಸಬೇಕೆಂದು ಕಿಸಾನ್ ಸಭಾ ಒತ್ತಾಯಿಸಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಆ ಪ್ರದೇಶದ ಜನತೆಯ ಮನಸ್ಸಿನಲ್ಲಿ ಅನುಮಾನ ಮತ್ತು ಅಭದ್ರತೆಯನ್ನು ಹುಟ್ಟಿ ಹಾಕಿವೆ. ಆದ್ದರಿಂದ ಆ ಅನುಮಾನಗಳನ್ನು ಹೋಗಲಾಡಿಸಲು ಹಾಗೂ ಜೀವನದ ಭದ್ರತೆಯನ್ನು ಕಾಪಾಡುವ ಪ್ರಾಮಾಣಿಕ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಒತ್ತಾಯಿಸಿದೆ. (ಕರ್ನಾಟಕ ಪ್ರಾಂತ ರೈತ ಸಂಘವು – ಕೆಪಿಆರ್‌ಎಸ್ ಅಖಿಲ ಭಾರತ ಕಿಸಾನ್ ಸಭಾದ ಈ ನಿಲುವನ್ನು ಸಂಪೂರ್ಣ ಅನುಮೋದಿಸಿದ್ದು ಈ ಸಂಬಂಧದ ಚಳುವಳಿಯಲ್ಲಿ ತನ್ನನ್ನು ತೊಡಗಿಸಿಕೊಂ ಚಳುವಳಿ ಬಲಪಡಿಸಲು ತನ್ನ ಘಟಕಗಳಿಗೆ ಕರೆ ನೀಡಿದೆ.)

ಜನಶಕ್ತಿ
ಕನ್ನಡ ವಾರಪತ್ರಿಕೆ

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳು



ಈ ಚುನಾವಣೆಗಳು ಮುಂಬರುವ ಸಾರ್ವತ್ರಿಕ ಚುನಾವಣೆಗಳ 'ಸೆಮಿಫೈನಲ್', ಮೋದಿ ಪ್ರಧಾನ ಮಂತ್ರಿ ಪಟ್ಟಕ್ಕೇರುತ್ತಾರೆ ಎಂಬುದರ ಸಂಕೇತ ಎಂದೆಲ್ಲ ಹೇಳಲಾಗುತ್ತಿದೆ. ಆದರೆ ಇವೆಲ್ಲ ಕೇವಲ ಸರಳೀಕರಣಗಳು, ಖಡಾಖಂಡಿತವಾಗಿ ಹೇಳಬಹುದಾದ ಒಂದು ಸಂಗತಿಯೆಂದರೆ, ಜನಗಳ ನಡುವೆ ಒಂದು ಬಲವಾದ ಕಾಂಗ್ರೆಸ್–ವಿರೋಧಿ ಭಾವನೆಯಿದೆ. ಕಾಂಗ್ರೆಸ್ ವಿರುದ್ಧ ಇಷ್ಟೊಂದು ಜೋರಾಗಿ ಜನಗಳು ಮತನೀಡಿದ್ದು ಬೆಲೆಯೇರಿಕೆ, ನಿರುದ್ಯೋಗ ಮತ್ತು ಭ್ರಷ್ಟಾಚಾರದ ಹೊರೆಗಳನ್ನು ಜನಗಳ ಮೇಲೆ ಹಾಕಿರುವ ಧೋರಣೆಗಳ ವಿರುದ್ಧ. ಬಿಜೆಪಿಯ ಬಳಿ ಇದಕ್ಕಿಂತ ಭಿನ್ನವಾದ ಧೋರಣೆಗಳೇನೂ ಇಲ್ಲ. ಆದ್ದರಿಂದ ಈಗ ಜನತೆಗೆ ಪರ್ಯಾಯ ಧೋರಣೆಗಳ ಆಧಾರದ ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಒದಗಿಸಬೇಕಾಗಿದೆ.

ಬಲವಾದ ಕಾಂಗ್ರೆಸ್–ವಿರೋಧಿ ಭಾವನೆಯ ಸಂಕೇತ

ಸೀತಾರಾಮ್ ಯೆಚೂರಿ

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳು ಒಂದು ಸ್ಪಷ್ಟ ತೀರ್ಪು ನೀಡಿವೆ. ನಾಲ್ಕು ರಾಜ್ಯಗಳಲ್ಲಂತೂ ಕಾಂಗ್ರೆಸ್ ಪಕ್ಷವನ್ನು ಸಾರಾಸಗಟು ತಿರಸ್ಕರಿಸಲಾಗಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಈಶಾನ್ಯ ಭಾಗದ ಸಣ್ಣ ರಾಜ್ಯ ಮಿಝೋರಾಂ ಮಾತ್ರವೇ ಅಪವಾದ. ಅಲ್ಲಿ ಕಾಂಗ್ರೆಸ್ ತನ್ನ ಬಹುಮತವನ್ನು ಉಳಿಸಿಕೊಂಡಿದೆ.

ಕಾಂಗ್ರೆಸ್ ಸರಕಾರಗಳಿದ್ದ ರಾಜಸ್ತಾನ್ ಮತ್ತು ದಿಲ್ಲಿಯಲ್ಲಿ ಕಾಂಗ್ರೆಸ್ ಹಿಂದೆಂದೂ ಕಂಡಿರದ ರೀತಿಯಲ್ಲಿ ತೀವ್ರ ಪರಾಭವ ಉಂಡಿದೆ. ರಾಜಸ್ತಾನದಲ್ಲಿ ಅದಕ್ಕೆ ಗಳಿಸಲು ಸಾಧ್ಯವಾಗಿರುವುದು ಕೇವಲ 21 ಸ್ಥಾನಗಳಷ್ಟೇ. ಇದು ಒಟ್ಟು ಸ್ಥಾನಗಳ 10ಶೇ.ಕ್ಕಿಂತ ತುಸು ಹೆಚ್ಚಷ್ಟೇ. ದಿಲ್ಲಿಯಲ್ಲಿ ಅದು ಪಡೆದಿರುವುದು ಕೇವಲ ಎಂಟು ಸ್ಥಾನಗಳು, ಅಂದರೆ ಒಟ್ಟು ಸ್ಥಾನಗಳಲ್ಲಿ 11ಶೇ. ಮಾತ್ರ.

ಕಾಂಗ್ರೆಸ್ ಬಗ್ಗೆ ಜುಗುಪ್ಸೆಯ ಲಾಭ ಬಿಜೆಪಿಗೆ

ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡದಲ್ಲಿ ಬಿಜೆಪಿ ಸತತ ಮೂರನೇ ಬಾರಿಗೆ ಗೆದ್ದಿದೆ. ಈ ಎರಡೂ ರಾಜ್ಯಗಳಲ್ಲಿ ಬಿಜೆಪಿ ಹತ್ತು ವರ್ಷಗಳ ಕಾಲ ಅಧಿಕಾರದಲ್ಲಿತ್ತು. ಮಧ್ಯಪ್ರದೇಶದಲ್ಲಿ 13 ಮಂತ್ರಿಗಳ ಮೇಲೆ ಭ್ರಷ್ಟಾಚಾರದ ಆರೋಪಗಳಿದ್ದವು. ಲಕ್ಷಾಂತರ ಎಕರೆ ಜಮೀನುಗಳನ್ನು ಕಂಪನಿಗಳಿಗೆ ಕೊಡಮಾಡಲಾಗಿದೆ. ಹಾಗೆ ಮಾಡುವಾಗ ಹತ್ತಾರು ಸಾವಿರ ಜನಗಳನ್ನು ಸ್ಥಳಾಂತರಗೊಳಿಸಲಾಗಿದೆ. ಜನಸಾಮಾನ್ಯರ, ಅದರಲ್ಲೂ ಆದಿವಾಸಿಗಳ ಬದುಕು ಹದಗೆಟ್ಟಿದೆ. ಆದರೂ ಕಾಂಗ್ರೆಸ್ ಪಕ್ಷ ಜನರ ಅಸಂತೃಪ್ತಿಯನ್ನು ಅಣಿನೆರೆಸುವಲ್ಲಿ ಶೋಚನೀಯವಾಗಿ ವಿಫಲವಾಗಿದೆ. ಜನತೆ ಕಾಂಗ್ರೆಸನ್ನು ಆರಿಸಲು ನಿರಾಕರಿಸಿದ್ದಾರೆ. ಏಕೆಂದರೆ ಕಾಂಗ್ರೆಸಿನ ಹೆಸರು ಮತ್ತು ಅದರ ಕೆಲಸದ ದಾಖಲೆ ಯಾರಲ್ಲೂ ಭರವಸೆ ಮೂಡಿಸುವಂತಿರಲಿಲ್ಲ. ಬದಲಿಗೆ ಕೇಂದ್ರದಲ್ಲಿರುವ ಕಾಂಗ್ರೆಸ್ ನೇತೃತ್ವದ ಯುಪಿಎ–2 ಸರಕಾರದ ಧೋರಣೆಗಳು ವ್ಯಾಪಕವಾದ ಬೆಲೆಯೇರಿಕೆಯ ಬೆಂಕಿಗೆ ತುಪ್ಪ ಸುರಿದಿವೆ, ಬೃಹತ್ ಸ್ವರೂಪದ ಭ್ರಷ್ಟಾಚಾರವನ್ನು ಹುಟ್ಟು ಹಾಕಿವೆ ಎಂದು ಅದರ ಬಗ್ಗೆ ಜುಗುಪ್ಸೆಯೇ ಇದೆ. ಛತ್ತೀಸ್‌ಗಡದಲ್ಲೂ ಅದೇ ಪರಿಸ್ಥಿತಿ.

ಈ ನಾಲ್ಕು ರಾಜ್ಯಗಳಲ್ಲೂ ಬಹಳ ಕಾಲದಿಂದ ಎರಡು ಧ್ರುವಗಳ ಸನ್ನಿವೇಶ ಕಂಡು ಬಂದಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಇವೆರಡರದ್ದೇ ದರ್ಬಾರು ಇಲ್ಲಿ. ಆದ್ದರಿಂದ ಜನರಲ್ಲಿ ಹರಡಿರುವ ಬಲವಾದ ಕಾಂಗ್ರೆಸ್–ವಿರೋಧಿ ಭಾವನೆಗಳ ಲಾಭ ಈ ಚುನಾವಣೆಗಳಲ್ಲಿ ಬಿಜೆಪಿಗೆ ದಕ್ಕಿದೆ.


ಕಾರ್ಯಸಾಧ್ಯ ಪರ್ಯಾಯವಿದ್ದರೆ...

ಆದರೆ ಈ ವಿಧಾನಸಭಾ ಚುನಾವಣೆಗಳ ಹೊಸ ಲಕ್ಷಣವೆಂದರೆ ದಿಲ್ಲಿಯ ಚುನಾವಣೆಗಳು. ಕಾಂಗ್ರೆಸ್ ಭಾರೀ ಪರಾಭವ ಉಂಡರೂ, ಬಿಜೆಪಿಗೆ ಚುನಾವಣೆಗಳಲ್ಲಿ ಬಹುಮತ ಪಡೆಯಲಾಗಲಿಲ್ಲ. ಇದಕ್ಕೆ ಕಾರಣ ಆಮ್ ಆದ್ಮಿ ಪಾರ್ಟಿ(ಎಎಪಿ)ಯ ಯಶಸ್ಸು. ಅದು 28 ಸ್ಥಾನಗಳನ್ನು ಮತ್ತು 30ಶೇ.ದಷ್ಟು ಮತಗಳನ್ನು ಗಳಿಸಿದೆ. ಎಎಪಿಗೆ ಮಧ್ಯಮ ವರ್ಗಗಳ ಮತ್ತು ನಗರದ ಬಡವರ ನಡುವೆ ಮತ್ತು ಪರಿಶಿಷ್ಟ ಜಾತಿಗಳ ಜನವಿಭಾಗಗಳ ನಡುವೆ ಬೆಂಬಲ ಗಳಿಸಲು ಸಾಧ್ಯವಾಗಿದೆ. ಎಲ್ಲೆಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಕಾರ್ಯಸಾಧ್ಯ ಪರ್ಯಾಯ ಇದೆಯೋ ಅಲ್ಲಿ ಜನತೆ ಅದನ್ನು ಬೆಂಬಲಿಸುತ್ತಾರೆ ಎಂಬುದನ್ನು ದಿಲ್ಲಿ ಚುನಾವಣೆ ತೋರಿಸಿದೆ. ಎಎಪಿ ಯಾವ ರಾಜಕೀಯ ಕಾರ್ಯಕ್ರಮವನ್ನು ರೂಪೀಕರಿಸುತ್ತದೆ, ಹೇಗೆ ತನ್ನ ಬೆಂಬಲ ನೆಲೆಯನ್ನು ಕ್ರೋಢೀಕರಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

'ಸೆಮಿಫೈನಲ್' ಅಲ್ಲ


ಮಾಧ್ಯಮಗಳು ಈ ಚುನಾವಣೆಗಳು ಮುಂಬರುವ ಸಾರ್ವತ್ರಿಕ ಚುನಾವಣೆಗಳ 'ಸೆಮಿಫೈನಲ್' ಎಂದು ವರ್ಣಿಸಿವೆ. ಕೆಲವು ವೀಕ್ಷಕರೂ ಈ ಫಲಿತಾಂಶಗಳು ಒಂದು ರಾಷ್ಟ್ರೀಯ ಪ್ರವೃತ್ತಿಯನ್ನು ತೋರಿಸುತ್ತವೆ ಎನ್ನುತ್ತ ಇದು ಮೋದಿಯನ್ನು ಪ್ರಧಾನ ಮಂತ್ರಿ ಪಟ್ಟಕ್ಕೇರಿಸಬಹುದು ಎಂದಿದ್ದಾರೆ. ಇಂತಹ ಅಭಿಪ್ರಾಯಗಳು ವಾಸ್ತವತೆಯ ಸರಳೀಕರಣಗಳು, ಸರಿಯಾದ ವಿಶ್ಲೇಷಣೆಯಲ್ಲ. ಮೊದಲನೆಯದಾಗಿ ಇವು ಮುಂದಿನ ಸಾರ್ವತ್ರಿಕ ಚುನಾವಣೆಗಳ 'ಸೆಮಿಫೈನಲ್' ಅಲ್ಲ. ಈ ನಾಲ್ಕು ರಾಜ್ಯಗಳ ಲೋಕಸಭಾ ಸ್ಥಾನಗಳ ಸಂಖ್ಯೆ ಕೇವಲ 72 ಅಥವ ಒಟ್ಟು ಲೋಕಸಭಾ ಸ್ಥಾನಗಳ 13ಶೇ. ಮಾತ್ರ. ಆದ್ದರಿಂದ ಈ ಫಲಿತಾಂಶಗಳನ್ನು ಯಥಾವತ್ತಾಗಿ ಎಲ್ಲ ಲೋಕಸಭಾ ಸ್ಥಾನಗಳಿಗೆ ವಿಸ್ತರಿಸಿ ನೋಡುವುದು ತಪ್ಪಾಗುತ್ತದೆ. 2004ರಲ್ಲೂ, 2009ರಲ್ಲೂ ಎನ್‌ಡಿಎ ಈ 72ರಲ್ಲಿ ಬಹುಮತ ಗಳಿಸಿತ್ತು. ಆದರೂ ಎನ್‌ಡಿಎ ಸೋತಿತ್ತು.

ಈ ಫಲಿತಾಂಶಗಳಿಂದ ಖಡಾಖಂಡಿತವಾಗಿ ಹೇಳಬಹುದಾದ ಸಂಗತಿಯೆಂದರೆ, ಜನಗಳ ನಡುವೆ ಒಂದು ಬಲವಾದ ಕಾಂಗ್ರೆಸ್–ವಿರೋಧಿ ಭಾವನೆಯಿದೆ. ಈ ನಾಲ್ಕು ರಾಜ್ಯಗಳಲ್ಲಿ ಕೇವಲ ಕಾಂಗ್ರೆಸ್ ಮತ್ತು ಬಿಜೆಪಿ ಮಾತ್ರವೇ ಪ್ರಾಬಲ್ಯ ಹೊಂದಿರುವಂತೆ ಬೇರೆ ಹೆಚ್ಚಿನ ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿ ಇಲ್ಲ. ಅಲ್ಲಿ ಸ್ಪರ್ಧೆ ಇರುವುದು ಕಾಂಗ್ರೆಸ್ ಮತ್ತು ಪ್ರಾದೇಶಿಕ ಪಕ್ಷಗಳು ಅಥವ ಎಡಪಕ್ಷಗಳ ನಡುವೆ. ಕೆಲವೆಡೆಗಳಲ್ಲಿ ತ್ರಿಕೋಣ ಸ್ಪರ್ಧೆಗಳ ಸನ್ನಿವೇಶ ಇದೆ. ಈ ಹೆಚ್ಚಿನ ರಾಜ್ಯಗಳಲ್ಲಿ ಕಾಂಗ್ರೆಸ್–ವಿರೋಧಿ ಭಾವನೆಗಳ ಪ್ರಯೋಜನ ಬಿಜೆಪಿಗೆ ದಕ್ಕುವುದಿಲ್ಲ, ಬದಲಾಗಿ ಕಾಂಗ್ರೆಸೇತರ, ಬಿಜೆಪಿಯೇತರ ಪಕ್ಷಗಳಿಗೆ ದಕ್ಕುತ್ತದೆ. ಕಾಂಗ್ರೆಸ್ ವಿರುದ್ಧ ಇಷ್ಟೊಂದು ಜೋರಾಗಿ ಜನಗಳು ಮತನೀಡಿದ್ದು ಬೆಲೆಯೇರಿಕೆ, ನಿರುದ್ಯೋಗ ಮತ್ತು ಭ್ರಷ್ಟಾಚಾರದ ಹೊರೆಗಳನ್ನು ಜನಗಳ ಮೇಲೆ ಹೇರಿರುವ ಕಾಂಗ್ರೆಸಿನ ಧೋರಣೆಗಳ ವಿರುದ್ಧ. ಬಿಜೆಪಿಯ ಬಳಿಯೂ ಇದಕ್ಕಿಂತ ಭಿನ್ನವಾದ ಧೋರಣೆಗಳೇನೂ ಇಲ್ಲ. ಈಗ ಜನತೆಗೆ ಪರ್ಯಾಯ ಧೋರಣೆಗಳ ಆಧಾರದ ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಪರ್ಯಾಯವನ್ನು ಒದಗಿಸಬೇಕಾಗಿದೆ.



ಕೃಪೆ: ಡೆಕ್ಕನ್ ಕ್ರಾನಿಕಲ್‌ನಲ್ಲಿ ಸುಧೀರ್ ತೈಲಂಗ್

ಮಂಗಳೂರು ಜಿಲ್ಲಾ ಪಂಚಾಯತಿ ಎದುರು
ಅಕ್ಷರ ದಾಸೋಹ ಕಾರ್ಮಿಕರ ಪ್ರತಿಭಟನೆ



ವಾ . ಉ.



ಬಿಸಿಯೂಟ ನೌಕರರಿಂದ ಮಂಗಳೂರಿನಲ್ಲಿ ಪ್ರತಿಭಟನೆ

ಬಿಸಿಯೂಟ ನೌಕರರಿಗೆ ಗೌರವಧನವನ್ನು ರೂ.1200 ರಿಂದ ರೂ.3000 ಕ್ಕೆ ಏರಿಸಬೇಕು, ಬಿಸಿಯೂಟ ಕಾರ್ಯಕ್ರಮವನ್ನು ಖಾಸಗೀಕರಣಗೊಳಿಸಕೂಡದು, ಬಿಸಿಯೂಟದ ನೌಕರರಿಗೆ ಆರ್ಥಿಕ ಭದ್ರತೆ ಒದಗಿಸಬೇಕು– ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಬೆಂಗಳೂರಿನಲ್ಲಿ ನಡೆಯುತ್ತಿದ್ದ ಅನಿರ್ದಿಷ್ಟಾವಧಿ ಸತ್ಯಾಗ್ರಹವನ್ನು ಬೆಂಬಲಿಸಿ ಕರ್ನಾಟಕ ರಾಜ್ಯ ಬಿಸಿಯೂಟ ನೌಕರರ ಸಂಘ (ಸಿಐಟಿಯು)ದ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರಿನ ಜಿಲ್ಲಾ ಪಂಚಾಯತಿ ಕಚೇರಿ ಎದುರು ಡಿಸೆಂಬರ್ 5 ಮತ್ತು 6 ರಂದು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಮುಖಂಡರಾದ ಸುನಿಲ್ ಕುಮಾರ್ ಬಜಾಲ್, ಜಯಂತಿ ಬಿ.ಶೆಟ್ಟಿ, ರಮಣಿ ಮೂಡಬಿದರೆ, ಬಿಸಿಯೂಟ ನೌಕರರ ಸಂಘದ ದ.ಕ.ಜಿಲ್ಲಾಧ್ಯಕ್ಷರಾದ ಪದ್ಮಾವತಿ ಶೆಟ್ಟಿ, ಕಾರ್ಯದರ್ಶಿ ಗಿರಿಜಾ ಮೂಡಬಿದ್ರಿ ಮಾತನಾಡಿದರು. ವಿದ್ಯಾರ್ಥಿ ನಾಯಕ ಪ್ರಶಾಂತ್ ಆಚಾರ್, ಸಿಐಟಿಯುವಿನ ರಾಧ ಮೂಡಬಿದ್ರಿ, ಬಿ.ಕೆ.ಇಮ್ತಿಯಾಜ್ ಭಾಗವಹಿಸಿದ್ದರು.

ರಾಜ್ಯಾದ್ಯಂತ ಪ್ರತಿಭಟನೆಗೆ ರಾಜ್ಯ ಸಂಘದಿಂದ ಕರೆ ನೀಡಲಾಗಿದ್ದು, ಬೆಳ್ತಂಗಡಿ, ಸುಳ್ಯ, ಪುತ್ತೂರು ಹಾಗೂ ಬಂಟ್ವಾಳಗಳಲ್ಲಿಯೂ ಆಯಾ ತಾಲೂಕು ತಹಶೀಲ್ದಾರರ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಗಿದೆ. ರಾಜ್ಯ ಸರಕಾರ ಬಿಸಿಯೂಟ ನೌಕರರ ಗೌರವಧನವನ್ನು ಮಾಸಿಕ ರೂ.500 ಹೆಚ್ಚಳ ಮಾಡಿ ಘೋಷಿಸಿದ್ದರಿಂದ, ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಲಾಗಿದೆ.



ರಸ್ತೆ ದುರಸ್ತಿಕರಣಕ್ಕೆ ಜಪ್ಪಿನಮೊಗರಿನಲ್ಲಿ ಪ್ರತಿಭಟನೆ

ರಸ್ತೆ ಕಾಂಕ್ರಿಟೀಕರಣಕ್ಕೆ ಒತ್ತಾಯಿಸಿ ಜಪ್ಪಿನಮೊಗರಿನಲ್ಲಿ ಪ್ರತಿಭಟನೆ:

ಮಂಗಳೂರು ಮಹಾನಗರದ ಜಪ್ಪಿನಮೊಗರು ವಾರ್ಡಿನಲ್ಲಿ ಜಪ್ಪಿನಮೊಗರಿನಿಂದ ಬಜಾಲು ವರೆಗಿನ ರಸ್ತೆ ತೀರಾ ನಾದುರಸ್ತಿಯಲ್ಲಿರುವುದನ್ನು ಪ್ರತಿಭಟಿಸಿ ಡಿಸೆಂಬರ್ 9 ರಂದು ಸಿಪಿಐ(ಎ ಜಪ್ಪಿನಮೊಗರು ಶಾಖೆಯ ವತಿಯಿಂದ ಜಪ್ಪಿನಮೊಗರಿನಲ್ಲಿ ರಸ್ತೆ ತಡೆ ನಡೆಸಲಾಯಿತ

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣ ಶೆಟ್ಟಿ, ಪಕ್ಷದ ಸ್ಥಳೀಯ ಹಿರಿಯ ಸದಸ್ಯ ಚಂದ್ರಹಾಸ ಮಾತನಾಡಿದರು. ಮಹಾನಗರ ಪಾಲಿಕೆಯ ಮಾಜಿ ಸದಸ್ಯೆ ಜಯಂತಿ ಬಿ.ಶೆಟ್ಟಿ, ಸಿಪಿಐ(ಎಂ) ನಗರ ಸಮಿ ಸದಸ್ಯರಾದ ಸುರೇಶ್ ಬಜಾಲ್, ಭಾರತಿ ಬೋಳಾರ, ಸ್ಥಳೀಯ ಪಕ್ಷ ಸದಸ್ಯರಾದ ಉದಯಚಂದ್ರ ರೈ, ದಿನೇಶ್ ಅಂಚನ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದ

ಸಿಐಟಿಯು ಪ್ರತಿಭಟನೆಗೆ ಮಣಿದ ಮಾಲಿಕ:

ಮಂಗಳೂರು ಬಂದರಿನ ಕ್ರಿಪ್ಟನ್ ಸೆರಾಮಿಕ್ ಸಂಸ್ಥೆಯು ಆರು ವರ್ಷಗಳಿಂದ ದುಡಿಯುತ್ತಿರುವ ತಲೆಹೊರೆ ಕಾರ್ಮಿಕರಿಗೆ ಕೆಲಸ ನಿರಾಕರಣೆ ಮಾಡಿದ್ದಲ್ಲದೇ, ಅವರಿಗೆ ಸೇವಾಭತ್ತೆ ನೀಡಲು ನಿರಾಕರಿಸಿದ್ದನ್ನು ವಿರೋಧಿಸಿ ತಲೆಹೊರೆ, ಕಾರ್ಮಿಕರು ಡಿಸೆಂಬರ್ 5 ರಂದು ಸಂಸ್ಥೆಯ ಕಚೇರಿ ಎದುರು ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.



ಬಳಿಕ ಸಿಐಟಿಯು ನಿಯೋಗದ ಜೊತೆ ಮಾತುಕತೆ ನಡೆಸಿದ ಕ್ರಿಪ್ಟನ್ ಸಿರಾಮಿಕ್‌ನ ಮಾಲಿಕರು ಕಾರ್ಮಿಕರಿಗೆ ಸಿಗಬೇಕಾದ ಸೇವಾಭತ್ತೆ ನೀಡಲು ಒಪ್ಪಿಕೊಂಡರು.

ಬಳಿಕ ಪ್ರತಿಭಟನಾ ನಿರತ ಕಾರ್ಮಿಕರನ್ನು ಉದ್ದೇಶಿಸಿ ತಲೆಹೊರೆ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್. ಬಂದರು ಶ್ರಮಿಕರ ಸಂಘದ ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ತಲೆಹೊರೆ ಕಾರ್ಮಿಕರ ಸಂಘದ ಪದಾಧಿಕಾರಿಗಳು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಅಡಿಕೆ ನಿಷೇಧಿಸಿದರೆ ತೀವ್ರ ಪ್ರತಿಭಟನೆ

– ಕೆ.ಆರ್.ಶ್ರೀಯಾ

ಕರಾವಳಿ ಜಿಲ್ಲೆಗಳ ರೈತರ ಆರ್ಥಿಕ ಬೆಳೆಯ ಅಡಿಕೆಯನ್ನು ನಿಷೇಧಿಸುವ ಕೇಂದ್ರ ಸರಕಾ ಕ್ರಮವನ್ನು ತೀವ್ರವಾಗಿ ಪ್ರತಿಭಟಿಸಲು ಅ ಬೆಳೆಗಾರರು ಮುಂದಾಗಬೇಕು ಎಂದು ಕರ್ನಾ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಆರ್.ಶ್ರೀಯಾನ್ ತಿಳಿಸಿದ್ದಾ ಈಗಾಗಲೇ ಬೆಲೆ ಕುಸಿತ, ಕೊಳೆ ರೋಗ, ಅ ಮರಗಳಿಗೆ ಹಳದಿ ರೋಗದಿಂದ ಸಾಕಷ್ಟು ನ ಹೊಂದಿ ಸಂಕಷ್ಟದಲ್ಲಿರುವ ಅಡಿಕೆ ಬೆಳೆಗಾರ ಇದೀಗ ಕೇಂದ್ರ ಸರಕಾರ ಅಡಿಕೆ ಕೃಷಿಯ ನಿಷೇಧಿಸುವ ಹುನ್ನಾರ ನಡೆಸುತ್ತಿರುವು ರೈತರಿಗೆ ನೀಡುವ ಇನ್ನೊಂದು ಪ್ರಹಾರವಾಗಿ

ಈ ಹಿಂದೆ ಗುಟ್ಕಾ ನಿಷೇಧಿಸಿದ ರೀತಿಯ ಅಡಿಕೆಯನ್ನು ನಿಷೇಧಿಸುವಂತೆ ಕೇಂದ್ರ ಸರಕ ಸುಪ್ರಿಂ ಕೋರ್ಟಿಗೆ ಮನವಿ ಸಲ್ಲಿಸಿರುವುದರಿ ಅಡಿಕೆ ಬೆಳೆಗಾರರು ಕಂಗಾಲಾಗಿದ್ದಾರೆ. ಅ ದ.ಕ.ಜಿಲ್ಲೆಯಲ್ಲಿ ಅಡಿಕೆ ಕೃಷಿಯನ್ನು ನಂಬಿಕೊಂ ಲಕ್ಷಕ್ಕೂ ಮಿಕ್ಕಿ ಕುಟುಂಬಗಳಿವೆ. ಅದನ್ನೇ ನಂ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು ಜೀವ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಅಡಿ ಕೃಷಿಯನ್ನು ನಿಷೇಧಿಸಿದರೆ ಇವರೆಲ್ಲಾ ಉಪವಾ ಬೀಳಬೇಕಾದ ಪರಿಸ್ಥಿತಿ ಬರಬಹುದು.

ಇತ್ತೀಚಿನ ವರ್ಷಗಳಲ್ಲಿ ಆಗಿಂದಾ ಗುಟ್ಕಾವನ್ನು ನಿಷೇಧಿಸುವ ಹೆಸರಿನಲ್ಲಿ ಅಡಿ ಬೆಳೆಗಾರರ ಆತ್ಮಸ್ಥೈರ್ಯವನ್ನು ಕುಗ್ಗಿಸು ಪ್ರಯತ್ನ ಮಾಡುತ್ತಲೇ ಬಂದಿದ್ದು, ಇನ್ನೊಂ ಕಡೆ ಸಿಗರೇಟು, ತಂಬಾಕು ಮೊದಲಾ ಉತ್ಪನ್ನಗಳ ಮಾರಾಟಕ್ಕೆ ಅವಕಾಶವನ ನೀಡುತ್ತಿರುವ ಕೇಂದ್ರ ಸರಕಾರ ಅಡಿಕೆಯ ಮಾತ್ರ ಆರೋಗ್ಯಕ್ಕೆ ಹಾನಿಕರವಾದ ಅಂಶ ಇದ ಯೆಂದು ಹೇಳುವುದು ಹಾಸ್ಯಾಸ್ಪದವಾಗಿದೆ.

ಆದುದರಿಂದ ಅಡಿಕೆ ಬೆಳೆಗಾರರ ರಕ್ಷಣ ಬೇಕಾದ ಎಲ್ಲಾ ಕ್ರಮಗಳನ್ನು ಸ ತೆಗೆದುಕೊಳ್ಳಬೇಕೆಂದೂ ಇದನ್ನು ಒತ್ತಾಯಿ ಚಳುವಳಿ ನಡೆಸಲು ಅಡಿಕೆ ಬೆಳೆಗಾರ ಮುಂದಾಗಬೇಕೆಂದು ಕೆ.ಆರ್.ಶ್ರೀಯಾ ವಿನಂತಿಸಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಗುಜರಾತ್ ಅಭಿವೃದ್ಧಿ ಕಥೆ : ಸತ್ಯ ಮತ್ತು ಮಿಥ್ಯ

ಸಂಗ್ರಹಾನುವಾದ: ಎಚ್.ಆರ್.ನವೀನ್ ಕುಮಾರ್
ಆಧಾರ: ಬಾಲಚಂದ್ರ ಮುಂಗೇಕರ್, ಯೋಜನಾ ಆಯೋಗದ ಮಾಜಿ ಸದಸ್ಯರು ಹಾಗೂ ಮುಂಬೈ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳು

ಇತ್ತೀಚಿನ ಐದು ರಾಜ್ಯಗಳ ಚುನಾವಣಾ ಫಲಿತಾಂಶದಲ್ಲಿ 'ನರೇಂದ್ರ ಮೋದಿ ಅಲೆ'ಯನ್ನು ತೋರಿಸುವ ಪ್ರಯತ್ನವನ್ನು ಕೆಲವು ಶಕ್ತಿಗಳು ಮಾಡುತ್ತಿವೆ. ಗುಜರಾತ್ ಅನ್ನು 'ಅಭಿವೃದ್ಧಿ'ಯ ಒಂದು ಮಾದರಿ ರಾಜ್ಯವನ್ನಾಗಿ ಬಿಂಬಿಸುವ ಪ್ರಯತ್ನಗಳು ಮುಂದುವರೆದಿವೆ. ಇಂತಹ ಹಿನ್ನೆಲೆಯಲ್ಲಿ ಗುಜರಾತ್ ರಾಜ್ಯದ ಅಭಿವೃದ್ಧಿಯ ನಿಜವಾದ ಮುಖದರ್ಶನ ಮಾಡಿಸುವ ಒಂದು ಬರಹ.

ದೇಶದ ಯಾವುದೇ ಒಂದು ಭಾಗ, ರಾಜ್ಯ ಆರ್ಥಿಕ ಅಭಿವೃದ್ಧಿ ಸಾಧಿಸಿದೆ ಎಂದರೆ, ಜನರ ಬದುಕಿನಲ್ಲಿ ಪ್ರಗತಿಯಾದರೆ, ಇತ್ತೀಚಿನ ದಿನಗಳಲ್ಲಿ ಕರೆಯುವಂತೆ 'ಮಾನವ ಅಭಿವೃದ್ಧಿ ಸೂಚ್ಯಂಕ' ಮೇಲಕ್ಕೇರಿದರೆ ಅದು ಎಲ್ಲರೂ ಹೆಮ್ಮೆ ಪಡಬೇಕಾದ ವಿಷಯ. ಏಕೆಂದರೆ ಅದು ಇಡೀ ದೇಶದ ಆರೋಗ್ಯ ಪರಿಸ್ಥಿತಿ, ಶಿಕ್ಷಣ, ಜೀವನ ಮಟ್ಟ ಇತ್ಯಾದಿಗಳಲ್ಲಿನ ಪ್ರಗತಿಯನ್ನು ಒಳಗೊಂಡು ದೇಶದ ಅಭಿವೃದ್ಧಿಗೆ ಕೊಡುಗೆ ಕೊಟ್ಟಿರುತ್ತದೆ. ಇತರ ಪ್ರದೇಶಗಳಿಗೂ ಮಾದರಿ ಆಗುತ್ತದೆ. ಆದರೆ ಒಂದು ಪ್ರದೇಶದ ಯಶಸ್ಸಿನ ಕಥೆಯಲ್ಲಿ ಭಾರಿ ಉತ್ಪ್ರೇಕ್ಷೆಗಳು, ಅದರ ಹಿಂದೆ ಉದ್ದೇಶ ಪೂರ್ವಕವಾಗಿ ತಿರುಚಿದ ಅಂಕಿ ಅಂಶಗಳು, ಜನರ ಕಣ್ಣಿಗೆ ಮಂಕುಬೂದಿ ಎರಚಿ, ಭ್ರಮೆ ಹುಟ್ಟುಸುವಂತ ಪ್ರಯತ್ನ ಇದ್ದರೆ ಅದರಲ್ಲಿನ ದುಷ್ಟತನದ ವಾಸನೆ ಯಾರಿಗೇ ಆದರೂ ಗೊತ್ತಾಗುತ್ತದೆ. ಗುಜರಾತ್ ರಾಜ್ಯದ ಅಭಿವೃದ್ಧಿ ಮತ್ತು 'ಮೋದಿ ಅಲೆ' ಕುರಿತ ಬೊಬ್ಬೆಗಳನ್ನು ನೋಡಿದಾಗ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ.

ಸಾಟಿ ಇಲ್ಲದ ಅಭಿವೃದ್ಧಿಯೇ?


ಸರಿಸಾಟಿ ಇಲ್ಲದ 'ಭಾರಿ ಅಭಿವೃದ್ಧಿ'ಯ ಹೆಸರಿನಲ್ಲಿ ನರೇಂದ್ರ ಮೋದಿಯನ್ನು ಬಿಂಬಿಸಿ ಆತ 'ವಿಕಾಸ ಪುರುಷ' ಎಂಬಂತೆ ನಂಬಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಹಲವಾಗಿಯೂ ಉತ್ತಮ ಸಾಧನೆ ಮಾಡಿದ ಇತರ ರಾಜ್ಯಗಳ ಸಾಧನೆಯನ್ನು ಮರೆಮಾಚುವ ಕೆಲಸ ವ್ಯವಸ್ಥಿತವಾಗಿ ನಡೆ-ಯುತ್ತಿದೆ. ಹೀಗಾಗಿ ನಿರ್ದಿಷ್ಟ ಅಂಕಿಅಂಶಗಳು ಮಾಹಿತಿಗಳ ಆಧಾರದಲ್ಲಿ ಇದನ್ನು ನಾವು ಪರಿಶೀಲಿಸಬಹುದು. ಯೋಜನಾ ಆಯೋಗದ ಮಾಜಿ ಸದಸ್ಯರೂ, ಮುಂಬೈ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿಗಳೂ ಆದ ಬಾಲಚಂದ್ರ ಮುಂಗೇಕರ್ ಅವರ ಈ ಕುರಿತ ಅಧ್ಯಯನ ಪ್ರಬಂಧ ಏನು ಹೇಳುತ್ತಿದೆ ನೋಡಿ.


ಕೈಗಾರಿಕಾ ಬೆಳವಣಿಗೆ :

ಗುಜರಾತ್‌ನಲ್ಲಿ 2001–04 ರ ನಡುವೆ ಕೈಗಾರಿಕಾ ಕ್ಷೇತ್ರದಲ್ಲಿ ರಾಜ್ಯದ ನಿವ್ವಳ ಆಂತರಿಕ ಉತ್ಪಾದನಾ(ಎನ್ಎಸ್‌ಡಿಪಿ)ದರದ ಸರಾಸರಿಯು ಶೇ. 3.95 ಮತ್ತು 2005–09 ರ ಸಾಲಿನಲ್ಲಿ ಶೇ. 12.65 ಇತ್ತು. ಇದೇ ಅವಧಿಯಲ್ಲಿ ಒರಿಸ್ಸಾ ರಾಜ್ಯದಲ್ಲಿ ಇದು ಶೇ. 6.4 ಮತ್ತು ಶೇ. 17.53 ಇತ್ತು. ಚತ್ತೀಸ್‌ಘಡದಲ್ಲಿ ಶೇ. 8.10 ಮತ್ತು ಶೇ. 13.3 ಇತ್ತು. ಇದೇ ಅವಧಿಗಳಲ್ಲಿ ಉತ್ತರಾಖಂಡ್‌ನಲ್ಲಿ ಶೇ. 18.84 ಮತ್ತು ಶೇ. 11.63 ಇತ್ತು. ಕೇವಲ ಕೈಗಾರಿಕಾ ಬೆಳವಣಿಗೆಯನ್ನು ಕುರಿತು ಮಾತನಾಡುವುದಾದರೆ ಈ ಮೇಲಿನ ಮೂರು ರಾಜ್ಯಗಳು ಐತಿಹಾಸಿಕವಾಗಿ ಕೈಗಾರಿಕಾ ಬೆಳವಣಿಗೆಯಲ್ಲಿ ಹಿಂದುಳಿದಿರುವ ರಾಜ್ಯಗಳು. ಆದರೆ ಈ ರಾಜ್ಯಗಳೇ ಗುಜರಾತನ್ನು ಹಿಂದಿಕ್ಕಿವೆ.

ವಿದೇಶಿ ನೇರ ಬಂಡವಾಳ ಹೂಡಿಕೆ ಒಪ್ಪಂದಗಳು

ಕೈಗಾರಿಕೆಗಳ ಬೆಳವಣಿಗೆಯಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ನಿರ್ಣಾಯಕ ಪಾತ್ರವಿದೆ. ಗುಜರಾತ್ ಇದರಲ್ಲಿ ಕೂಡ ಗಣನೀಯ ಸಾಧನೆಯನ್ನು ಮಾಡಿಲ್ಲ. 2006ರ ಸೆಪ್ಟೆಂಬರ್‌ನಿಂದ 2010ರವರೆಗೆ ಗುಜರಾತ್‌ನಲ್ಲಿ 5.35 ಲಕ್ಷ ಕೋಟಿ ರೂ. ಗಳಷ್ಟು ಮೊತ್ತದ ವಿದೇಶಿ ನೇರ ಬಂಡವಾಳ ಹೂಡಿಕೆ ಒಪ್ಪಂದಗಳಾಗಿದ್ದು ಇವು 6.47 ಲಕ್ಷದಷ್ಟು ಉದ್ಯೋಗಗಳನ್ನು ಸೃಷಿಸಬಲ್ಲ ಸಾಧ್ಯತೆ ಹೊಂದಿವೆ. ಆದರೆ ಮಹಾರಾಷ್ಟ್ರದಲ್ಲಿ ಇದೇ ಅವಧಿಯಲ್ಲಿ 4.20 ಲಕ್ಷ ಕೋಟಿಯಷ್ಟು ಹೂಡಿಕೆ ಸಂಬಂಧ ಒಪ್ಪಂದಗಳಾಗಿದ್ದು ಇದು 8.63 ಲಕ್ಷದಷ್ಟು ಉದ್ಯೋಗಗಳನ್ನು ಸೃಷ್ಟಿಸಬಲ್ಲ ಸಾಧ್ಯತೆ ಹೊಂದಿವೆ. ತಮಿಳುನಾಡು ಇನ್ನೂ ಉತ್ತಮ ಉದಾಹರಣೆಯಾಗಿದ್ದು 1.63 ಲಕ್ಷ ಕೋಟಿಯಷ್ಟು ಹೂಡಿಕೆ ಒಪ್ಪಂದಗಳಿಂದ 13.09 ಲಕ್ಷದಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಲ್ಲಿದೆ. ಗುಜರಾತ್‌ಗಿಂತಲೂ ಚತ್ತೀಸ್‌ಘಡದಲ್ಲಿ 3.61 ಲಕ್ಷ ಕೋಟಿ ಮತ್ತು ಒರಿಸ್ಸಾದಲ್ಲಿ 2.99 ಲಕ್ಷ ಕೋಟಿ ರೂ.ಗಳಷ್ಟು ಹೆಚ್ಚಿನ ಹೂಡಿಕೆಗೆ ಒಪ್ಪಂದಗಳು ಆಗಿವೆ.





ಬ್ಯಾಂಕ್‌ಗಳ ಠೇವಣಿ ಸಂಗ್ರಹ

ಬ್ಯಾಂಕ್‌ಗಳಲ್ಲಿನ ಠೇವಣಿ ಸಂಗ್ರಹದ ಅನುಪಾತ ಯಾವುದೇ ರಾಜ್ಯದ ಆರ್ಥಿಕ ಅಭಿವೃದ್ಧಿಯ ಒಂದು ಪ್ರಧಾನ ಸೂಚಕವೆಂದು ಪರಿಗಣಿಸಲಾಗಿದೆ. ದೇಶದ ಹಲವು ಪ್ರಮುಖ ರಾಜ್ಯಗಳಿಗೆ ಹೋಲಿಸಿದರೆ ಈ ವಿಷಯದಲ್ಲಿ ಗುಜರಾತ್ ಅತ್ಯಂತ ಹಿಂದುಳಿದಿದೆ. ದೇಶದ ಒಟ್ಟು ಅನುಸೂಚಿತ ವಾಣಿಜ್ಯ ಬ್ಯಾಂಕುಗಳಲ್ಲಿರುವ ಠೇವಣಿಯಲ್ಲಿ ಗುಜರಾತ್ ರಾಜ್ಯದ ಪಾಲು ಶೇ. 4.70 ಮಾತ್ರ, ಇದಕ್ಕೆ ವಿರುದ್ದವಾಗಿ ಆಂಧ್ರಪ್ರದೇಶ ಶೇ. 5.42, ತಮಿಳುನಾಡು ಶೇ. 6.20, ಕರ್ನಾಟಕ ಶೇ. 6.34 ಪಾಲು ಹೊಂದಿವೆ. ಮಹಾರಾಷ್ಟ್ರವು ಶೇ. 26.60 ಪಾಲು ಹೊಂದಿದ್ದು ಅದು ಗುಜರಾತ್‌ಗಿಂತ 6 ಪಟ್ಟು ಹೆಚ್ಚಿದೆ.

ತಲಾ ಆದಾಯವೂ ಕಡಿಮೆ

2011ರ ಸಾಲಿನ ತಲಾ ಆದಾಯವನ್ನು ಗಣನೆಗೆ ತೆ-ಗೆದುಕೊಂಡ-ರೆ ಗುಜರಾತ್‌ನ ತಲಾದಾಯ 63,996 ರೂ.ಗಳಿದೆ. ಇದೇ ಅವಧಿಯ ತಲಾದಾಯ ಹರಿಯಾಣದಲ್ಲಿ ರೂ. 92,327, ಮಹಾರಾಷ್ಟ್ರದಲ್ಲಿ ರೂ. 83,471, ಪಂಜಾಬ್‌ನಲ್ಲಿ ರೂ. 67,473, ತಮಿಳುನಾಡಿನಲ್ಲಿ ರೂ. 72,993, ಉತ್ತರಖಂಡ್‌ನಲ್ಲಿ 68,292 ರೂ. ಇದೆ. ಅಂದರೆ ಭಾರತದ ಆರು ಪ್ರಮುಖ ರಾಜ್ಯಗಳಲ್ಲಿ ಗುಜರಾತ್ ಕೊನೆಯಲ್ಲಿದೆ.

ಬಡತನದ ಬೇಗೆ

ಯೋಜನಾ ಆಯೋಗದ ಅಧಿಕೃತ ವರದಿಯ ಪ್ರಕಾರ ಗುಜರಾತ್ ರಾಜ್ಯ ಬಡತನ ನಿವಾರಣೆಯಲ್ಲೂ ಹಿಂದೆ ಬಿದ್ದಿದೆ. 1960ರಲ್ಲಿ ತನ್ನೊಟ್ಟಿಗೆ ಉದಯವಾದ ರಾಜ್ಯವಾದ ಮಹಾರಾಷ್ಟ್ರ ಮತ್ತು ಕರ್ನಾಟಕಕ್ಕೆ ಹೋಲಿಸಿದರೆ ಮಾತ್ರ ಸ್ಥಿತಿ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ. ಆದರೆ ಉಳಿದ ರಾಜ್ಯಗಳಿಗೆ ಹೋಲಿಸಿದರೆ ಇದು ಅತ್ಯಂತ ಗಂಭೀರ ಲೋಪವಾಗಿ ಗೋಚರಿಸುತ್ತದೆ. ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಬಡತನ ರೇಖೆಗಿಂತ ಕೆಳಗಿರುವವರು ಶೇ. 38.1, ಕರ್ನಾಟಕದಲ್ಲಿ ಶೇ. 33.4, ಕೇರಳದಲ್ಲಿ ಶೇ. 19.7, ಪಂಜಾಬ್‌ನಲ್ಲಿ ಶೇ. 20.9, ಹಿಮಾಚಲ ಪ್ರದೇಶದಲ್ಲಿ ಶೇ. 22.9 ಮತ್ತು ಹರಿಯಾಣದಲ್ಲಿ ಶೇ. 24.1. ಆದರೆ ಗುಜರಾತ್‌ನಲ್ಲಿ ಶೇ. 31.8 ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ.

ಅಭಿವೃದ್ಧಿಯ ಮಾನದಂಡಗಳಲ್ಲಿ

'ಮಾನವ ಅಭಿವೃದ್ಧಿ'ಯನ್ನು ಗುರುತಿಸುವಾಗ ಆರೋಗ್ಯ, ಶಿಕ್ಷಣ ಸಮಾಜದಲ್ಲಿ ಮೂರು ಮುಖ್ಯ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಮನುಷ್ಯನ ಸರಾಸರಿ ಜೀವಿತಾವಧಿ, ಮಕ್ಕಳ ಶಾಲಾ ಕಲಿಕೆ(ಎಂಎಸ್‌ಎಲ್), ಮಕ್ಕಳ ಶಾಲಾ ಕಲಿಕೆಯ ಸರಾಸರಿ ಅವಧಿ, ಇವುಗಳಲ್ಲಿ ಗುಜರಾತ್ ಹಲವು ರಾಜ್ಯಗಳಿಗಿಂತ ಹಿಂದುಳಿದಿದೆ.

2006ರ 'ನ್ಯಾಷನಲ್ ಸ್ಯಾಂಪಲ್ ಸರ್ವೆ' ಪ್ರಕಾರ ಗುಜರಾತ್ ರಾಜ್ಯದಲ್ಲಿ ಮನುಷ್ಯನ ಜೀವಿತಾವಧಿ 64.1 ವರ್ಷಗಳಾಗಿದ್ದು ಗುಜರಾತ್ ದೇಶದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಒಂಬತ್ತನೇ ಸ್ಥಾನದಲ್ಲಿದೆ. ಹಾಗೆ 2004–05 ರ ಅಂಕಿಸಂಖ್ಯೆಗಳ ಪ್ರಕಾರ ಗುಜರಾತ್ 'ಮಕ್ಕಳ ಶಾಲಾ ಕಲಿಕೆ'ಯಲ್ಲಿ ಏಳನೇ ಸ್ಥಾನದಲ್ಲಿದೆ. ಕೊನೆಯದಾಗಿ 'ಮಕ್ಕಳ ಶಾಲಾ ಕಲಿಕೆಯ ಸರಾಸರಿ ಅವಧಿ'ಯಲ್ಲಿ ಗುಜರಾತ್ ಒಂಬತ್ತನೇ ಸ್ಥಾನದಲ್ಲಿದೆ. ಈ ಮೇಲಿನ ಮೂರು ರೀತಿಯ ಸಮೀಕ್ಷೆಗಳಲ್ಲೂ ಕೇರಳ ರಾಜ್ಯ ಪ್ರಥಮ ಸ್ಥಾನದಲ್ಲಿದ್ದು, ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ಪಂಜಾಬ್, ಹರಿಯಾಣ, ತಮಿಳುನಾಡು, ಕರ್ನಾಟಕ ಈ ರಾಜ್ಯಗಳು ಗುಜರಾತ್‌ಗೆ ಹೋಲಿಸಿದರೆ ಉತ್ತಮ ಸ್ಥಿತಿಯಲ್ಲಿವೆ.

ಒಟ್ಟು ಮಾನವ ಅಭಿವೃದ್ಧಿಯಲ್ಲಿ ಗುಜರಾತ್ ಎಲ್ಲಿ ?

ಗುಜರಾತ್ ರಾಜ್ಯದ ಅಭಿವೃದ್ಧಿಯ ಕುರಿತು ತುತ್ತೂರಿಗಳನ್ನು ಕೇಳಿದ ನಂತರ ಆ ರಾಜ್ಯದ 'ಮಾನವ ಅಭಿವೃದ್ಧಿ ಸೂಚ್ಯಂಕ'ವನ್ನು ನೋಡಿದರೆ ವಾಸ್ತವ ನಮ್ಮನ್ನು ಬೆಚ್ಚಿ ಬೀಳಿಸುತ್ತದೆ. 2011–12ನೇ ಸಾಲಿನ 'ಭಾರತ ಸರ್ಕಾರದ ಆರ್ಥಿಕ ಸಮೀಕ್ಷೆ'ಯ ಪ್ರಕಾರ ಗುಜರಾತ್‌ನ ಮಾನವ ಅಭಿವೃದ್ಧಿ ಸೂಚ್ಯಂಕ 2008 ರಲ್ಲಿ 0.527 ಆಗಿದೆ. ಗುಜರಾತ್ ಈ ವಿಷಯದಲ್ಲಿ ಹತ್ತನೆ ಸ್ಥಾನದಲ್ಲಿದೆ. ಈ ವಿಚಾರದಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದು ಇದರ ಮಾನವ ಅಭಿವೃದ್ಧಿ ಸೂಚ್ಯಂಕ 0.790 ಆಗಿದೆ. ಹಾಗೇ ಹಿಮಾಚಲ ಪ್ರದೇಶ 0.652, ಪಂಜಾಬ್ 0.605, ಮಹಾರಾಷ್ಟ್ರ 0.572 ಮತ್ತು ಹರಿಯಾಣ 0.552 ಸೂಚ್ಯಂಕ ಸಾಧಿಸಿವೆ.

ಆರ್ಥಿಕ ಸಮೀಕ್ಷೆಯು ಮಾನವ ಅಭಿವೃದ್ಧಿ ಸೂಚ್ಯಂಕವು ಒಳಗೊಳ್ಳುವ ಆದಾಯ, ಆರೋಗ್ಯ ಮತ್ತು ಶಿಕ್ಷಣ ಈ ಮೂರು ಅಂಶಗಳ ಕುರಿತ ಅಂಶಗಳನ್ನು ನೀಡುತ್ತದೆ. ಈ ಯಾವ ಕ್ಷೇತ್ರಗಳಲ್ಲೂ ಗುಜರಾತ್‌ಗೆ ತನ್ನ ಛಾಪನ್ನು ಮೂಡಿಸಲು ಸಾಧ್ಯವಾಗಿಲ್ಲ. ಉದಾಹರಣೆಗೆ ಆದಾಯದ ಸೂಚ್ಯಂಕವನ್ನು ಗಣನೆಗೆ ತೆಗೆದು-ಕೊಂಡರೆ ಗುಜರಾತ್ 0.371 ಪಡೆದು ಐದನೇ

ಪುಟ 15 ಕ್ಕೆ

ಸೌಂದರ್ಯ ಪ್ರಜ್ಞೆ–ಅಪೌಷ್ಟಿಕತೆ–ನರೇಂದ್ರ ಮೋದಿ

ದೇಶದ ಪ್ರಧಾನಿ ಪಟ್ಟದ ಮೇಲೆ ಕಣ್ಣಿಟ್ಟು ಓಡಾಡುತ್ತಿರುವ ನರೇಂದ್ರ ಮೋದಿ ಒಮ್ಮೆ ಗುಜರಾತ್ ರಾಜ್ಯದಲ್ಲಿ ರಕ್ತಹೀನತೆಯಿಂದ ಬಳಲುವ ಅಪೌಷ್ಟಿಕ ತಾಯಂದಿರ ಸಂ-ಖ್ಯೆ ಹೆಚ್ಚು ಏಕೆ ? ಎಂದು ಕೇಳಲಾದ ಪ್ರಶ್ನೆಗೆ ಮಹಿಳೆಯರು ಸೌಂದರ್ಯದ ಕುರಿತ ಕಾಳಜಿಯಿಂದ ಸರಿಯಾದ ಆಹಾರ ಸೇವಿಸದೇ ಹೀಗಾಗಿದೆ ಎಂದಿದ್ದು, ಪ್ರಜ್ಞಾವಂತರನ್ನು ಬೆಚ್ಚಿಬೀಳಿಸಿತ್ತು. ಇದೇ ವ್ಯಕ್ತಿ ಈಗ ಆರೆಸ್ಸ್‌ನ ನಿಯಂತ್ರಿತ ಬಿಜೆಪಿ ಪಕ್ಷದ ಪ್ರಧಾನಿ ಅಭ್ಯರ್ಥಿ!

ಕಾಮ್ರೇಡ್ ಶಿವರಾಂ - ಒಂದು ನೆನೆಪು



ಹುಟ್ಟೂರು ಗೊತ್ತಿಲ್ಲ..! ತಂದೆ-ತಾಯಿ ಯಾರೆಂದು ತಿಳಿದಿಲ್ಲ. ವಿದ್ಯಾಭ್ಯಾಸ ಮೊದಲೇ ಇಲ್ಲ. ಹಸಿವನ್ನು ಇಂಗಿಸಿಕೊಳ್ಳಲು ಬಾಲ ಕಾರ್ಮಿಕನಾಗಿ ಹೋಟೆಲೊಂದರಲ್ಲಿ ದುಡಿಮೆ... 70ರ ದಶಕದಲ್ಲಿ ಬೆಂಗಳೂರಿನಲ್ಲಿ ಹೋಟೆಲ್ ಕಾರ್ಮಿಕರ ಹೋರಾಟ ಕಂಡು ಚಳುವಳಿಯ ಆಕರ್ಷಣೆಗೆ ಒಳಗಾದ ಈ ಬಾಲ ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯನಾಗುತ್ತಾ ಮುಂದೆ ಡಿವೈಎಫ್ಐ ಸಂಘಟನೆಯ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾಗಿ ಬಹಳ ಎತ್ತರಕ್ಕೆ ಬೆಳೆದು ನಿಂತ ಪರಿ ಯಾರಿಗಾದರೂ ವಿಸ್ಮಯ ಎನಿಸುವ ಸಂಗತಿ. ಇತ್ತೀಚೆಗೆ ನಿಧನರಾದ ಡಿವೈಎಫ್ಐನ ಮಾಜಿ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಶಿವರಾಂ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಸಲುವಾಗಿ ಡಿವೈಎಫ್ಐ ಬೆಂಗಳೂರು ಜಿಲ್ಲಾ ಸಮಿತಿಯು ನಗರದ ಮಲ್ಲೇಶ್ವರಂ ಗಾಂಧಿ ಸಾಹಿತ್ಯ ಸಂಘದ ಹಾಲ್‌ನಲ್ಲಿ ಏರ್ಪಡಿಸಿದ್ದ ಸಂತಾಪ ಸಭೆಯಲ್ಲಿ 80ರ ಮತ್ತು ಅದಕ್ಕೂ ಮೊದಲಿನ ಕಾಲಘಟ್ಟದಲ್ಲಿ ಕಾಂ.ಶಿವರಾಂ ಜೊತೆ ಚಳುವಳಿಯ ಹೆಜ್ಜೆ ಹಾಕಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಜಿ.ವಿ. ಶ್ರೀರಾಮರೆಡ್ಡಿ, ಉದಯ ಟಿ.ವಿ. ಸುದ್ದಿ ವಿಭಾಗದ ಮುಖಸ್ಥರು ಹಾಗೂ ಎಸ್‌ಎಫ್ಐ ಮಾಜಿ ರಾಜ್ಯ ಕಾರ್ಯದರ್ಶಿ ಎಸ್.ಆರ್. ಆರಾಧ್ಯ, ಎಸ್‌ಎಫ್ಐ ಮಾಜಿ ರಾಜ್ಯಾಧ್ಯಕ್ಷ ಹಾಗೂ ಪತ್ರಕರ್ತ ಜಯಕುಮಾರ್, ಮಿನರ್ವ ಚಂದ್ರು, ಗೋಪಾಲಕೃಷ್ಣ ಅರಳಹಳ್ಳಿ, ಕೋದಂಡರಾಮ್, ಪುಟಾಣಿ ರವಿ, ಲೀಲಾ ಸಂಪಿಗೆ, ವೀರಮಣಿ, ಎಲ್ಐಸಿ ನಾಗರಾಜ್ ಇನ್ನೂ ಅನೇಕರು ಸೇರಿದಂತೆ ಸಂತಾಪ ಸಭೆಯಲ್ಲಿ ಆಡಿದ ಮಾತುಗಳು ಕಾಂ.ಶಿವರಾಂ ಅವರ ಜೀವನ ದರ್ಶನ ಮಾಡಿಸಿತು, ಹಾಗೆಯೇ ನೆರೆದಿದ್ದವರ ಕಣ್ಣಾಲಿಗಳನ್ನು ತೇವಗೊಳಿಸಿತು.

ಅಂದಿನ ಚಳುವಳಿಯ ಕಷ್ಟದ ದಿನಗಳು ಮೆಲಕು ಹಾಕುತ್ತಾ, ಬಸ್ ಚಾರ್ಜ್, ಊಟಕ್ಕೂ ಹಣವಿಲ್ಲದೆ ಪರದಾಡಿ ಕೇವಲ ನೀರು ಕುಡಿದು ಮಲಗಿದ್ದ ದಿನಗಳು, ಮಲಗಲು ಚಾಪೆಯೂ ಇಲ್ಲದೆ ನ್ಯೂಸ್ ಪೇಪರ್ ಹಾಸಿ ಮಲಗಿದ ದಿನಗಳು, ಪೂರ್ಣಾವಧಿ ಕಾರ್ಯಕರ್ತರಿಗೆ ಅಂದು ಸಿಗುತ್ತಿದ್ದ 200 ರೂ. ನಲ್ಲಿ ತಿಂಗಳು ದೂಡಬೇಕಾದ ಸ್ಥಿತಿ. ಇಂಥ ಕಡುಕಷ್ಟದ ನಡುವೆಯೂ ವಿಚಲಿತರಾಗದೇ ಚಳುವಳಿ ಜೊತೆ ಹೆಜ್ಜೆ ಹಾಕಿದ ಅವರ ದೃಢತೆ ನಿಜಕ್ಕೂ ಅನುಕರಣೀಯವಾದದ್ದು.

ಶಿವರಾಂ ಓದು ಗೊತ್ತಿಲ್ಲದ ಸಂಗಾತಿ, ಓದು ಅನಿವಾರ್ಯವಾಗತೊಡಗಿದಾಗ ಛಲಬಿಡದೇ ಅಕ್ಷರ ಕಲಿತು, ಪುಸ್ತಕ ಬರೆಯುವ ಮಟ್ಟಕ್ಕೆ ತಲುಪಿದರು. ಶಿವರಾಂಗೆ ಒಂದು ಉಪನಾಮ ಇತ್ತು ಅದು 'ವಾಲ್‌ರೈಟಿಂಗ್ ಶಿವರಾಂ' ಎಂದು. ಹೇಗೋ ಪರಿಚಯಗೊಂಡ ಕಲಾವಿದರೊಟ್ಟಿಗೆ ಕಾಡಿ ಬೇಡಿ ಬರೆಯುವುದನ್ನ ಕಲಿತು ಪೂರ್ಣಪ್ರಮಾಣದ ಕಲಾವಿದನಾಗಿ ರೂಪುಗೊಂಡು ಆ ಕಲೆಯನ್ನು ವೈಯಕ್ತಿಕ ಹಿತಾಸಕ್ತಿಗೆ ಬಳಸಿಕೊಳ್ಳದೇ, ಚಳುವಳಿಗೆ ಧಾರೆ ಎರೆದ ಸಂಗಾತಿ ಶಿವರಾಂ.

ನೇರ-ನುಡಿ, ಬದ್ಧತೆ, ಪ್ರಾಮಾಣಿಕತೆ, ಶಿಸ್ತಿನ ಸಂಗಾತಿ ಎಂದೇ ಕರೆಸಿಕೊಳ್ಳುತ್ತಿದ್ದರು. ಬಿಡುವಿ ಚಳುವಳಿಯ ಕೆಲಸಗಳ ನಡುವೆ ವೈಯ ಜೀವನದ ಆಸೆ-ಆಕಾಂಕ್ಷೆಗಳ ಬಗೆಗೆ ಯೋಚಿ ಇವರ ಬದ್ಧತೆ, ತ್ಯಾಗ ಅನುಕರಣೀ ಸಹಸಂಗಾತಿಗಳ ಜೊತೆ ಅವರಿದ್ದ ಗಾಢ ಆತ್ಮೀ ಸಂಬಂಧ, ಕಾರ್ಯಕರ್ತರ ಜೊತೆ ಬೆರೆಯು ರೀತಿ, ಯಾವುದೇ ಕೆಲಸಗಳಿರಲಿ ಅದರ ತನ್ಮಯತೆ, ಹೊಸ ಯುವಕರ ಸಂಪರ್ಕ ಸಿ ಕೂಡಲೇ ಅವರ ಹಿಂದೆ ಬಿದ್ದು ಕಾರ್ಯಕರ್ತರನ ರೂಪಿಸುತ್ತಿದ್ದ ಅವರ ಕೆಲಸದ ವಿಧಾನ, ಒಂ ಜೊತೆ ಷೂ, ಪ್ಯಾಂಟ್-ಶರ್ಟ್‌ನಲ್ಲೆ ಜೀ ದೂಡುತ್ತಿದ್ದ ಅವರ ಸರಳತೆ, ಸಾಹಿತ್ಯ ಮಾರಾ ಬದ್ಧತೆ, ನಾಳೆಯ ಬಗ್ಗೆ ಯೋಚಿಸದ, ತ ಹಸಿವಿದ್ದರೂ ಸಹ ಸಂಗಾತಿಗಳ ಹಸಿವಿನ ಚಿಂತಿಸುತ್ತಿದ್ದ ಸಂಗಾತಿ ಶಿವರಾಂ ಇಂದು ನ ಜೊತೆಗಿಲ್ಲ. ಆದರೆ ಅವರು ಒಬ್ಬ ಪೂರ್ಣಕಾಲ ಕಾರ್ಯಕರ್ತರಿಗಿರಬೇಕಾದ 'ಮಾದರಿ'ಯ ಬಿಟ್ಟು ಹೋಗಿದ್ದಾರೆ.

ಕಾಮ್ರೇಡ್ ಶಿವರಾಂ ಅವ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜ ಎಂದರೆ ಅದು ಯುವಜನ ಚಳುವಳಿಯ ಕಟ್ಟುವುದು ಹಾಗೂ ಬದ್ಧತೆಯಿಂ ನಿಸ್ವಾರ್ಥ ಮನೋಭಾವದಿಂದ ಮನುಕು ವಿಮೋಚನೆಗಾಗಿ ಕೆಲಸ ಮಾಡುವುದೇ ಅ ಇವೆಲ್ಲವೂ

ಈ ಸಂತಾಪ ಸಭೆಯಲ್ಲಿ ಸಂಗಾತಿ ಶಿವರಾ ಅವರ ಕುರಿತು ವ್ಯಕ್ತವಾದ ಸದಭಿಪ್ರಾಯಗಳ ಡಿವೈಎಫ್ಐ ಬೆಂಗಳೂರು ದಕ್ಷಿಣ ಜಿ ಸಮಿತಿಯ ಅಧ್ಯಕ್ಷ ಕಾಂ.ಲಿಂಗರಾಜು ಸಭೆ ಅಧ್ಯಕ್ಷತೆ ವಹಿಸಿದ್ದರು.

ರಸ ಸಂಜೆ-ಸ್ಪರ್ಧೆ- 'ಕುವೆಂಪು ಬಸ್ ನಿಲ್ದಾಣ' ಉದ್ಘಾಟನೆ 'ರಾಜ್ಯೋತ್ಸವ' ಮತ್ತು 'ಡಿವೈಎಫ್ಐ' ಸ್ಥಾಪನಾ ದಿನಾಚರಣೆ



ಇತ್ತೀಚೆಗಷ್ಟೆ ಬೆಂಗಳೂರಿನ ಡಿವೈಎಫ್ಐ ಪೂರ್ವ ವಲಯ ಸಮಿತಿಯು ಆಯೋಜಿಸಿದ್ದ 'ಕರ್ನಾಟಕ ರಾಜ್ಯೋತ್ಸವ' ಹಾಗೂ 'ಡಿವೈಎಫ್ಐ ಸಂಸ್ಥಾಪನಾ ದಿನೋತ್ಸವ' ಜೊತೆಗೆ ವಿನೂತನವಾಗಿ 'ಕುವೆಂಪು ಬಸ್ ನಿಲ್ದಾಣ'ವನ್ನು ಸಾರ್ವಜನಿಕ ಸೇವೆಗೆ ಅರ್ಪಣೆ ಮಾಡುವ ಮೂಲಕ ವಿಶೇಷವಾಗಿ ಆಚರಿಸಿದ್ದು, ಈ ಕಾರ್ಯಕ್ರಮ ಡಿವೈಎಫ್ಐ ಬಗ್ಗೆ ಬಿ. ಚನ್ನಸಂದ್ರದ ಗ್ರಾಮಸ್ಥರು ಹಾಗೂ ಯುವಜನರಲ್ಲಿ ಒಂದು ವಿಶೇಷವಾದ ಕುತೂಹಲವನ್ನು ಕೆರಳಿಸಿದೆ.

ಡಿಸೆಂಬರ್ 1, 2013 ರಂದು ಬೆಳಗ್ಗೆ 9 ಗಂಟೆಗೆ ಸರಿಯಾಗಿ ಡಿವೈಎಫ್ಐ ಕಾರ್ಯಕರ್ತರು, ಯುವಕ-ಯುವತಿಯರು ಹಾಗೂ ಗ್ರಾಮಸ್ಥರು ಜೊತೆಗೆ ಮಕ್ಕಳೂ ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಸಹಾಯಕ ಪೊಲೀಸ್ ಆಯುಕ್ತ ಹೆಚ್.ಸಿದ್ದಪ್ಪ ಕನ್ನಡ ಧ್ವಜವನ್ನು ಹಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿದ್ದಂತೆ ಮಕ್ಕಳೆಲ್ಲರೂ ಕೈಯಲ್ಲಿ ಕನ್ನಡ ಬಾವುಟ ಹಿಡಿದು 'ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎಂದು ನಾಡ ಗೀತೆಯನ್ನು ಹಾಡಿದರು. ನಂತರದಲ್ಲಿ ಡಿವೈಎಫ್ಐ ಸಂಸ್ಥಾಪನಾ ದಿನದ ಅಂಗವಾಗಿ ಪೂರ್ವವಲಯದ ಸಂಚಾಲಕರಾದ ನಂಜೇಗೌಡ ಧ್ವಜಾರೋಹಣ ಮಾಡಿ ಸಿಹಿ ವಿತರಿಸಿದರು. ಕಾರ್ಯಕ್ರಮದ ಅಂಗವಾಗಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಹಾಗೂ ಮಹಿಳೆಯರಿಗೆ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಮಕ್ಕಳು ಹಾಗೂ ಈ ಭಾಗದ ಮಹಿಳೆಯರು ಉತ್ಸಾಹದಿಂದ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಬಸ್ ನಿಲ್ದಾಣ ಹಾಗೂ 'ಐನ್‌ಸ್ಟೀನ್ ಬಾಲ ಸಂಘ'ದ ಉದ್ಘಾಟನೆ - ಸಂಗೀತ ಸಂಜೆ ಕಾರ್ಯಕ್ರಮ

ಈ ಗ್ರಾಮದಲ್ಲಿ ಡಿವೈಎಫ್ಐ ಪ್ರಯತ್ನದಿಂದ 1ಲಕ್ಷ ರೂ ವೆಚ್ಚದಲ್ಲಿ 'ಕುವೆಂಪು ಬಸ್ ನಿಲ್ದಾಣ'ವನ್ನು ನಿರ್ಮಿಸಲಾಗಿದೆ. ಇದನ್ನು ಖ್ಯಾತ ಸಂಗೀತ ನಿರ್ದೇಶಕರಾದ ವಿ. ಮನೋಹರ್ ಉದ್ಘಾಟಿಸಿದರು. ಅವರು ಚಿತ್ರ ಬಿಡಿಸುವ ಮೂಲಕ 'ಐನ್‌ಸ್ಟೀನ್ ಬಾಲಸಂಘ'ವನ್ನು ಸಹ ಉದ್ಘಾಟಿಸಿದರು. ಹಾಗು ಗ್ರಾಮದ ಹಿರಿಯರಿಗೆ, ಸಾಧಕರಿಗೆ ಸನ್ಮಾನ ಮಾಡುವುದರ ಮೂಲಕ ಗೌರವಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ 'ಭೂಮಿತಾಯಿ ಬಳಗ' ತಂ ಹಾಡಿದ ಜನಪದ, ಪರಿಸರದ ಹಾಡುಗ ಜನಮನ ಸೆಳೆದವು.

ಕಾರ್ಯಕ್ರಮದಲ್ಲಿ ಡಿವೈಎಫ್ಐ ರಾಜ ಧ್ಯಕ್ಷ ಎನ್.ಎಲ್. ಭರತ್‌ರಾಜ್, ಕಾರ್ಯದರ್ಶಿ ಬಿ. ರಾಜಶೇಖರಮೂರ್ತಿ, ಅಖಿಲ ಭಾರ ಜನವಾದಿ ಮಹಿಳಾ ಸಂಘಟನೆಯ ರಾ ಉಪಾಧ್ಯಕ್ಷೆ ಗೌರಮ್ಮ, ಡಿವೈಎಫ್ಐ ಬೆಂಗಳೂ ದಕ್ಷಿಣ ಜಿಲ್ಲಾಧ್ಯಕ್ಷ ಲಿಂಗರಾಜು, ಉತ್ತ ಜಿಲ್ಲಾ ಸಂಚಾಲಕ ಪ್ರಸಾದ್, ಡಿವೈಎಫ್ ಪೂರ್ವವಲಯ ಮುಖಂಡ ಮುನಿರಾಜ ಮತ್ತಿತರರು ಭಾಗವಹಿಸಿದ್ದರು.

– ವರದಿ : ಯುವರಾಜ



ಜನಶಕ್ತಿ
ಕನ್ನಡ ವಾರಪತ್ರಿಕೆ

ಇಬ್ಬರು ಕಬ್ಬು ಬೆಳೆಗಾರರ ಪ್ರಾಣಬಲಿ ತೆಗೆದುಕೊಂಡದ್ದು ಯುಪಿಎ-2ರ 'ಮುಕ್ತ ಮಾರುಕಟ್ಟೆ' ಧೋರಣೆ-ಎಐಕೆಎಸ್

ವಂಬರ್ 27ರಂದು ಕರ್ನಾಟಕದ ಗಾವಿಯಲ್ಲಿ 60ವರ್ಷದ ಕಬ್ಬು ಬೆಳೆಗಾರ ಬ್ಬು ಬೆಳೆಗಾರರ ಒಂದು ಪ್ರತಿಭಟನಾ ರ್‍ಯಾಲಿಯಲ್ಲಿ ತ್ಮಹತ್ಯೆ ಮಾಡಿಕೊಂಡರು. ಈ ಅಂಚಿನ ರೈತನಿಗೆ ವರು ಕಳೆದ ವರ್ಷ ಪೂರೈಸಿದ 120 ಟನ್ ಬ್ಬಿಗೆ ನಿರಾಣಿ ಕಾರ್ಖಾನೆ ಇನ್ನೂ ಹಣ ಪಾವತಿ ಮಾಡದಿರುವುದೇ ಇದಕ್ಕೆ ಕಾರಣ ಎನ್ನಲಾಗಿದೆ. ದರ ಮರುದಿನ ಉತ್ತರಪ್ರದೇಶದ ಲಕಿಂಪುರಿ-ಖೇರಿ ಜಿಲ್ಲೆಯ ಬಸ್ತೋಲಿ ಗ್ರಾಮದ ಸಾಲಪೀಡಿತ ರೈತ ಸತ್ಯಪಾಲ್ ಸಿಂಗ್(40ವರ್ಷ) ಆತ್ಮ ಹತ್ಯೆ ಮಾಡಿಕೊಂಡರು.

ದೇಶಾದ್ಯಂತ ಕಬ್ಬು ಬೆಳೆಯುವ ರಾಜ್ಯಗಳಲ್ಲಿ ಬ್ಬು ಬೆಳೆಗಾರರು ಪ್ರತಿಫಲದಾಯಕ ಬೆಲೆಗಾಗಿ ಮತ್ತು ಕಾರ್ಖಾನೆಗಳು ಬಾಕಿ ಇಟ್ಟುಕೊಂಡಿರುವ ಹಣವನ್ನು ಚುಕ್ತಾ ಮಾಡಬೇಕೆಂದು ಹೋರಾಟಕ್ಕೆ ಇಳಿಯಬೇಕಾಗಿ ಬಂದಿದೆ.

ರೈತರ ಇತ್ತೀಚಿನ ಈ ಆತ್ಮಹತ್ಯೆಗಳ ಬಗ್ಗೆ ದುಃಖ ಮತ್ತು ನೋವನ್ನು ವ್ಯಕ್ತಪಡಿಸಿರುವ ಅಖಿಲ ಕಿಸಾನ್ ಸಭಾ ಇದಕ್ಕೆ ಯುಪಿಎ-2 ಸರಕಾರದ 'ಮುಕ್ತ ಮಾರುಕಟ್ಟೆ' ಧೋರಣೆಗಳೇ ಕಾರಣ ಎಂದಿದೆ. ಸಕ್ಕರೆಯ ಮಾರಾಟದ ಮೇಲಿನ ನಿಯಂತ್ರಣಗಳನ್ನು ತೆಗೆದು ಹಾಕಿರುವುದು ಮತ್ತು ಸಕ್ಕರೆ ಆಮದಿಗೆ ಸರಕಾರ ಪ್ರೋತ್ಸಾಹ ನೀಡುತ್ತಿರುವುದು. ಇಂತಹ ಧೋರಣೆಗಳ ಪ್ರಕಾರ ಎಂದು ಅದು ಹೇಳಿದೆ.

ಕರ್ನಾಟಕ, ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಕಬ್ಬು ಬೆಳೆಗಾರರು ಬಹಳಷ್ಟು ಸಂಕಟಗಳನ್ನು ಎದುರಿಸುತ್ತಿದ್ದಾರೆ. ಇದರಿಂದಾಗಿ ಒಂದೆಡೆ ಕಬ್ಬಿಗೆ ಫಲದಾಯಕ ಬೆಲೆ ಕೊಡಬೇಕು ಎಂದು ಬೆಳೆಗಾರರು ಆಗ್ರಹಿಸುತ್ತಿದ್ದರೆ, ಮತ್ತೊಂದೆಡೆಯಲ್ಲಿ ರೈತರ ಸಂಘಟನೆಗಳು ಈಗ ಸಕ್ಕರೆ ಆಮದಿನ ಮೇಲೆ ಹಾಕಿರುವ ತೆರಿಗೆ ದರವನ್ನು 15ಶೇ.ದಿಂದ 40ಶೇ.ಕ್ಕೆ ಏರಿಸಬೇಕು ಎಂದು ಬಹಳ ಸಮಯದಿಂದ ಆಗ್ರಹಿಸುತ್ತ ಬಂದಿವೆ. ಯುಪಿಎ-2 ಸರಕಾರ ಕಿವಿಮುಚ್ಚಿ ಕೂತಿರುವುದು ಈಗ ಈ ಎರಡು ರೈತರ ಬಲಿ ತೆಗೆದುಕೊಂಡಿದೆ.

ಸರಕಾರ ರೈತರ ಆಗ್ರಹಗಳಿಗೆ, ಸಂಕಟಗಳಿಗೆ ಕಿವಿಗೊಡದಿರಲು ಕಾರಣ ಅದರ 'ಆರ್ಥಿಕ ಸುಧಾರಣೆ'ಗಳ ಗೀಳು. ಇದರ ಭಾಗವಾಗಿ ಎಲ್ಲ ಕೃಷಿಸರಕುಗಳ ಮೇಲಿನ ದರಹತೋಟಿಗಳನ್ನು ತೆಗೆದು ಹಾಕಿ ಮಾರುಕಟ್ಟೆಯನ್ನು ದೇಶಿ-ವಿದೇಶಿ ವ್ಯಾಪಾರಿಗಳಿಗೆ 'ಮುಕ್ತ'ಗೊಳಿಸುವ ಕಾತುರದಲ್ಲಿ ಅದು ಇದೆ. ಇದು ನಮ್ಮ ದೇಶದ ಕೃಷಿ ವಲಯವನ್ನು ಭಾರೀ ಬಿಕ್ಕಟ್ಟಿಗೆ ತಳ್ಳಿದೆ. ಒಂದೆಡೆಯಲ್ಲಿ ಕೃಷಿ ಲಾಗುವಾಡುಗಳ ಖರ್ಚುಗಳು ಮುಗಿಲು ಮುಟ್ಟುತ್ತಿದ್ದರೆ, ಇನ್ನೊಂದೆಡೆಯಲ್ಲಿ ಸಗಟು ಮಾರುಕಟ್ಟೆಗಳಲ್ಲಿ ಕೃಷಿ ಸರಕುಗಳ ಬೆಲೆಗಳು ಕುಸಿಯುತ್ತಿವೆ.

ಈ ಪ್ರಮುಖ ಕಬ್ಬು ಬೆಳೆಯುವ ರಾಜ್ಯಗಳಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲಕರು ಬಡ ಕಬ್ಬು ಬೆಳೆಗಾರರಿಗೆ ಕೊಡಬೇಕಾದ 10,500 ಕೋಟಿ ರೂ.ಗಳಷ್ಟು ಕೊಡದೆ ಬಾಕಿ ಇಟ್ಟುಕೊಂಡಿದ್ದಾರೆ. ಬಹಳಷ್ಟು ಸಕ್ಕರೆ ಮಿಲ್ ಮಾಲೀಕರುಗಳು ಈಗ ವ್ಯಾಪಾರಿಗಳಾಗಿ ಬಿಟ್ಟಿರುವ ಕಾಂಗ್ರೆಸ್ ಅಥವ ಬಿಜೆಪಿ ರಾಜಕಾರಣಿಗಳು ಎಂಬುದು ಗಮನಾರ್ಹ.

ಈ ಬಾಕಿ ಚುಕ್ತಾಕ್ಕೆ ಮಧ್ಯಪ್ರವೇಶಿಸುವ ಬದಲು ಯುಪಿಎ-2 ಸರಕಾರ ವಿದೇಶಗಳಿಂದ 1.7ಕೋಟಿ ಟನ್ ಸಕ್ಕರೆ ಆಮದಿಗೆ ಅವಕಾಶ ಕಲ್ಪಿಸಿ ಕೊಟ್ಟಿದೆ. ಇದರಿಂದಾಗಿ ಸಗಟು ಮಾರುಕಟ್ಟೆಯಲ್ಲಿ ಸಕ್ಕ-ರೆ ಬೆಲೆ ಕೆ.ಜಿ.ಗೆ 35ರೂ.ನಿಂದ 26ರೂ.ಗೆ ಇಳಿದಿರುವುದು ಕಬ್ಬು ಬೆಳೆಗಾರರ ಮೇಲೆ ತೀವ್ರ ಹೊಡೆತ ತಂದಿದೆ.

ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾ ಯುಪಿಎ-2 ಸರಕಾರ ಕೆಲವು ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದೆ.

1. ರಂಗರಾಜನ್ ಸಮಿತಿ ಶಿಫಾರಸುಗಳ ಜಾರಿಯನ್ನು ಹಿಂದಕ್ಕೆ ಪಡೆಯಬೇಕು
2. ಸಕ್ಕರೆ ಆಮದಿನ ಮೇಲಿನ ತೆರಿಗೆಯನ್ನು 15ಶೇ.ದಿಂದ 40ಶೇ.ಕ್ಕೆ ಏರಿಸಬೇಕು, ಈ ಮೂಲಕ ಸಕ್ಕರೆ ವ್ಯಾಪಾರಿಗಳು ಮತ್ತು ರಿಫೈನರಿಗಳ ಅಗ್ಗದ ಸಕ್ಕರೆ ಆಮದನ್ನು ನಿಲ್ಲಿಸಬೇಕು.
3. ಸಕ್ಕರೆ ಮಿಲ್ಲುಗಳು ಕಬ್ಬು ಅರೆಯುವ ಕೆಲಸವನ್ನು ಕೂಡಲೇ ಆರಂಭಿಸಿ ಕಬ್ಬು ಬೆಳಗಾರರಿಗೆ ಅವು ಪಾವತಿ ಮಾಡಬೇಕಾಗಿರುವ 10,500 ಕೋಟಿ ರೂ.ಗಳನ್ನು ತಕ್ಷಣ ಚುಕ್ತಾ ಮಾಡುವಂತೆ ಸರಕಾರ ಕ್ರಮ ಕೈಗೊಳ್ಳಬೇಕು.
4. ಎಲ್ಲ ರಾಜ್ಯಸರಕಾರಗಳು ಕಬ್ಬಿಗೆ ಕನಿಷ್ಟ ಟನ್ನಿಗೆ 3600 ರೂ. ರಾಜ್ಯ ಆಡಳಿತಾತ್ಮಕ ಬೆಲೆಯೆಂದು ನಿಗದಿ ಮಾಡುವಂತೆ ಮಾಡಬೇಕು.



ಎನ್.ಕೆ. ವೇದರಾಜ

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ನಾಲ್ಕರಲ್ಲಿ ಹೀನಾಯ ಸೋಲು ಕಂಡ ಮೇಲಾದರೂ ಯುಪಿಎ-2 ಸರಕಾರ ಜನಸಾಮಾನ್ಯರಲ್ಲಿ ಹರಡಿರುವ ತೀವ್ರ ಅಸಂತೃಪ್ತಿಯನ್ನು ಗಮನಿಸಿ ತನ್ನ ಧೋರಣೆಗಳನ್ನು ಬದಲಿಸಿಕೊಳ್ಳುವ ಲಕ್ಷಣಗಳು ಸದ್ಯಕ್ಕಂತೂ ಕಾಣುತ್ತಿಲ್ಲ. ಹಣಕಾಸು ಮಂತ್ರಿಗಳು 'ಹಣಕಾಸು ಶಿಸ್ತಿ'ನ ವಿಷಯದಲ್ಲಿ ರಾಜಿಯಿಲ್ಲ ಎಂದಿದ್ದಾರೆ. ಈ 'ಶಿಸ್ತಿ'ನ ಅರ್ಥ ಜನಸಾಮಾನ್ಯರ ಸಂಕಟಗಳನ್ನು ಗಮನಿಸದಿರುವುದು ಎಂದೇ ಅರ್ಥ ತಾನೇ?

ಲೋಕಸಭೆಯ ಅಂಗೀಕಾರಕ್ಕೆ ಈ ಬಾರಿಯೂ ಕಾಯುತ್ತಿದೆ 33ಶೇ. ಮಹಿಳಾ ಮೀಸಲಾತಿ

ಮಹಿಳಾ ಮೀಸಲಾತಿ ಮಸೂದೆ ಸಂಸತ್ತಿನ ಚಳಿಗಾಲದ ಅಧಿವೇಶನದ ಲೋಕಸಭೆಯ ಅಜೆಂಡಾದಲ್ಲಿ ಇದೆ. ಆದರೆ ಈ ಬಾರಿಯಾದರೂ ಅದಕ್ಕೆ ಅಂಗೀಕಾರ ಸಿಗಬಹುದೇ ಎಂಬುದು ಪ್ರಶ್ನೆಯಾಗಿಯೇ ಉಳಿದಿದೆ. ಜಾಗತಿಕ ಮಾನವ ಹಕ್ಕುಗಳ ದಿನದಂದು(ಡಿಸೆಂಬರ್ 10) ಮಹಿಳಾ ಸಂಘಟನೆಗಳ ಮುಖಂಡರು ಪ್ರಧಾನ ಮಂತ್ರಿಗಳನ್ನು ಭೇಟಿಮಾಡಿ ಈ ಅಧಿವೇಶನದಲ್ಲಾದರೂ ಇದು ಅಂಗೀಕಾರಗೊಂಡು ಕಾನೂನಾಗಬೇಕು ಎಂದು ಆಗ್ರಹಿಸಿದ್ದಾರೆ. ಎಂದಿನಂತೆ ಪ್ರಧಾನ ಮಂತ್ರಿಗಳು ಈ ಅಧಿವೇಶನದಲ್ಲಿ ಅದಕ್ಕೆ ಅಂಗೀಕಾರ ಸಿಗುವಂತೆ ಮಾಡಲಾಗುತ್ತದೆ, ತಾವು ಈ ಬಗ್ಗೆ ವಚನಬದ್ಧರು, ಇದಕ್ಕೆ ತನ್ನ ಬೆಂಬಲವೂ ಇದೆ ಎಂದೇನೋ ಹೇಳಿದ್ದಾರೆ. ಆದರೆ ಅದು ಈಡೇರುತ್ತದೆಯೇ ಎಂಬುದು ಈಗಲೂ ಸಂದೇಹಾಸ್ಪದವಾಗಿದೆ.

ಮಹಿಳಾ ಸಂಘಟನೆಗಳು ಈ ಬಗ್ಗೆ ತಮ್ಮ ಹೋರಾಟವನ್ನು ಮುಂದುವರೆಸಲು ನಿರ್ಧಾರ ಮಾಡಿವೆ. ಇದಕ್ಕಾಗಿ ಪ್ರಚಾರ ಕಾರ್ಯವನ್ನು ಎಲ್ಲ ಮಟ್ಟಗಳಲ್ಲಿ ತೀವ್ರಗೊಳಿಸಲು ಎಲ್ಲ ಲೋಕಸಭಾ ಸದಸ್ಯರಿಗೆ ಹಾಗೂ ರಾಜಕೀಯ ಪಕ್ಷಗಳ ಮುಖಂಡರಿಗೆ ಮನವಿ ಸಲ್ಲಿಸಲು ಈ ಸಂಘಟನೆಗಳು ನಿರ್ಧರಿಸಿವೆ.

ಸಪ್ಟಂಬರ್ 1996 ರಲ್ಲಿ ಮೊದಲ ಬಾರಿಗೆ ಲೋಕಸಭೆಯಲ್ಲಿ ಮಂಡಿಸಲ್ಪಟ್ಟ ಈ ಮಸೂದೆ ನಂತರ ಮತ್ತೆ -ಮತ್ತೆ ಹೊಸದಾಗಿ ರಚನೆಗೊಂಡ ಲೋಕಸಭೆಗಳಲ್ಲಿ ಮಂಡಿಸಲ್ಪಟ್ಟಿದೆ .ಆದರೆ ಇನ್ನೂ ಅದರ ಅಂಗೀಕಾರದ ಗಳಿಗೆ ಬಂದಂತಿಲ್ಲ. 14 ವರ್ಷಗಳ ವನವಾಸದ ನಂತರ ಇದು ರಾಜ್ಯಸಭೆಯಲ್ಲೇನೋ ಹೇಗೋ ಅಂಗೀಕಾರ ಪಡೆಯಿತು. ಆದರೆ ಈ ಲೋಕಸಭೆಯ ಅವಧಿ ಮುಗಿಯುತ್ತ ಬಂದಿದ್ದರೂ ಅದಿನ್ನೂ ಅಂಗೀಕಾರಗೊಂಡಿಲ್ಲವೆಂಬುದನ್ನು ಮಹಿಳಾ ಸಂಘಟನೆಗಳ ಈ ಮನವಿ ಬಹಳ ಬೇಸರದಿಂದ ಟಿಪ್ಪಣಿ ಮಾಡಿದೆ.

ಇತ್ತೀಚೆಗೆ ಸಂಪೂರ್ಣಗೊಂಡ ಐದು ವಿಧಾನಸಭೆಗಳ ಚುನಾವಣೆಗಳು ಮತ್ತೊಮ್ಮೆ ಈ ಮೀಸಲಾತಿಯ ಮಹತ್ವವನ್ನು ನೆನಪಿಸಿಕೊಟ್ಟಿವೆ.. ದಿಲ್ಲಿ ವಿಧಾನ ಸಭೆಯ ಚುನಾಯಿತ ಸದಸ್ಯೆಯರ ಸಂಖ್ಯೆ 70 ಸದಸ್ಯರಲ್ಲಿ ಕೇವಲ ಮೂರು, ರಾಜಸ್ತಾನದಲ್ಲಿ 200ರಲ್ಲಿ 7, ಮಧ್ಯಪ್ರದೇಶದಲ್ಲಿ 230ರಲ್ಲಿ 25 ಎಂಬ ಸಂಗತಿಯತ್ತವೂ ಗಮನ ಸೆಳೆದಿರುವ ಮನವಿ ಕಾನೂನುಗಳನ್ನು ರೂಪಿಸುವ ಶಾಸಕಾಂಗದ ಸದಸ್ಯರು ತಮ್ಮ ವಚನವನ್ನು ಈಡೇರಿಸಬೇಕು ಎಂದು ಕರೆ ನೀಡಿದೆ.



ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿದ ಸುದ್ದಿಯ ಹಿಂದೆಯೇ ಅಡುಗೆ ಅನಿಲದ ದರವನ್ನು ಸಿಲಿಂಡರಿಗೆ 4ರೂ.ಗಳಷ್ಟು ಹೆಚ್ಚಿಸಿರುವ ಸುದ್ದಿ ಬಂದಿದೆ. ಹಣದುಬ್ಬರ ದರ ಸತತ ಮೂರನೇ ತಿಂಗಳಲ್ಲಿ ಏರಿರುವ ಸುದ್ದಿಯೂ ಇದರ ಬೆನ್ನ ಹಿಂದೆಯೇ ಬಂದಿದೆ. ಸಪ್ಟಂಬರಿನಲ್ಲಿ ಹಣದುಬ್ಬರ ದರ 10.7ಶೇ. ಇದ್ದದ್ದು ಅಕ್ಟೋಬರಿನಲ್ಲಿ 11.06ಕ್ಕೇ ಏರಿತ್ತು.(ಕಳೆದ ವಾರದ ಸಂಚಿಕೆ ನೋಡಿ) ಈಗ ನವಂಬರಿನಲ್ಲಿ ಅದು 11.24ಶೇ.ಕ್ಕೇರಿದೆ. ರಿಝರ್ವ್ ಬ್ಯಾಂಕಿನ ಗವರ್ನರ್ ಕೂಡ ಇದು ಕಳವಳಕಾರಿ ಎಂದಿದ್ದಾರೆ.

"ಇವರೇಕೆ ಇಡೀ ದೇಶದ ಮೇಲೆ ಸಿಟ್ಟಿಳಿಸುತ್ತಿದ್ದಾರೆ?! ಕೇವಲ ಮಧ್ಯಪ್ರದೇಶ, ಛತ್ತೀಸ್‌ಗಡ, ದಿಲ್ಲಿ, ರಾಜಸ್ತಾನದಲ್ಲಿ ಮಾತ್ರ ಬೆಲೆ ಏರಿಸಬಹುದಿತ್ತಲ್ಲ?"
– ಕೃಪೆ: ಕೀರ್ತೀಶ್ ಭಟ್,
ಬಾಮುಲಾಹಿಜಾ.ಕಾಂ

ತಿಂಗಳುಗಳಾದರೂ ಲೈಂಗಿಕ ಕಿರುಕುಳ ಕಾನೂನಿನ ಅಧಿಸೂಚನೆಯಿಲ್ಲ!

ಸಂಸತ್ತು ಅಂಗೀಕರಿಸಿದ 'ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ(ತಡೆ, ನಿಷೇಧ ಮತ್ತು ಪರಿಹಾರ) ಕಾನೂನು, 2013' ಇನ್ನೂ ಜಾರಿಗೆ ಬಂದಿಲ್ಲ. ಏಕೆಂದರೆ ಸಂಬಂಧಪಟ್ಟ ಇಲಾಖೆ ಅದರ ನಿಯಮಾವಳಿಗಳ ಅಧಿಸೂಚನೆಯನ್ನು ಇನ್ನೂ ಪ್ರಕಟಿಸಿಲ್ಲ. ತೆಹಲ್ಕಾ ಸಂಪಾದಕ ತರುಣ್ ತೇಜಪಾಲ್ ಲೈಂಗಿಕ ಹಲ್ಲೆಯ ಪ್ರಕರಣ ದೊಡ್ಡ ಸುದ್ದಿಯಾದಾಗ ಇದು ಬೆಳಕಿಗೆ ಬಂದಿದೆ.

ಈ ಕಾನೂನಿಗೆ ರಾಷ್ಟ್ರಪತಿಗಳ ಒಪ್ಪಿಗೆ ಸಿಕ್ಕಿ ಹಲವು ತಿಂಗಳುಗಳೇ ಸಂದಿವೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಈ ಕಾನೂನಿನ ಅಡಿಯಲ್ಲಿ ನಿಯಮಗಳನ್ನು ರೂಪಿಸಿ ಅದರ ಕರಡನ್ನು ಕಾನೂನು ಇಲಾಖೆಗೆ ಕನವಂಬರ್ ತಿಂಗಳಲ್ಲೇ ಕಳಿಸಿತ್ತು ಎಂದು ವರದಿಯಾಗಿದೆ. ಕಾನೂನು ಇಲಾಖೆ ಕೊನೆಗೂ ಅದನ್ನು ಪರಿಶೀಲಿಸಿ ಮೇಲ್ಮನವಿ ರಚನೆಯ ಬಗ್ಗೆ ತಕರಾರು ಎತ್ತಿತ್ತಂತೆ. ಅದರಿಂದಾಗಿ ಶ್ರಮ ಮತ್ತು ಉದ್ಯೋಗ ಇಲಾಖೆಗೆ ಆ ಕರಡನ್ನು ಕಳಿಸಲಾಗಿತ್ತು.

ತೇಜಪಾಲ್ ಪ್ರಕರಣ ನಡೆದ ಕೂಡಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತೆ ಕಾನೂನು ಇಲಾಖೆಗೆ ಇದಕ್ಕೆ ಮಂಜೂರಾತಿ ನೀಡುವಲ್ಲಿ ಇನ್ನಷ್ಟು ವಿಳಂಬ ಸಲ್ಲದು ಎಂದು ಹೇಳಿರುವುದಾಗಿ ವರದಿಯಾಗಿದೆ. ಕಾನೂನು ಇಲಾಖೆಯಲ್ಲಿ ತಿಂಗಳಾನುಗಟ್ಟಲೆ ಈ ಮಹತ್ವಪೂರ್ಣ ಕರಡು ಧೂಳು ತಿನ್ನುತ್ತಿತ್ತು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಪಾದಿಸಿದೆ ಎಂದು ಪಿಟಿಐ ವರದಿ ಮಾಡಿದೆ.

ಈ ಕಾನೂನು ಯಾವೆಲ್ಲ ಕೃತ್ಯಗಳು ಲೈಂಗಿಕ ಕಿರುಕುಳ ಎನಿಸಿಕೊಳ್ಳುತ್ತವೆ ಎಂದು ವಿಧಿಸುತ್ತದೆ. ಅಲ್ಲದೆ ಪ್ರತಿಯೊಂದು ಸಂಸ್ಥೆ ಲೈಂಗಿಕ ಕಿರುಕುಳದ ಕೇಸುಗಳನ್ನು ನಿರ್ವಹಿಸಲು ದೂರು ಸಮಿತಿಗಳನ್ನು ರಚಿಸಬೇಕು, ಅದಕ್ಕೆ ಬಂದ ದೂರುಗಳನ್ನು 90ದಿನಗಳೊಳಗೆ ಇತ್ಯರ್ಥವಾಡಬೇಕು. ಇಲ್ಲವಾದರೆ ಆ ಸಂಸ್ಥೆಯ ಪರವಾನಿಗೆ ಅಥವ ನೋಂದಣಿಯನ್ನು ರದ್ದು ಮಾಡಬಹುದಾಗಿದೆ. ಇಂತಹ ದೂರು ಸಮಿತಿಗಳಿಗೆ ನೇಮಕ ಮಾಡುವ ಸದಸ್ಯರಲ್ಲಿ ಅರ್ಧದಷ್ಟು ಮಹಿಳೆಯರಿರಬೇಕು ಎಂದೂ ವಿಧಿಸಲಾಗಿದೆ. ಯುಪಿಎ-2 ಸರಕಾರ ಇಂತಹ ಮಹತ್ವದ ಕಾನೂನುಗಳನ್ನು ಎಷ್ಟು ಹಗುರವಾಗಿ ತೆಗೆದುಕೊಳ್ಳುತ್ತದೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ ಎನ್ನಬಹುದು.

ಕಾಡಿನ ಮಕ್ಕಳ ಬದುಕು ಉಳಿಯುವ ಬಗೆ ಹೇಗೆ ?

ಕಾಡನ್ನೇ ನಂಬಿ ಕಾಡಿನೊಂದಿಗೆ ಬದುಕು ರೂಪಿಸಿಕೊಂಡಿರುವ ಆದಿವಾಸಿಗಳ ಬದುಕಿನ ಮೇಲೆ ನಾನಾ ಬಗೆಯ ಆಕ್ರಮಣಗಳು ನಡೆದಿವೆ. ಆಳುವ ಸರ್ಕಾರಗಳು, ಟಿಂಬರ್ ಮಾಫಿಯಾ, ಅರಣ್ಯ ಲೂಟಿಕೋರರು, ಕಂಟ್ರ್ಯಾಕ್ಟರುಗಳು, ಅಗ್ಗದ ಕೂಲಿಗೆ ದುಡಿಸಿಕೊಳ್ಳುವ ಶ್ರೀಮಂತರು, ಹುಸಿ ಪರಿಸರವಾದಿಗಳು ಯಾರೂ ಇವರನ್ನು ಸುಮ್ಮನೆ ಬಾಳಲು ಬಿಡುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಆದಿವಾಸಿ-ಬುಡಕಟ್ಟು ಜನರ ಬದುಕು ಉಳಿಯುವ ಬಗೆ ಹೇಗೆಂದು ಪ್ರಶ್ನಿಸುವ ಲೇಖನ.

ಎಸ್.ವೈ. ಗುರುಶಾಂತ್

ನಮ್ಮ ಭಾರತ ದೇಶದಲ್ಲಿ 550 ಬುಡಕಟ್ಟುಗಳನ್ನು ಸಂವಿಧಾನದ ಶೆಡ್ಯೂಲ್‌ನಲ್ಲಿ ಸೇರಿಸಲಾಗಿದೆ. ನಮ್ಮ ರಾಜ್ಯದಲ್ಲಿ 50 ಬುಡಕಟ್ಟುಗಳನ್ನು ಮಾತ್ರ ಗುರುತಿಸಲಾಗಿದ್ದು ಇನ್ನೂ ಹಲವಾರು ಜನಾಂಗಗಳು ಸೇರಬೇಕಿದೆ. ಆದಿವಾಸಿ-ಬುಡಕಟ್ಟು ಸಮುದಾಯಗಳು ಮೂಲ ನಿವಾಸಿಗಳು. ಕಾಡಿನ ಮಕ್ಕಳು. ಅವರಿಗೆ ಅರಣ್ಯವೆಂಬುದು ಸರ್ವಸ್ವ ಅಲ್ಲೇ ಬದುಕನ್ನು ಕಟ್ಟಿಕೊಂಡವರು ಅವರು. ಕಾಡಿನ ಉತ್ಪನ್ನಗಳನ್ನು ಆಧರಿಸಿದವರು. ಹೀಗಾಗಿ ಅರಣ್ಯ, ಅಲ್ಲಿನ ಪ್ರಾಣಿ, ಪರಿಸರವನ್ನು ಅಪಾರವಾಗಿ ಪ್ರೀತಿಸುವವರು, ಅದನ್ನು ಬೆಳೆಸಿ ತಮ್ಮ ಕಣ್ಣಿನ ಕೂಸಾಗಿ ಕಂಡು ಕಾಪಾಡುತ್ತಾ ಬಂದವರು. ದುಡಿಮೆಯನ್ನು ಹುಡುಕಿ ಬೇರೆಡೆಗಳಲ್ಲಿದ್ದರೂ ಪ್ರಕೃತಿಯ ಜೊತೆ ನಂಟು ಉಳಿಸಿಕೊಂಡವರು. ನಮ್ಮ ನಾಗರೀಕತೆ, ಸಂಸ್ಕೃತಿಗಳು ಹುಟ್ಟಿ ಬೆಳೆದು, ಬಾಳಿ ಅರಳಿ ನಿಂತದ್ದು ಇಂತಹ ಆದಿವಾಸಿ ಬುಡಕಟ್ಟುಗಳ ಮೂಲದಿಂದಲೇ. ನಮ್ಮ ಮಾನವ ಸಮಾಜ ಅಂದಿನಿಂದ ಇಂದಿನವರೆಗೆ ಏಳು ಬೀಳುಗಳನ್ನು ಕಂಡು ಹಲವಾರು ಅಗಾಧ ಸಾಧನೆಗಳನ್ನು ಮಾಡಿದೆ, ಮಾಡುತ್ತಿದೆ. ನಿಜ, ಆದರೆ ಇಂತಹ ಯುಗದಲ್ಲಿಯೂ ಕೋಟ್ಯಾಂತರ ಜನತೆ ಅದರಲ್ಲೂ ಆದಿವಾಸಿ-ಬುಡಕಟ್ಟು ಸಮುದಾಯ ಕನಿಷ್ಠ ನಾಗರೀಕ ಸೌಲಭ್ಯಗಳಿಲ್ಲದೇ ಅಮಾನವೀಯ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿರುವುದು ನಾಡಿನ ದೊಡ್ಡ ದುರಂತವಾಗಿದೆ.

ಕಷ್ಟಕರ ಜೀವನ: ಈಗಲೂ ಬಹುತೇಕ ನಮ್ಮ ಆದಿವಾಸಿ-ಬುಡಕಟ್ಟು ಜನರು ದಟ್ಟವಾದ, ದುರ್ಗಮವಾದ ಕಾಡು ಮೇಡುಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಕಾಡು ಪ್ರಾಣಿಗಳೊಂದಿಗೆ ಕಾದಾಡುತ್ತಾ, ಅವುಗಳಿಗೆ ಬಲಿಯಾಗುತ್ತಾ ಬದುಕುತ್ತಿದ್ದಾರೆ. ಶತ, ಶತಮಾನಗಳಿಂದ ಅರಣ್ಯಗಳಲ್ಲೇ ಬದುಕಿ ಬಾಳುತ್ತಾ ಬಂದಿದ್ದರೂ ಅವರಿಗೆ ಒಂದು ತುಂಡು ಭೂಮಿಯ ಮೇಲೆ ಹಕ್ಕಿಲ್ಲ. ಒಂದೆಡೆ ನೆಲೆ ನಿಂತು ಸುರಕ್ಷಿತವಾಗಿ ಜೀವನ ಮಾಡುವ ಸ್ಥಿತಿ ಇಲ್ಲ. ಅನೇಕ ಬುಡಕಟ್ಟು ಜನಾಂಗಗಳು ಇಂದಿಗೂ ನೆಲೆ ತಪ್ಪಿದ ಅಲೆಮಾರಿಗಳಾಗಿಯೇ ಇದ್ದಾರೆ. ಬುಡಕಟ್ಟು ಜನಾಂಗ ಶ್ರಮಜೀವಿಗಳು. ಆದರೆ ಅವರಿಗೆ ಸರಿಯಾದ ಆಹಾರವಿಲ್ಲ, ಪೌಷ್ಠಿಕ ಆಹಾರವಿಲ್ಲದೇ ಹಲವಾರು ರೋಗಗಳಿಗೆ ಅವರು ತುತ್ತಾಗುತ್ತಿದ್ದಾರೆ. ಚಿಕಿತ್ಸೆಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ದುಡಿದುಣ್ಣಲು ಸರಿಯಾದ ಕೆಲಸವಿಲ್ಲ. ಕೆಲಸವಿದ್ದರೂ ಸರಿಯಾದ ಕೂಲಿ, ಸಂಬಳವಿಲ್ಲ. ಆದಿವಾಸಿಗಳನ್ನು ಅತೀ ಕಡಿಮೆ ಕೂಲಿಗೆ ಹೆಚ್ಚು ದುಡಿಮೆ ಮಾಡಿಸುವ ಪ್ರವೃತ್ತಿ ಬಹುತೇಕ ಕಡೆಗಳಲ್ಲಿದೆ. ಇವರಿಗೆ ವಾಸಿಸಲು ಸ್ವಂತ ಮನೆಯಿಲ್ಲ. ಮನೆಯಿಲ್ಲದ ಕಾರಣಕ್ಕಾಗಿಯೇ ಜೀತದಾಳುಗಳಂತೆ ಬದುಕುತ್ತಿರುವುದು ಕಂಡು ಬರುವ ಸಂಗತಿ.

ನೆಲೆ ತಪ್ಪಿಸುವ ಹಲವು ಆತಂಕಗಳು:

ಹೀಗಿರುವಾಗಲೇ ಆದಿವಾಸಿ-ಬುಡಕಟ್ಟು ಜನ ಹೊಸ, ಹೊಸದಾಗಿ ಹಲವಾರು ಆತಂಕಗಳನ್ನು ಎದುರಿಸುತ್ತಲಿದ್ದಾರೆ. ಪ್ರಮುಖವಾಗಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹಲವಾರು ಯೋಜನೆಗಳನ್ನು ಪ್ರಕಟಿಸಿದ್ದು ಅದರಿಂದಾಗಿ ಬುಡಕಟ್ಟು ಸಮುದಾಯಗಳನ್ನು ಸಾವಿರಾರು ವರುಷಗಳಿಂದ ಬಾಳಿದ ಅರಣ್ಯದಿಂದಲೇ ಹೊರ ಹಾಕಲಾಗುತ್ತಿದೆ. ಕರ್ನಾಟಕವನ್ನೂ ಒಳಗೊಂಡಿರುವ ಪಶ್ಚಿಮ ಘಟ್ಟದ ಪ್ರದೇಶದ ರಕ್ಷಣೆ ಹೆಸರಿನಲ್ಲಿ ಇದೀಗ ಕಸ್ತೂರಿ ರಂಗನ್ ವರದಿಯನ್ನು ಕೇಂದ್ರ ಸರಕಾರವು ಸಾಧಕ-ಬಾಧಕಗಳ ಬಗ್ಗೆ ಯಾವುದೇ ಸಾರ್ವಜನಿಕ ಚರ್ಚೆ ಮಾಡಿ ಅಭಿಪ್ರಾಯ ಪಡೆಯದೇ ಏಕಾಏಕಿ ಅಂಗೀಕರಿಸಿ ಬಿಟ್ಟಿದೆ. ಹಲವು ಆತಂಕಗಳಲ್ಲಿರುವ ಜನರನ್ನು ಇದು ಸಹಜವಾಗಿ ಮತ್ತಷ್ಟೂ ಆತಂಕಕ್ಕೆ ತಳ್ಳಿದೆ. ಈಗಾಗಲೇ ವಿಶ್ವ ಪಾರಂಪರಿಕ ಜೀವ ವೈವಿಧ್ಯತೆಯ ತಾಣವೆಂದೂ, ಹುಲಿ ಯೋಜನೆ, ಆನೆ ಕಾರಿಡಾರ್, ರಾಷ್ಟ್ರೀಯ ಉದ್ಯಾನವನ ಮುಂತಾದ ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ, ಸಾವಿರಾರು ಜನರನ್ನು ಅಲ್ಲಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಊರುಡುವೆ ಕಾಡು, ದೇವರ ಬನದ ರಕ್ಷಣೆಯ ಹೆಸರಿನಲ್ಲಿಯೂ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ ರಸ್ತೆ, ಕುಡಿಯುವ ನೀರು, ವಿದ್ಯುತ್ ಸೌಲಭ್ಯಗಳನ್ನು ನೀಡದೇ ವಂಚಿಸಲಾಗುತ್ತಿದೆ. ಮುಖ್ಯವಾಗಿ ಆದಿವಾಸಿ-ಬುಡಕಟ್ಟು ಜನರು ನಿರ್ವಸತಿಗರಾಗಿ ಬೀದಿಗೆ ಬೀಳುತ್ತಿದ್ದಾರೆ. ದೇಶದಲ್ಲೇ ಇಂತಹ ವಿವಿಧ ಯೋಜನೆಗಳಿಗೆ ಶೇ.15ರಷ್ಟು ಈ ಸಮುದಾಯ ತೊಂದರೆಗೆ ಒಳಗಾಗಿದೆ ಎಂಬ ಸಮೀಕ್ಷೆ ಇದೆ. ಇಂತಹವರಿಗೆ ಪರಿಹಾರ ಪ್ಯಾಕೇಜ್ ಎಂಬುದೂ ವಂಚನೆಯಾಗಿದೆ. ಮುಖ್ಯವಾಗಿ ಅರಣ್ಯವಾಸಿಗಳನ್ನು ಅಲ್ಲಿಂದ ಎತ್ತಂಗಡಿ ಮಾಡುವುದೇ ಅನ್ಯಾಯ, ಕಾನೂನು ವಿರೋಧಿಯಾಗಿದೆ. ಸರ್ಕಾರಗಳು ಇದನ್ನು ಕೈ ಬಿಟ್ಟು ಅರಣ್ಯ ಹಕ್ಕುಗಳನ್ನು ರಕ್ಷಿಸಬೇಕಿದೆ.

ಭೂಮಿ ಇಲ್ಲದ ಮೇಲೆ ನೆಲೆ, ಬೆಲೆಯಾದರೂ ಎಲ್ಲಿಂದ?:

ನಮ್ಮ ಬುಡಕಟ್ಟು ಸಮುದಾಯಗಳ ದೊಡ್ಡ ವಿಭಾಗವು ಅರಣ್ಯ ವಾಸಿಗಳಾಗಿದ್ದು ಅವರ ವೃತ್ತಿ, ಜೀವನ ಅದರೊಂದಿಗೆ ಬೆಸೆದುಕೊಂಡಿದೆ. ಅಲ್ಲಿನವರಿಗೆ ಭೂಮಿಯ ಹಕ್ಕು ಇರುವುದಿಲ್ಲ. ಹಿಂದೆ ಎಡಪಕ್ಷಗಳ ಒತ್ತಡದಿಂದಾಗಿ ಅರಣ್ಯ ಹಕ್ಕು ಕಾಯ್ದೆಯನ್ನು ಅಂಗೀಕರಿಸಲಾಯಿತಾದರೂ ಅದರ ಅನುಷ್ಠಾನಕ್ಕೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಇಚ್ಛಾಶಕ್ತಿಯೇ ಇಲ್ಲವಾಗಿರುವುದರಿಂದ ಅದರ ಫಲ ಸಿಗುತ್ತಿಲ್ಲ. ಆದಿವಾಸಿ-ಬುಡಕಟ್ಟು ಜನರು ಭೂಮಿ ಹಕ್ಕಿನಂತೆ ಭೂಮಿಗಾಗಿ ಹಾಕಿದ ಅರ್ಜಿಗಳನ್ನು ಏನೇನೋ ನೆಪ ಹೇಳಿ ತಿರಸ್ಕರಿಸಲಾಗಿದೆ. 2013ರ ಮೇ ತಿಂಗಳವರೆಗಿನ ವರದಿಯಂತೆ ದೇಶದಲ್ಲಿ ಸಲ್ಲಿಕೆಯಾದ 32.48 ಲಕ್ಷ ಅರ್ಜಿಗಳಲ್ಲಿ ಪ್ರಕ್ರಿಯೆಗೆ ಪರಿಗಣಿಸಿದ್ದು 28.22 ಲಕ್ಷಗಳು. ಆದರೆ ಇದರಲ್ಲಿ ತಿರಸ್ಕೃರಿಸಿದ್ದು 15.20 ಲಕ್ಷ! ಇದರಲ್ಲಿ ಭೂಮಿ ಸಿಕ್ಕವರು ಅತ್ಯಲ್ಪ ಜನ. ಉಳಿದವುಗಳ ಗತಿ ಏನಾಯಿತೋ ತಿಳಿಯದು. ಕರ್ನಾಟಕದಲ್ಲಿಯೂ ಇದೇ ಗತಿಯನ್ನು ಕಾಣಬಹುದು. ಈಗಲೂ 2012ರ ಕಾಯ್ದೆ ತಿದ್ದುಪಡಿಯಂತೆ ಅದರ ಅನುಷ್ಠಾನಕ್ಕೆ ಇನ್ನೂ ಅನೇಕ ಕಡೆ ಗ್ರಾಮ ಸಮಿತಿಗಳನ್ನೇ ರಚಿಸಿಲ್ಲ. ಏನೇನೋ ಕಾರಣ ಹೇಳಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಹೀಗೆ ಆದಿವಾಸಿಗಳ ಹಕ್ಕನ್ನು ವಿವಿಧ ರೀತಿಯಲ್ಲಿ ನಿರಾಕರಿಸಲಾಗುತ್ತಿದೆ. ಆದರೆ ಕಾರ್ಪೋರೇಟ್ ಕಂಪನಿಗಳಿಗೆ, ರೆಸಾರ್ಟ್ ಉದ್ಯಮಕ್ಕೆಂದು ಅರಣ್ಯ ಭೂಮಿಯನ್ನು 2004 ರಿಂದೀಚೆಗೆ 70,000 ಹೆಕ್ಟೇರ್(1ಲಕ್ಷದ75,000 ಎಕರೆ) ಭೂಮಿಯನ್ನು ಪರಿವರ್ತಿಸಲಾಗಿದೆ. ಅಂದರೆ ಈ ಸರಕಾರಗಳು ಯಾರ ಹಿತ ಕಾಯುತ್ತವೆ? ಎಂದು ಪ್ರಶ್ನಿಸಬೇಕಾಗಿದೆ.



ಈಗಲೂ ತುಂಡು ಭೂಮಿಯಿರುವ ಆದಿವಾಸಿಗಳು ಆ ಭೂಮಿಯ ಮೇಲಿನ ಒಡೆತನವನ್ನೂ ನಿಜದ ಅರ್ಥದಲ್ಲಿ ಹೊಂದಿಲ್ಲ, ಅನುಭವಿಸುತ್ತಿಲ್ಲ. ಅನೇಕ ಕಡೆ ಅವರಿಗೆ ಸಾಗುವಳಿ ಪಟ್ಟವೂ ನೀಡಲಾಗಿಲ್ಲ. ನಿವೇಶನವೂ ಇಲ್ಲದಿರುವ ಕಾರಣದಿಂದ ಅವರು ತೋಟದಿಂದ ತೋಟಕ್ಕೆ ವಲಸೆ ಹೋಗುತ್ತಾರೆ. ಸಾಲದ ಬಾಧೆಯಿಂದ ನರಳುತ್ತಾರೆ. ಈ ಒಟ್ಟು ಸನ್ನಿವೇಶದಲ್ಲಿ ಅದಿವಾಸಿ-ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಕಾಯ್ದೆ ಜಾರಿಯಾಗಬೇಕು. ಭೂಮಿ ಮತ್ತು ಅರಣ್ಯದ ಮೇಲಿನ ಹಕ್ಕುಗಳು ಸಿಗಬೇಕಿದೆ. ವಾಸಕ್ಕೆ ಸ್ವಂತ ನಿವೇಶನ ಮತ್ತು ಮನೆ ನಿರ್ಮಾಣ ಮಾಡಿ ಕೊಡಲೇಬೇಕು. 30-40 ವರ್ಷಗಳ ಹಿಂದೆ ನೀಡಲಾದ ಜನತಾ ಮನೆಗಳ ಬಳಿಕ ಆ ಕುಟುಂಬಗಳ ಬೆಳವಣಿಗೆಗೆ ಅನುಗುಣವಾಗಿ ಹೊಸ ಮನೆ ನೀಡಿಲ್ಲ. ಅರಣ್ಯದಲ್ಲಿನ ಕಿರು ಉತ್ಪನ್ನಗಳ ಮೇಲಿನ ಹಕ್ಕು ಅಭಾಧಿತವಾಗಿ ಸಿಗಲೇಬೇಕು. ಈಗ ಸಿಗುತ್ತಿಲ್ಲ.



ದೌರ್ಜನ್ಯಗಳಿಗೆ ತಡೆಯಿಲ್ಲವೇ?

ಹಲವು ನೆಪಗಳನ್ನೊಡ್ಡಿ ಆದಿವಾಸಿಗಳ ಮೇಲೆ ಅರಣ್ಯ ಇಲಾಖೆ ದಬ್ಬಾಳಿಕೆ ನಡೆಸುವುದು ಸಾಮಾನ್ಯವಾಗಿ ಬಿಟ್ಟಿದೆ. ಆದಿವಾಸಿ-ಬುಡಕಟ್ಟು ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯಗಳು ನಡೆಯುತ್ತಲೇ ಇವೆ. ಅದಕ್ಕೆ ತಡೆಯಿಲ್ಲವಾಗಿದೆ. ಬುಡಕಟ್ಟು ಜನರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಜನರ ಹಿತಾಸಕ್ತಿ ಕಾಪಾಡಬೇಕಾದ ಆಡಳಿತ ವ್ಯವಸ್ಥೆ ಜನರ ಪಾಲಿಗಿಲ್ಲದೇ ಬಹುತೇಕ ಸಂದರ್ಭದಲ್ಲಿ ನಿಷ್ಕ್ರಿಯವಾಗಿದೆ.

ಆದಿವಾಸಿಗಳಿಗೆ ಕಾಣದ ಕಲ್ಯಾಣ

ಇನ್ನು ಆದಿವಾಸಿ-ಬುಡಕಟ್ಟು ಕಲ್ಯಾಣಕ್ಕೆಂದು ಶೇ.7ರಷ್ಟು ಹಣ ತೆಗೆದಿಡಲಾಗುತ್ತದೆ. ಆದರೆ ಸರಕಾರ ಸಾವಿ ಕೋಟಿ ರೂಪಾಯಿಗಳನ್ನು ಮೀಸಲಿರಿಸಿ ಅದರ ಪ್ರಯೋಜನ, ಫಲ ಮಾತ್ರ ಸಿಗು ಅವರಿಗಾಗಿ ಮೀಸಲಿಟ್ಟ ಹಣವನ್ನು ಖ ಮಾಡದೇ ಪ್ರತಿ ವರ್ಷವೂ ರ ವಾಪಾಸು ಕಳಿಸಲಾಗುತ್ತಿದೆ. ಇಲ್ಲವೇ ರೆಡೆಗೆ ವರ್ಗಾಯಿಸಲಾಗುತ್ತಿದೆ. ಬಹ ಕಡೆ ರೇಷನ್ ಕಾರ್ಡ್ ನೀಡಲಾಗು ರೇಷನ್ ಸಿಗುವುದಿಲ್ಲ. ವೃದ್ಧಾಪ್ಯ ವೇ ವಿಧವಾ ವೇತನ, ಅಂಗವಿಕಲರ ವೇ ಭಾಗ್ಯಲಕ್ಷ್ಮಿ ಯೋಜನೆ ಮುಂತಾದ ಸರಕ ಯಾವ ಸೌಲಭ್ಯಗಳೂ ಸರಿಯಾಗಿ ಸಿಗು ಇಲ್ಲ. ಮತದಾರರ ಗುರುತಿನ ಚೀಟಿ ನೀಡುತ್ತಿಲ್ಲ. ಇನ್ನು ಶಿಕ್ಷಣ ಮತ್ತು ಉದ್ಯೋಗ ಶೇ.7.5ರಷ್ಟು ಮೀಸಲಾತಿ ಇದ್ದ ಅದರ ಪ್ರಯೋಜನ ಪಡೆಯು ಸಾಧ್ಯವಾಗುತ್ತಿಲ್ಲ. ಆದ್ದರಿ ಉತ್ತಮ ಶಿಕ್ಷಣವಿಲ್ಲದೆ ಪ್ರಗತಿ ಸಾಧ್ಯವಿಲ್ಲ. ಸರಕಾರದ ಬುಡ ಜನರ ಉಪ ಯೋಜ ಅನುಷ್ಠಾನ ಸಮರ್ಪಕ ಜಾರಿಯಾಗುತ್ತಿಲ್ಲ. ಬುಡಕಟ್ಟು ಜ ಸರ್ವತೋಮುಖವಾದ ಅಭಿವೃ ಸಹಾಯಕವಾಗಿ ಯೋಜನೆಯ ರೂಪಿಸಿ ಜಾರಿಗೊಳಿಸಬೇಕಾ ಒಟ್ಟಾರೆ ಮೂಲಆದಿ ಬುಡಕಟ್ಟು ಜನಾಂಗಗಳ ಹಕ್ಕುಗಳ ಸಂರಕ್ಷಿಸುವಲ್ಲಿ ಸರಕಾರಗಳು ಹಿ ಬಿದ್ದಿವೆ, ವಿಫಲವಾಗಿವೆ.

ಪರಂಪರೆಯ ರಕ್ಷಣೆ ಆಗಲೇಬೇಕ

ಇವುಗಳ ಜೊತೆಗೆ ಆದಿವಾ ಬುಡಕಟ್ಟು ಜನತೆಯ ಪಾರಂಪರಿಕವಾದ ಅಪಾರ ಜ್ಞಾನ ಅವರ ಕಲೆ, ಸಂಸ್ಕೃತಿ, ಭಾ ಬದುಕು ಒಂದು ಅನನ್ಯವಾದು ವಿಶಿಷ್ಟವಾದುದು. ಇವುಗಳ ಸಂರಕ್ಷಿಸಿ, ಸರ್ವ ರೀತಿಯಿಂದ ಅಭಿವೃದ್ಧಿ ಪಡಿಸಲು ಸೂಕ್ತ ಕ್ರ ವಹಿಸಬೇಕಿದೆ.

ಇವೆಲ್ಲ ಆಗಬೇಕಾದಲ್ಲಿ ಆದಿವಾಸಿ ಬದುಕುವ ಹಕ್ಕು ಉಳಿಯಬೇಕ ಆದಿವಾಸಿ-ಬುಡಕಟ್ಟು ಸಮುದಾಯದ ಜ ಜಾಗೃತಿ ಬೆಳೆಯಬೇಕು. ಎಲ್ಲ ಸಮುದಾಯ ನಾವೆಲ್ಲರೂ ಒಂದೇ ಎಂಬ ಒಗ್ಗಟ್ಟು ಮೂ ಬರಬೇಕು. ಅದು ಸಾಧ್ಯವಾಗುವುದು ಜಾಗ ಮತ್ತು ಬಲಿಷ್ಠವಾದ ಸಂಘಟನೆಯಿಂದ ಮಾ ಈ ಹಿನ್ನೆಲೆಯಲ್ಲಿ ಅದಿವಾಸಿ-ಬುಡಕಟ್ಟು ಜ ಜೀವನದ ಸ್ಥಿತಿ-ಗತಿ, ಸಮಸ್ಯೆಗಳು-ಪರಿಹಾರ ಮಾರ್ಗ ಮುಂತಾದ ವಿಷಯಗಳ ಬ ಚರ್ಚಿಸಿ ಕಾರ್ಯಕ್ರಮ ರೂಪಿಸಲು ಆದಿವಾಸಿ ರಾಜ್ಯ ಮಟ್ಟದ ಸಮಾವೇಶವನ್ನು ಇದೇ 20 ಡಿಸೆಂಬರ್ 20 ಮತ್ತು 21 ರಂದು ಕೊಡ ಜಿಲ್ಲೆಯ ಮಡಿಕೇರಿಯಲ್ಲಿ ಸಂಘಟಿಸಲಾಗುತ್ತಿದ

ಆದಿವಾಸಿ-ಬುಡಕಟ್ಟು ಸಮುದಾಯ ಹಕ್ಕುಗಳಿಗಾಗಿ ಶ್ರಮಿಸುತ್ತಿರುವ ಕಾಂ. ಬೃಂ ಕಾರತ್, ಆದಿವಾಸಿ ರಾಷ್ಟ್ರೀಯ ಅಧಿಕಾ ಮಂಚ್‌ನ ರಾಷ್ಟ್ರ ನಾಯಕರಾದ ಡಾ. ಬಾಬುರಾ ಮುಂತಾದ ದೇಶದ ಮತ್ತು ರಾಜ್ಯದ ಬುಡಕ ಸಂಘಟನೆಗಳ ಮುಖಂಡರು, ವಿವಿಧ ಜಿ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕನಾ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾ ಸಂಘಟನಾ ಸಮಿತಿಯು ಈ ಸಮಾವೇಶ ಯಶಸ್ಸಿಗೆ ಶ್ರಮಿಸುತ್ತಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಜರಾತ್ ಅಭಿವೃದಿ......

11 ರಿಂದ

ದಲ್ಲಿದ್ದರೆ ಕೇರಳ 0.629 ಪಡೆದು ಮೊದಲ ದಲ್ಲಿದೆ. ಹಾಗೆ ಪಂಜಾಬ್ 0.495, ಾಚಲ ಪ್ರದೇಶ 0.491 ಮತ್ತು ಹರಿಯಾಣ ಸೂಚ್ಯಂಕ ಪಡೆದಿವೆ.

ೋಗ್ಯ

ಆರೋಗ್ಯದ ಸೂಚ್ಯಂಕವನ್ನು ಗಮನಿಸಿದರೆ ರಾತ್ 0.633 ಅಂಕಗಳೊಂದಿಗೆ ಂತದಲ್ಲೇ ಇದೆ. ಈ ವಿಷಯದಲ್ಲಿ ಳ 0.817, ಹಿಮಾಚಲ ಪ್ರದೇಶ 0.667, ಜಾಬ್ 0.650 ಮತ್ತು ಮಹಾರಾಷ್ಟ್ರ, ಮ ಬಂಗಾಳ 0.637, ತಮಿಳುನಾಡು 37 ಸೂಚ್ಯಂಕಗಳೊಂದಿಗೆ ಗುಜರಾತಿಗಿಂತ ದಿವೆ.

ಣದಲ್ಲೂ


ಶಿಕ್ಷಣ ಕ್ಷೇತ್ರದಲ್ಲೂ ಇದೇ ರೀತಿಯ ಣಿಗೆ ಕಾಣುತ್ತಿದ್ದು ಗುಜರಾತ್‌ಗೆ 77 ಸೂಚ್ಯಂಕದಿಂದ ಮೇಲೆ ಸಾಧನೆಯ ಯನ್ನಿಡಲು ಸಾಧ್ಯವಾಗಿಲ್ಲ. ಆದರೆ ಕೇರಳ 24 ತಮಿಳುನಾಡು 0.719, ಮಹಾರಾಷ್ಟ್ರ 8, ಪಂಜಾಬ್ 0.624, ಪಂಜಾಬ್ 0.622 ು ಸಾಧಿಸಿವೆ.

ಮಾನತೆಯ ನರಳಾಟ

'ಯುಎನ್‌ಡಿಪಿ'ಯು ಇತ್ತೀಚೆಗೆ ಾಯ, ಶಿಕ್ಷಣ, ಆರೋಗ್ಯಕ್ಕೆ ಸಂಬಂಧಿಸಿದ ಮಾನತೆಯನ್ನು ಸರಿದೂಗಿಸಲು ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗುರುತಿಸಿ ಅಸಮಾನತೆ ಸೂಚ್ಯಂಕದ ಆಧಾರದಲ್ಲಿ ಅದನ್ನು ಸರಿಹೊಂದಿಸುವ ಒಂದು ಹೊಸ ವಿಧಾನವನ್ನು ಅಭಿವೃದ್ಧಿಗೊಳಿಸಿಕೊಂಡಿದೆ. ಕೆಲವು ಸಂಶೋಧಕರು ಈ ವಿಧಾನಗಳನ್ನು ಅಳವಡಿಸಿಕೊಂಡು ಭಾರತದಲ್ಲಿ ರಾಜ್ಯವಾರು ಮಾನವ ಅಭಿವೃದ್ಧಿಯನ್ನು ಅಂದಾಜು ಮಾಡಿದ್ದಾರೆ. ಈ ವಿಧಾನದಲ್ಲಿ 'ಮಾನವ ಅಭಿವೃದ್ಧಿ ಸೂಚ್ಯಂಕ'ವನ್ನು 'ಅಸಮಾನತೆಯ ಸೂಚ್ಯಂಕ'ದೊಂದಿಗೆ ಹೊಂದಾಣಿಕೆ ಮಾಡಿ ಸಾಧ್ಯವಾದಷ್ಟು ವಾಸ್ತವಿಕವಾದ ಮಾನವ ಅಭಿವೃದ್ಧಿಯ ಮಟ್ಟವನ್ನು ಅಳೆಯಲು ಯತ್ನಿಸಲಾಗುತ್ತದೆ.

ಈ ಲೆಕ್ಕಾಚಾರಗಳ ಪ್ರಕಾರ ಗುಜರಾತ್‌ನ ಮಾನವ ಅಭಿವೃದ್ಧಿ ಇನ್ನಷ್ಟು ಕೆಳಹಂತಕ್ಕೆ ಜಾರುತ್ತದೆ. ಏಕೆಂದರೆ ಗುಜರಾತ್ ರಾಜ್ಯದಲ್ಲಿ ಆರ್ಥಿಕ ಅಸಮಾನತೆ ಅಂದರೆ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಇತರ ಹಲವು ರಾಜ್ಯಗಳಿಗಿಂತ ತೀವ್ರವಾಗಿದೆ.

ಹಸಿವು



ಸರ್ಕಾರ ಬಿಪಿಎಲ್ ಕಾರ್ಡ್ ಕಿತ್ತುಕೊಂಡು ಎಪಿಎಲ್ ಕಾರ್ಡ್ ಕೊಟ್ಟಿರುವುದರಿಂದ ಕಂಗಾಲಾಗಿರುವ ಗುಜರಾತ್ ಕುಟುಂಬ

ಇನ್ನೂ ಕೆಲವು ಕ್ಷೇತ್ರಗಳನ್ನು ಗಮನಿಸಿದರೆ ಗುಜರಾತ್ ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಹಸಿವು ನಿವಾರಣೆಯ ಪ್ರಶ್ನೆಯಲ್ಲಿ ಗುಜರಾತ್ ಎಲ್ಲಿದೆ ಗಮನಿಸಿ. 2008 ರಲ್ಲಿ ಭಾರತದ ರಾಜ್ಯಗಳ 'ಹಸಿವು ಸೂಚ್ಯಂಕ'ದ ಪ್ರಕಾರ ದೇಶದ 17 ದೊಡ್ಡ ರಾಜ್ಯಗಳಲ್ಲಿ ಗುಜರಾತ್ 13 ನೇ ಸ್ಥಾನದಲ್ಲಿದೆ. ಈ ಸಂಗತಿ ಗುಜರಾತ್ ಅಭಿವೃದ್ಧಿ ಕುರಿತ ಕಟ್ಟುಕಥೆಗಳು ಪೊಳ್ಳು ಎಂದು ಸಾರುತ್ತಿವೆ. ಹಸಿವು ಸೂಚ್ಯಂಕದ ಪ್ರಕಾರ ಗುಜರಾತ್ ಒಡಿಸ್ಸಾಗಿಂತ ಕೆಳಮಟ್ಟದಲ್ಲಿದೆ. ಗುಜರಾತ್ ಕೇವಲ ಜಾರ್ಖಂಡ್, ಬಿಹಾರ್, ಮಧ್ಯಪ್ರದೇಶ ರಾಜ್ಯಗಳಿಗಿಂತ ಸ್ವಲ್ಪ ಮಾತ್ರ ಉತ್ತಮ ಸ್ಥಿತಿಯಲ್ಲಿದೆ. ಆದರೆ ಜಾಗತಿಕವಾಗಿ ನೋಡುವುದಾದರೆ ಈ ಮೂರು ರಾಜ್ಯಗಳು ಇಥಿಯೋಪಿಯಾ ದೇಶಕ್ಕೆ ಸಮನಾದಂತಹ ಹಸಿವಿನ ಸ್ಥಿತಿಯನ್ನು ಹೊಂದಿವೆ.

ರಕ್ತಹೀನತೆ-ಅಪೌಷ್ಟಿಕತೆ ಏರಿದೆ

ಬಡತನವನ್ನು ಸೂಚಿಸಲು ಅಪೌಷ್ಟಿಕತೆಯನ್ನು ಒಂದು ಮಾನದಂಡವಾಗಿ ತೆಗೆದುಕೊಳ್ಳಲಾಗುತ್ತದೆ. ಗುಜರಾತ್ ರಾಜ್ಯದಲ್ಲಿ ಮಹಿಳೆಯರು ಅತ್ಯಧಿಕ ಸಂಖ್ಯೆಯಲ್ಲಿ ಅಪೌಷ್ಟಿಕತೆಯ ಸಮಸ್ಯೆಯಿಂದ ನರಳುತ್ತಿದ್ದು 1999 ರಲ್ಲಿ ಈ ಪ್ರಮಾಣ ಶೇ. 46.3 ಇದ್ದದ್ದು 2004 ರಲ್ಲಿ ಅದು ಶೇ. 55.5 ಕ್ಕೆ ಏರಿದೆ. (2006ರ 'ಮೂರನೇ ಸುತ್ತಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ) ಈ ಅಪೌಷ್ಟಿಕತೆ ಗುಜರಾತ್ ಮಕ್ಕಳಲ್ಲಿ ಶೇ. 74.5 ರಿಂದ ಶೇ. 80.1 ಕ್ಕೆ ಏರಿದೆ. ಕೆಲವು ವರದಿಗಳು ಬೆಳಕು ಚೆಲ್ಲುವ ಪ್ರಕಾರ ಗುಜರಾತ್‌ನಲ್ಲಿ ದಲಿತ ಮತ್ತು ಮಹಿಳೆಯರ ಸ್ಥಿತಿಗತಿ ಕಳೆದ ದಶಕದಲ್ಲಿ ಅತ್ಯಂತ ಹೀನಾಯ ಸ್ಥಿತಿಗೆ ಬಂದು ತಲುಪಿದೆ. ಮುಸ್ಲಿಂ ಮತ್ತು ಬುಡಕಟ್ಟು ಜನರ ಸ್ಥಿತಿ ಇದಕ್ಕಿಂತ ಭಿನ್ನವಾಗಿ ಉಳಿದಿಲ್ಲ. ●

ರ್ಥಕವಾದ ಬೆಳಗಾವಿ......

ಟ 5 ರಿಂದ

ಿವೇಶನದ ಸಂದರ್ಭದಲ್ಲಿ ಪ್ರತಿಭಟನಾ ನಿರತ ನೊಬ್ಬ ಆತ್ಮಹತ್ಯೆ ಮಾಡಿಕೊಂಡ ಮೇಲಷ್ಟೇ ಹಾರಕ್ಕೆ ಪ್ರಯತ್ನ ಮಾಡಿದ್ದು ಹೊಣೆಗೇಡಿತನದ ಮಾವಧಿ. ಅದಕ್ಕಿಂತ ಮುಖ್ಯವಾಗಿ ರೈತನ ಿನ ವಿಷಯವನ್ನು ರಾಜಕೀಯ ಬಂಡವಾಳ ಡಿಕೊಳ್ಳಲು ಎಲ್ಲಾ ರಾಜಕೀಯ ಪಕ್ಷಗಳು ರ್ಗಿಳಿದಿದ್ದು ಇವರ ಕೀಳು ಮಟ್ಟದ ಜಕೀಯಕ್ಕೆ ನಿದರ್ಶನವಾಗಿತ್ತು. ಇದಕ್ಕಿಂತ ಗಿ ಕಬ್ಬು ಬೆಳೆಗಾರರ ಸಮಸ್ಯೆಯನ್ನು ಜ್ಞಾನಿಕವಾಗಿ ಪರಿಶೀಲಿಸಿ ಅದರ ಶಾಶ್ವತ ಹಾರಕ್ಕೆ ಪ್ರಯತ್ನ ಮಾಡುವಲ್ಲಿ ಸರ್ಕಾರ, ೋಧ ಪಕ್ಷಗಳು ಮತ್ತು ಹೋರಾಟಗಾರರು ಯತ್ನ ಮಾಡದೇ ಹೋದದ್ದು ಒಂದು ರ್ಯಾಸದ ಸಂಗತಿ. ರೈತರ ಸಮಸ್ಯೆಗಳಿಗೆ ಜ್ಞಾನಿಕ ಪರಿಹಾರದ ಸೂಚನೆಗಳನ್ನು ಕೊಟ್ಟಿದ್ದ ಮಿನಾಥನ್ ವರದಿಯ ಬಗ್ಗೆ ಅಪ್ಪಿತಪ್ಪಿಯೂ ಸಂದರ್ಭದಲ್ಲಿ ಯಾರೂ ಮಾತನಾಡದಿದ್ದುದು ಶ್ಚರ್ಯಕರ ಸಂಗತಿ.

ರ್ಮಿಕ ವರ್ಗಕ್ಕೆ ದ್ರೋಹ

ಇನ್ನು ಅಸಂಘಟಿತ ಕಾರ್ಮಿಕರ ೋರಾಟಗಳಲ್ಲಿ ಒಂದು ಬೆಳಗಾವಿಯಲ್ಲೇ ಡೆದ ಪೌರಕಾರ್ಮಿಕರ ಹೋರಾಟ ಮತ್ತು ಂಗಳೂರಿನಲ್ಲಿ ನಡೆದ ಬಿಸಿಯೂಟ ರ್ಮಿಕರ ಹೋರಾಟ. ಬಹಳ ಮುಖ್ಯವಾಗಿ ಂಗಳೂರಿನಲ್ಲಿ ನಡೆದ ಬಿಸಿಯೂಟ ಕಾರ್ಮಿಕರ ದಲ್ಲಿ ಸುಮಾರು ಆರು ಸಾವಿರ ಣ್ಣು ಮಕ್ಕಳು ತಮ್ಮ ಮಕ್ಕಳ ಸಮೇತ ಬಂದು ತ 5 ದಿನಗಳ ಕಾಲ ಅನಿರ್ದಿಷ್ಟ ಧರಣಿ ನಡೆಸಿದರು. ಈ ಕುರಿತು ಸದನದಲ್ಲಿ ಯಾವೊಬ್ಬ ಸದಸ್ಯರೂ ಚಕಾರವೆತ್ತದಿರುವುದು ಅತ್ಯಂತ ಬೇಜವಾಬ್ದಾರಿತನದ ಸೂಚಕವಾಗಿತ್ತು. ಈ ಹೆಣ್ಣು ಮಕ್ಕಳು ಇವರಿಗೆ ಮತ ನೀಡಿರಲಿಲ್ಲವೆ? ಇನ್ನು ಪೌರಕಾರ್ಮಿಕರು ಅಧಿವೇಶನದ ಸ್ಥಳದಲ್ಲೇ ಪ್ರತಿಭಟನೆ ನಡೆಸಿದರೂ ಸದನದಲ್ಲಿ ಪ್ರಸ್ತಾಪವಾಗಲಿಲ್ಲ. ವಿಪರ್ಯಾಸವೆಂದರೆ ಈ ಕಾರ್ಮಿಕ ವರ್ಗದ ಹಕ್ಕುಗಳನ್ನು ದಮನ ಮಾಡುವ ಕರಾಳ ಮಸೂದೆ 'ಎಸ್ಮಾ ಕಾಯ್ದೆ' ಅಂಗೀಕಾರವಾಗುವುದರ ಮೂಲಕ ಅತ್ಯಂತ ಜನವಿರೋಧಿ ಕಾರ್ಮಿಕ ವಿರೋಧಿ ಕರಾಳ ಶಾಸನವೊಂದು ಜಾರಿಯಾದಂತಾಯಿತು. ಇದಕ್ಕೆ ವಿಧಾನ ಸಭಾಧ್ಯಕ್ಷರು ಮತ್ತು ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿದರೂ ಆ ಕರಾಳ ಮಸೂದೆ ಅಂಗೀಕಾರ ಆಗಿಹೋಯಿತು. ವಿರೋಧ ಪಕ್ಷಗಳು ತೀವ್ರ ರೀತಿಯ ಪ್ರಯತ್ನ ಮಾಡಿದ್ದರೆ ಬಹುಶಃ ತಡೆಯಬಹುದಿತ್ತು. ಆದರೆ ಅಧಿವೇಶನಕ್ಕೆ ಬಹಿಷ್ಕಾರ ಹಾಕಿದ್ದು ಮಸೂದೆ ಅನುಮೋದನೆ ಆಗಲು ಆಡಳಿತ ಪಕ್ಷಕ್ಕೆ ಸುಲಭವಾಯಿತು ಎನ್ನುವ ಭಾವನೆ ಬರುತ್ತದೆ.

ರಾಜಕೀಯ ಲಾಭದ ಯತ್ನ

ಇನ್ನು ಬಿಜೆಪಿ ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ವಿಷಯಗಳಲ್ಲೂ ರಾಜಕೀಯ ಲಾಭ ಪಡೆಯಲು ಪ್ರಯತ್ನ ಮಾಡಿದ್ದು ಅದರ ರಾಜಕೀಯ ದಿವಾಳಿಕೋರತನವನ್ನು ಪ್ರದರ್ಶಿಸಿತು. ಮುಖ್ಯವಾಗಿ ಅದು ಲೋಕಸಭೆಯಲ್ಲಿ ಮಾಡಿದ ರೀತಿಯಲ್ಲೇ ಇಲ್ಲೂ ಕೂಡಾ ನಕಾರಾತ್ಮಕ ತಂತ್ರವನ್ನು ಉಪಯೋಗಿಸಿ ವಿಷಯಗಳನ್ನು ಗಂಭೀರವಾಗಿ ಚರ್ಚೆಗೆ ಒಳಪಡಿಸಲು ಅವಕಾಶ ಕೊಡದೇ ಸದನದ ಕಾರ್ಯಕಲಾಪಗಳನ್ನು ತಡೆಯಲು ಮಾಡಿದ ಪ್ರಯತ್ನ, ಇದು ಬಿಜೆಪಿ ಪಕ್ಷದ ಕೆಟ್ಟ ಸಂಸದೀಯ ಲಕ್ಷಣಗಳನ್ನು ಪ್ರದರ್ಶಿಸಿತು. ಮುಖ್ಯವಾಗಿ ಕಬ್ಬು ಬೆಳೆಗಾರರ ಹೋರಾಟದ ಸಂದರ್ಭದಲ್ಲಿ ಅದು ನಡೆದುಕೊಂಡ ರೀತಿ ಮತ್ತು ಅವರ ನಿಲುವುಗಳು ಅತ್ಯಂತ ಅವಕಾಶವಾದಿತನದ್ದಾಗಿತ್ತು. ಇದ-ಕ್ಕೆ ಉತ್ತಮ ಉದಾಹರಣೆ ಕಬ್ಬು ಅರೆಯುವ ಕಾರ್ಖಾನೆಗಳ ಬಹುತೇಕ ಮಾಲೀಕರು ಬಿಜೆಪಿ ಮುಖಂಡರು ಮತ್ತು ಬೆಂಬಲಿಗರು. ಸರ್ಕಾರದ ತೀರ್ಮಾನಕ್ಕೆ ಸವಾಲೆಸೆದಾಗ ಬಿಜೆಪಿ ಯಾ-ಕೆ ಬಾಯಿ ಬಿಡಲಿಲ್ಲ? ಇದರ ಅರ್ಥವೇನು? ಅಂದರೆ ಇವರು ಕಬ್ಬು ಬೆಳೆಗಾರರ ಬಗ್ಗೆ ನಡೆಸಿದ ಹೋರಾಟ ಸೋಗಲಾಡಿತನದ್ದೇ? ಅಥವಾ ಇವರು ಸುರಿಸಿದ್ದು ಮೊಸಳೆ ಕಣ್ಣೀರೇ? ಇವರು ಇದರ ಬಗ್ಗೆ ರಾಜ್ಯದ ಜನತೆಗೆ ಉತ್ತರ ಕೊಡಬೇಕಾಗುತ್ತದೆ.

ಇನ್ನು ಜೆಡಿಎಸ್ ತಾನೊಂದು ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕೆಲಸ ಮಾಡುವುದನ್ನು ಬಿಟ್ಟು ಆಡಳಿತ ಪಕ್ಷದೊಂದಿಗೆ ಕೈಜೋಡಿಸಿದ್ದು ಅದರ ಅವಕಾಶವಾದಿ ರಾಜಕೀಯ ನಿಲುವುಗಳಿಗೆ ಇನ್ನೊಂದು ನಿದರ್ಶನವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಕಳಸಾ ಬಂಡೂರಿ- ಕೃಷ್ಣ ಪ್ರಶ್ನೆಗಳು

ಇನ್ನು ಬೆಳಗಾವಿಯಲ್ಲಿ ಅಧಿವೇಶನ ನಡೆಸಿದರೆ ಉತ್ತರ ಕರ್ನಾಟಕ ರಾಮರಾಜ್ಯವಾಗುತ್ತದೆ ಎಂದು ವಾದಿಸುತ್ತಿದ್ದವರು ಮತ್ತು ಅಲ್ಲಿ ಯಾವ ಪಕ್ಷ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡರೆ ಅದು ಅವರ ಸಾಧನೆಯೆಂದು ಹೆಮ್ಮೆ ಪಡುತ್ತಿದ್ದವರು, ಇವರೆಲ್ಲರೂ ಸೇರಿ ಅಲ್ಲಿ ಅಧಿವೇಶನ ನಡೆಯಲು ಪ್ರಾರಂಭವಾದಾಗಿನಿಂದ ಮೊನ್ನೆಯವರೆಗೂ ಆ ನಡೆದ ಎಲ್ಲಾ ಅಧಿವೇಶನಗಳಲ್ಲೂ ಆ ವಾದಗಳ ಮತ್ತು ಅಭಿಪ್ರಾಯಗಳ ಟೊಳ್ಳುತನವನ್ನು ಮತ್ತು ನಿರರ್ಥಕತೆಯನ್ನು ಅವರೇ ಸಾಬೀತುಪಡಿಸುತ್ತಿದ್ದಾರೆ ಮತ್ತು ಅದರ ಉದ್ದೇಶವನ್ನು ಸೋಲಿಸುತ್ತಿದ್ದಾರೆ. ಕಡೆಗೆ ಈ ಅಧಿವೇಶನದಲ್ಲಿ ಆ ಪ್ರದೇಶದ ಅತ್ಯಂತ ಪ್ರಮುಖ ಪ್ರಶ್ನೆಯಾಗಿರುವ ಕಳಸಾ-ಬಂಡೂರಿ ನಾಲಾ ವಿಷಯವಾಗಲಿ, ಕೃಷ್ಣಾ ನದಿಯ ನೀರಿನ ಉಪಯೋಗದ ಪ್ರಶ್ನೆಯಾಗಲಿ ಚರ್ಚೆಯಾಗಲೇ ಇಲ್ಲ.

ಇನ್ನು ಅಧಿವೇಶನದಲ್ಲಿ ರಾಜ್ಯ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳು, ನಿರುದ್ಯೋಗ, ಬಡತನ ಮತ್ತು ಬಹಳ ಮುಖ್ಯವಾಗಿ ಶಿಕ್ಷಣರಂಗದ ಸಮಸ್ಯೆಗಳು ಚರ್ಚೆಯಾಗುತ್ತವೆ ಎಂದು ಹೇಗೆ ನಿರೀಕ್ಷಿಸಲು ಸಾಧ್ಯ? ಹಸಿವಿನ ಸೂಚ್ಯಂಕದಲ್ಲಿ ದೇಶದ 19 ರಾಜ್ಯಗಳ ಪೈಕಿ ಕರ್ನಾಟಕ 11ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ನಾಲ್ಕರಲ್ಲಿ ಒಬ್ಬರು ಹಸಿವಿನಿಂದ ಬಳಲುತ್ತಿದ್ದಾರೆ. ಇದರ ಬಗ್ಗೆ ಎಲ್ಲಿ ಚರ್ಚೆಯಾಗಬೇಕು? ಯಾರು ಚರ್ಚೆ ಮಾಡಬೇಕು? 224 ಜನ ಶಾಸನ ಸಭಾ ಸದಸ್ಯರಲ್ಲಿ 209 ಶತಕೋಟ್ಯಾಧಿಪತಿಗಳಿರುವಾಗ ಬಡವರ ಬಗ್ಗೆ, ಬಡತನ ಬಗ್ಗೆ ಚರ್ಚೆ ಮಾಡುತ್ತಾರೆಂದು ನಿರೀಕ್ಷಿಸುವುದು ಹೇಗೆ? ಭೂಮಾಫಿಯಾ, ಗಣಿ ಮಾಫಿಯಾ, ಲಿಕ್ಕರ್ ಮಾಫಿಯಾ ಮುಖಂಡರು ಅಲ್ಲಿ ತುಂಬಿರುವಾಗ ನಿವೇಶನ, ವಸತಿ, ರೇಷನ್ ಕಾರ್ಡ್‌ಗಳ ಬಗ್ಗೆ ಚರ್ಚೆ ಮಾಡುತ್ತಾರೆಂದು ನಿರೀಕ್ಷಿಸಲು ಸಾಧ್ಯವೇ ಇಲ್ಲ. ಹಾಗಾಗಿ 6 ಕೋಟಿ ಜನರ ಆಶೋತ್ತರಗಳು, ಸಮಸ್ಯೆಗಳು ಇಲ್ಲಿ ಚರ್ಚೆಯಾಗದೇ ನಿರರ್ಥಕ ಅಧಿವೇಶನವಾಗಿ ಮಾರ್ಪಾಟಾಯಿತು.

ಒಂದು ಸ್ವಾಗತಾರ್ಹ ಕೆಲಸ

ಇಡೀ ಅಧಿವೇಶನದಲ್ಲಿ ಸ್ವಾಗತಾರ್ಹವಾದ ಒಂದು ಕೆಲಸವಾಗಿರುವುದೆಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಬೇರೆ ಉದ್ದೇಶಗಳಿಗೆ ಉಪಯೋಗಿಸಬಾರದು, ದುರುಪಯೋಗವಾದರೆ ಸಂಬಂಧಪಟ್ಟವರಿಗೆ ಶಿಕ್ಷೆಯಾಗತಕ್ಕದ್ದು ಎನ್ನುವ ಒಂದು ಕಾಯ್ದೆ ಅನುಮೋದನೆ ಆಗಿದ್ದು.

JANASHAKTHI KANNADA VARA PATRIKE DEC 22, 2013 Price : Rs. 10/- RNI No. KARKAN /2006/17926 Posted on ever
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. W

ದ್ಯಾವ್ರೇ : ಬದುಕು ನರಕವಾದಾಗ ಜೈಲೇ ಸ್ವರ್ಗ.

ಒಂದೇ ಒಂದು ಕಿಂಡಿ ಕೊಡಿ ಸಾಕು .... ದ್ಯಾವ್ರೇ ಎಂದು ಕೂಗುವ ಖೈದಿಗಳು ಒಂದು ಕಡೆ, ಮತ್ತೊಂದು ಕಡೆ ಜೈಲಿನಿಂದ ಹೊರಬಂದ ದ್ಯಾವಣ್ಣನಿಗೆ ಜೈಲೇ ಸ್ವರ್ಗ. ಹೊರಗಡೆ ಬದುಕು ನರಕವೆಂದು ಮತ್ತೇ ಜೈಲು ಸೇರುವ ತವಕ, ಈ ಮಾನಸಿಕ ತೊಳಲಾಟಗಳು. ಜೈಲಿನಲ್ಲಿಯೇ ಇದ್ದು ತಮ್ಮ ವರ್ತಮಾನದ ಬಗ್ಗೆ ಕನಸು ಕಾಣುವ ಖೈದಿಗಳು, ಎಲ್ಲಾ ಖೈದಿಗಳು ಕೆಟ್ಟವರಲ್ಲ ಅವರಲ್ಲೂ ಸಹ ಒಂದು ಪುಟ್ಟ ಮಗುವಿನ ಮನಸ್ಸಿದೇ ಆ ಮನಸ್ಸನ್ನು ಜಾಗೃತಗೊಳಿಸಿದರೆ ಅವರು ಸಹ ಉತ್ತಮ ಪ್ರಜೆಗಳಾಗಿ ಬದಲಾಗುತ್ತಾರೆಂಬ ಧ್ಯೇಯದಿಂದ ಅವಕಾಶ ಸಿಕ್ಕಿದಾಗಲೆಲ್ಲ ಖೈದಿಗಳನ್ನು ತಿದ್ದುವ ಜೈಲರ್, ಇಂತಹ ಹಲವಾರು ಮಾನವೀಯ ಮೌಲ್ಯಗಳ ಜೊತೆಗೆ ಆರಂಭದಿಂದ ಅಂತ್ಯದ ವರೆಗೂ ಸಾಗುತ್ತದೆ ದ್ಯಾವ್ರೆ ಸಿನಿಮಾ.



ಪತ್ರಕರ್ತೆ ಶೃತಿ ಕಾಳಪ್ಪನವರು ಜೈಲಿನ ಖೈದಿಗಳನ್ನು ಸಂದರ್ಶನ ಮಾಡಲು ಜೈಲಿಗೆ ಬರುತ್ತಾರೆ. ಅಲ್ಲಿ ಜೈಲಿನ ಖೈದಿಗಳು ತಮ್ಮ ತಮ್ಮ ಭೂತಕಾಲದ ಕಥಾನಕಗಳನ್ನು ಒಬ್ಬೊಬ್ಬರಾಗಿ ಬಿಚ್ಚಿಡುತ್ತಾರೆ. ಪರಿಸ್ಥಿತಿಯ ಕೈಗೊಂಬೆಗಳಾಗಿ ಜೈಲಿಗೆ ಬಂದವರು, ತಮ್ಮದಲ್ಲದ ತಪ್ಪಿಗೆ ಜೈಲಿಗೆ ಬಂದವರು, ದ್ವೇಷದ ಜ್ವಾಲೆಯಿಂದ ಬೆಂದು ಜೈಲು ಸೇರಿದವರು ಹೀಗೆ ವಿವಿಧ ಜನರು ಸಿಗುತ್ತಾರೆ. ಅವರಲ್ಲಿ ಬಹುಪಾಲು ಮಂದಿ ಜೈಲಿನಿಂದ ಹೊರಹೋದ ನಂತರ ತಮ್ಮ ಜೀವನವನ್ನು ಇತರೆ ಜನರಂತೆ ಕಟ್ಟಿಕೊಳ್ಳುವ ಕನಸುಗಳನ್ನು ಕಾಣುತ್ತಿರುತ್ತಾರೆ. ಇವರೆಲ್ಲರಿಗೂ ಬೆನ್ನೆಲುಬಾಗಿ ಇವರನ್ನು ಹೊರ ಸಮಾಜದಲ್ಲಿ ಗೌರವಾನ್ವಿತರಾಗಿ ರೂಪಿಸಬೇಕೆಂಬ ಆಸೆಯಿಂದ ಕರ್ತವ್ಯ ನಿರ್ವಹಿಸುತ್ತಿರುವವರು ಜೈಲರ್ ಕೃಷ್ಣದ್ವೈಪಾಯನ ಭೀಮಸೇನ ಖೈದಿಗಳ ಜೊತೆ-ಯಾಗುತ್ತಾರೆ. ಆದರೆ ಕಥೆಗೆ ತಿರುವು ಸಿಗುವುದು ಜೈಲಿನ ಗೋಡೆ ಕುಸಿಯುವುದರಿಂದ, ತಮ್ಮ ಮನೆಯವರನ್ನು, ಹೆಂಡತಿ-ಮಕ್ಕಳನ್ನು ನೋಡಬೇಕೆಂದು ಬಯಸಿ ಒಂದೇ ಒಂದೇ ಕಿಂಡಿ ಕೊಡು ದೇವರೇ ಎಂದು ಕೂಗುತ್ತಿದ್ದ ಖೈದಿಗಳು ತಾನಾಗಿಯೇ ಬಂದ ಈ ಸದಾವಕಾಶವನ್ನು ಕಳೆದುಕೊಳ್ಳಲು ಇಷ್ಟಪಡುವುದಿಲ್ಲ, ಖೈದಿಗಳು ಜೈಲಿನಿಂದ ತಪ್ಪಿಸಿಕೊಳ್ಳುತ್ತಾರೆ. ಈ ವಿಷಯ ತಿಳಿಯುತ್ತಿದ್ದಂತೆ ಖಳ ರಾಜಕಾರಣಿ ಮತ್ತು ಬಂಧಿಖಾನೆ ಸಚಿವರು ತನ್ನ ಭ್ರಷ್ಟಾಚಾರ ಮತ್ತು ಲಂಪಟತನವನ್ನು ಮುಚ್ಚಿಹಾಕಲು ತಪ್ಪಿಸಿಕೊಂಡ ಖೈದಿಗಳನ್ನು ಎನ್‌ಕೌಂಟರ್ ಹೆಸರಿನಲ್ಲಿ ಸಾಯಿಸಲು ಪೋಲಿಸ್ ಅಧಿಕಾರಿಗೆ ಸುಫಾರಿ ನೀಡುತ್ತಾನೆ, ಈ ಕಡೆ ಅವರಿಗೆ ತಿಳಿಯದಂತೆ ತಪ್ಪಿಸಿಕೊಂಡು ಹೋದ ಖೈದಿಗಳನ್ನು ಮತ್ತೇ ಜೈಲಿಗೆ ತಂದು ಅವರ ಪ್ರಾಣ ರಕ್ಷಣೆಮಾಡುವ ಪ್ರಯತ್ನವನ್ನು ಜೈಲರ್ ಭೀಮಸೇನ ಮಾಡುತ್ತಿದ್ದರೆ ಮತ್ತೊಂದೆಡೆ ಎನ್‌ಕೌಂಟರ್ ಹೆಸರಿನಲ್ಲಿ ಖೈದಿಗಳನ್ನು ಸಾ... ಹಿರಿಮೆಯನ್ನು ಹೆಚ್ಚಿಸಿಕೊಳ್ಳುವ ... ಪೋಲಿಸ್ ಅಧಿಕಾರಿ ಸಮಂತ ... ಇವರಿಬ್ಬರಲ್ಲಿ ಯಾರು ಅಳಿಯುತ್ತಾ... ಉಳಿಯುತ್ತಾರೆ ಎಂಬು... ಮುಂದಿನ ಕಥೆ.



'ಲೂಸಿಯಾ' ಚಿತ್ರದ... ಯೋಗರಾಜ್ ಭಟ್ ... ಟೀಮ್ ಮತ್ತೊಂದು ಸದ... ಚಿತ್ರವನ್ನು ನೀಡಿದ್ದಾರೆ. ... ಚಿತ್ರ ಇಷ್ಟವಾಗಲು ... ಕಾರಣಗಳಿವೆ, ಇಬ್ಬರು ... ಅಧಿಕಾರಿಗಳ ನಡುವಿನ ... ನಿಲುವುಗಳು, ಒಬ್ಬನಲ್ಲಿನ ... ಮತ್ತೊಬ್ಬನಲ್ಲಿನ ಮ... ಮೌಲ್ಯಗಳು, ಅಪರ... ಜೈಲು ಸೇರಿದ ಖೈದಿಗಳ ... ತೊಳಲಾಟಗಳನ್ನು, ಅವ... ಭವಿಷ್ಯ, ವರ್ತಮಾನಗಳ ಚಿತ್ರಣವನ್... ಕಟ್ಟುವಂತೆ ನಿರೂಪಿಸಿರುವ ನಿರ್ದೇಶ... ಪ್ರೌಢಿಮೆ, ಯಾವುದೇ ಏರುಪೇರ... ಪ್ರೇಕ್ಷಕನನ್ನು ತನ್ನೊಳಗೆ ಬರ... ಚಿತ್ರಕಥೆ, ಎಲ್ಲೂ ತನ್ನ ಫ... ಕಳೆದುಕೊಳ್ಳದಿರುವ ಹಿನ್ನೆಲೆ ಸಂಗೀ... ಛಾಯಾಗ್ರಹಣ. ಸಿನಿಮಾದ ತಾರಾ... ನೋಡುವುದಾದರೆ ಮೊದಲ ... ಸಿನಿಮಾದಲ್ಲಿ ಅಭಿನಯಿಸಿದ ಯೋ... ಭಟ್‌ರವರು ಜೈಲರ್ ಕೃಷ್ಣದ್ವೈ... ಭೀಮಸೇನನಾಗಿ ತಮ್ಮಲ್ಲಿ ಅಡಗಿದ್ದ ... ಕನ್ನಡದ ಚಿತ್ರಮಂದಿಗೆ ಪರಿಚಯಿ... ಇನ್ನುಳಿದಂತೆ ನಿನಾಸಂ ಸತೀಶ್ ... ಮನುಷ್ಯನಾಗಿ, ಅರಸು ಮಹಾರಾಜ್ ... ಕಾರಣಿ ಕಂ ಖೈದಿಯಾಗಿ, ಭ್ರಷ್ಟಮಂ... ಮೈಕೊ ನಾಗರಾಜ್, ವಿಲನ್ ಪೋ... ಸತ್ಯ ತಮ್ಮ ಪಾತ್ರಗಳಿಗೆ ಜೀವ ತು... ಇನ್ನುಳಿದ ನಟರನ್ನು ಕಡೆಗಣಿಸುವಂತಿಲ್ಲ... ಸದಾಭಿರುಚಿಯ ಚಿತ್ರವನ್ನು ನೋಡ... ಬಯಸುವ ಪ್ರೇಕ್ಷಕನಿಗೆ ದ್ಯಾವ್ರೆ ಚಿತ್ರ ಇಷ್ಟ... ಇರಲಾರದು.



ಆಳುವ ಜನರಿಗೆ ಕಾರ್ಮಿಕ ವರ್ಗದ ಎಚ್ಚರಿಕೆ





ಬೆಲೆ ಏರಿಕೆ ನಿಯಂತ್ರಣಕ್ಕಾಗಿ, ಗುತ್ತಿಗೆ ಕಾರ್ಮಿಕ ಪದ್ಧತಿ ರದ್ಧತಿಗಾಗಿ, ಕನಿಷ್ಟ ಕೂಲಿ ರೂ.10000/-ಕ್ಕಾಗಿ ಆಗ್ರಹಿಸಿ, ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ಖಾಸಗೀಕರಣ ಮುಂತಾದ ಜನವಿರೋಧಿ ನೀತಿಗಳ ವಿರೋಧಿಸಿ 12, ಡಿಸೆಂಬರ್-2013 ರಂದು ನವದೆಹಲಿಯಲ್ಲಿ ಕಾರ್ಮಿಕರ ಸಂಘಟನೆಗಳ ಬೃಹತ್ ಐಕ್ಯ ಪ್ರತಿಭಟನಾ ಪ್ರದರ್ಶನ. ಕೇಂದ್ರ ಕಾರ್ಮಿಕ ಸಂಘಟನೆಗಳಾದ ಬಿಎಂಎಸ್, ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಲ್‌ಪಿಎಫ್, ಟಿಯುಸಿಸಿ, ಎಐಸಿಸಿಟಿಯು, ಎಐಯುಟಿಯುಸಿ, ಯುಟಿಯು ಮತ್ತು ಬ್ಯಾಂಕು, ವಿಮಾ, ಸರಕಾರಿ ನೌಕರ ಸಂಘಟನೆಗಳ ಸಹಸ್ರಾರು ಕಾರ್ಯಕರ್ತರು ಮುಖಂಡರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross,,Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, BANGALORE-560086 Editor : **NITHYANANDASWAMI** EMS Bhavana, No.37/A, 8th C...